ಸಂಪುಟ: 06 ಸಂಚಿಕೆ: 75 ಪುಟಗಳು: 08 ಶುಕ್ರವಾರ 29 ಮೇ 2026
www.udayavahini.in epaper.udayavahini.in Udaya vahini news Udaya vahini news Udayavahini news youGÓ...qbe udayavahininews@gmail.
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**

ಯಾರು ಏನೇನು ಮಾಡ್ತಾ ಇದ್ದಾರೆ, ಹೇಗೆ, ಯಾಕೆ ಇತ್ಯಾದಿ ಅನವಶ್ಯಕ ವಿವರಗಳಿಂದ ದೂರ ಇದ್ದಷ್ಟೂ ಒತ್ತಡ ಕಮ್ಮಿಯಾಗಿ ಸುಖ ಹೆಚ್ಚುತ್ತದೆ .

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಬೆಂಗಳೂರಿನ ಇಸ್ತ್ರಿ ದರ ಕೇಳಿ ಬೆಚ್ಚಿಬಿದ್ದ ನೋಯ್ಡಾ ನಿವಾಸಿ; ವೈರಲ್ ಆಯ್ತು ಪೋಸ್ಟ್

• ಉದಯವಾಹಿನಿ, ಬೆಂಗಳೂರು

ದೇಶದ ಪ್ರಮುಖ ಮೆಟ್ರೋ ನಗರಗಳಲ್ಲಿ ಜೀವನ ವೆಚ್ಚ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದು, ಮನೆ ಬಾಡಿಗೆ, ದಿನಸಿ, ಪ್ರಯಾಣ ಮಾತ್ರವಲ್ಲದೆ ಸಾಮಾನ್ಯ ಸೇವೆಗಳ ದರವೂ ಜನರನ್ನು ಅಚ್ಚರಿಗೊಳಿಸುತ್ತಿದೆ. ಇದೀಗ ಬೆಂಗಳೂರಿನ ಇಸ್ತ್ರಿ ದರದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ನಡೆದ ಚರ್ಚೆ ಭಾರೀ ವೈರಲ್ ಆಗಿದೆ. ನೋಯ್ಡಾದಿಂದ ಇತ್ತೀಚೆಗಷ್ಟೇ ಸಿಲಿಕಾನ್ ಸಿಟಿ ಬೆಂಗಳೂರಿಗೆ ಶಿಫ್ಟ್ ಆದ 'ಸಜಿತ್ ಪೈ' ಎಂಬ ಸಾಹಸೋದ್ಯಮ ಬಂಡವಾಳಶಾಹಿ , ಇಲ್ಲಿನ ಬಟ್ಟೆ ಇಸ್ತ್ರಿ ದರವನ್ನು ನೋಡಿ ದಂಗಾಗಿದ್ದಾರೆ. ಈ ಅನುಭವವನ್ನು ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ತಮ್ಮ ಪೋಸ್ಟ್‌ನಲ್ಲಿ ಸಜಿತ್ ಪೈ, ''ನಾನು ಇದೇ ತಿಂಗಳ ಆರಂಭದಲ್ಲಿ ಬೆಂಗಳೂರಿಗೆ ಬಂದೆ. ಇಲ್ಲಿ ನನಗೆ ಅತಿ ಹೆಚ್ಚು ಶಾಕ್ ನೀಡಿದ ಸಂಗತಿ ಎಂದರೆ ಬಟ್ಟೆ ಇಸ್ತ್ರಿಗೆ ತೆಗೆದುಕೊಳ್ಳುವ ಹಣ'' ಎಂದು ಬರೆದಿದ್ದಾರೆ. ಅವರ ಪ್ರಕಾರ, ನೋಯ್ಡಾದಲ್ಲಿ ಪ್ರತಿ ಬಟ್ಟೆಗೆ ಕೇವಲ 5 ರೂ. ಕೊಟ್ಟರೆ ಸಾಕಾಗುತ್ತಿತ್ತು.

## ವಿಪಕ್ಷ ಅಶೋಕ್ ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು

ಸಂಕಟ ಬಂದಾಗ ವೆಂಕಟರಮಣ ಎನ್ನುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಮ ಕುರ್ಚಿಗೆ ಕಂಟಕ ಬಂದಾಗಲೆಲ್ಲಾ ಜಾತಿ ಜನಗಣತಿ ವರದಿ ಎಂಬ ಮಂಕುಬೂದಿ ಎರಚಿ ಜನರ ಅನುಕಂಪ ಗಳಿಸುವ ಕುತಂತ್ರ ಈಗ ಯಾರಿಗೂ ಗುಟ್ಟಾಗಿ ಉಳಿದಿಲ್ಲ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್ ವಾಗ್ದಾಳಿ ನಡೆಸಿದ್ದಾರೆ. ತಮ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ನಿರ್ಗಮಿತ ಸಿ.ಎಂ.ಸಿದ್ದರಾಮಯ್ಯ ವಿರುದ್ಧ ಪೋಸ್ಟ್ ಮಾಡಿರುವ ಅವರು, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾದ ಪರಿಸ್ಥಿತಿ ಎದುರಾದ ಕ್ಷಣದಲ್ಲಿ, ಅಧಿಕಾರದ ಕೊನೆಯ ದಿನಗಳಲ್ಲಿ ತರಾತುರಿಯಲ್ಲಿ ಜಾತಿ ಜನಗಣತಿ ವರದಿ ಸ್ವೀಕರಿಸುವುದು, ಅದರ ಮಾಹಿತಿಯನ್ನು ಮಾಧ್ಯಮಗಳಿಗೆ ಸೋರಿಕೆ ಮಾಡುವುದು ಇದನ್ನು ಆಷಾಢಭೂತಿತನ, ರಾಜಕೀಯ ಬೂಟಾಟಿಕೆ ಅನ್ನದೇ ಇನ್ನೇನು ಹೇಳಲು ಸಾಧ್ಯ, ಎಂದು ಪ್ರಶ್ನಿಸಿದ್ದಾರೆ.ನಿಮ ಆಡಳಿತ ವಿಫಲವಾಗಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪರವಾದ ವಾತಾವರಣ ಇಲ್ಲ. ಸರ್ಕಾರದ ವಿರುದ್ಧ ಸ್ಪಷ್ಟ ಆಡಳಿತ ವಿರೋಧಿ ಅಲೆ ಇದೆ. ಹೈಕಮಾಂಡ್ ಬಳಿ ಛೀಮಾರಿ ಹಾಕಿಸಿಕೊಂಡು ಒಲ್ಲದ ಮನಸ್ಸಿನಿಂದ ರಾಜೀನಾಮೆ ಕಡೆಗೆ ಸಾಗುತ್ತಿರುವ ಸಿದ್ದರಾಮಯ್ಯನವರು, ಕನಿಷ್ಠ ಈಗಲಾದರೂ ತಮ ತುಷ್ಟೀಕರಣ ರಾಜಕಾರಣ ಮತ್ತು ಢೋಂಗಿ ಸಮಾಜವಾದದ ಬಗ್ಗೆ ಆತಾವಲೋಕನ ಮಾಡಿಕೊಳ್ಳುತ್ತಾರೆ, ಪಶ್ಚಾತಾಪ ಪಡುತ್ತಾರೆ ಎಂದು ಭಾವಿಸಿದ್ದೆ. ಆದರೆ ಕುರ್ಚಿ ಬಿಡುವ ಕೊನೆಯ ಕ್ಷಣದಲ್ಲೂ ಕೂಡ ಓಲೈಕೆ ರಾಜಕಾರಣ ಮುಂದುವರಿಸಿ ತಮ್ಮ ಭಂಡತನವನ್ನು ಮತ್ತೊಮೆ ಪ್ರದರ್ಶಿಸಿದ್ದಾರೆ ಎಂದು ಕಿಡಿಕಾರಿದ್ದಾರೆ. ಮೊದಲನೆಯದಾಗಿ, ಇಷ್ಟು ದೊಡ್ಡ ಪ್ರಮಾಣದ ದತ್ತಾಂಶವನ್ನು ಕೇವಲ ಕೆಲ ಗಂಟೆಗಳಲ್ಲಿ ಸಂಸ್ಕರಿಸಿ ಅಂತಿಮ ವರದಿ ರೂಪಿಸುವುದು ಅಸಾಧ್ಯ.

## ಬೆಂಗಳೂರು ಮೆಟ್ರೋಗೆ ಬಂಗಾಳ ಎಲೆಕ್ಷನ್ ಶಾಕ್

• ಉದಯವಾಹಿನಿ, ಬೆಂಗಳೂರು

ನಗರದ ಜನತೆಯ ಬಹುನಿರೀಕ್ಷಿತ ನಮ್ಮ ಮೆಟ್ರೋ ಪಿಂಕ್ ಮತ್ತು ಬ್ಲೂ ಲೈನ್ ಮಾರ್ಗಗಳ ಉದ್ಘಾಟನೆಗೆ ಪಶ್ಚಿಮ ಬಂಗಾಳದ ಚುನಾವಣೆ ದೊಡ್ಡ ಮಟ್ಟದ ಬ್ರೇಕ್ ಹಾಕಿದೆ. ಮತದಾನ ಮಾಡಲು ಸ್ವಗ್ರಾಮಗಳಿಗೆ ತೆರಳಿದ ಸುಮಾರು 10 ಸಾವಿರಕ್ಕೂ ಹೆಚ್ಚು ಬಂಗಾಳಿ ಕಾರ್ಮಿಕರು ಇನ್ನು ಬೆಂಗಳೂರಿಗೆ ಮರಳಿ ಬಾರದ ಹಿನ್ನೆಲೆಯಲ್ಲಿ ಮೆಟ್ರೋ ಕಾಮಗಾರಿಗಳು ಸಂಪೂರ್ಣ ಸ್ಥಗಿತಗೊಳ್ಳುವ ಹಂತಕ್ಕೆ ತಲುಪಿವೆ. ಪಶ್ಚಿಮ ಬಂಗಾಳದಲ್ಲಿ ಏಪ್ರಿಲ್ 23 ಮತ್ತು 29 ರಂದು ಎರಡು ಹಂತಗಳಲ್ಲಿ ವಿಧಾನಸೌಧ ಚುನಾವಣೆ ನಡೆದು, ಮೇ 4 ರಂದು ಫಲಿತಾಂಶ ಕೂಡ ಪ್ರಕಟವಾಗಿದೆ. ನಮ್ಮ ಮೆಟ್ರೋ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದ ಬಹುತೇಕ ಕಾರ್ಮಿಕರು ಪಶ್ಚಿಮ ಬಂಗಾಳದವರಾಗಿದ್ದಾರೆ. ಚುನಾವಣೆಯಲ್ಲಿ ಮತ ಚಲಾಯಿಸಲು ಬೆಂಗಳೂರಿನಿಂದ ಹೋದ ಸಾವಿರಾರು ಕಾರ್ಮಿಕರು ವಾರಗಳು ಕಳೆದರೂ ಇನ್ನು ಕೆಲಸಕ್ಕೆ ಹಾಜರಾಗಿಲ್ಲ.

## ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಭಾರಿ ಗಾಳಿ ಮಳೆ: ಹವಾಮಾನ ಇಲಾಖೆ ಮುನ್ಸೂಚನೆ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಹಲವೆಡೆ ಮಳೆ ಮುಂದುವರೆದಿದೆ. ಕರಾವಳಿ ಉತ್ತರ ಹಾಗೂ ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಇನ್ನೂ ಕೆಲವು ದಿನಗಳ ಕಾಲ ಗುಡುಗು, ಬಿರುಗಾಳಿ ಸಹಿತ ವರ್ಷಧಾರೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡದ ಹಲವೆಡೆ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಒಳನಾಡಿನ ವಿಜಯಪುರ, ರಾಯಚೂರು, ಬೀದರ್, ಕಲಬುರ್ಗಿ, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಗಂಟೆಗೆ 50 ರಿಂದ 60 ಕಿ.ಮೀ ವೇಗದಲ್ಲಿ ಬಲವಾದ ಗಾಳಿ ಬೀಸಲಿದ್ದು, ಸಾಧಾರಣ ಮಳೆ ನಿರೀಕ್ಷಿಸಲಾಗಿದೆ.

ಧಾರವಾಡ, ಬಾಗಲಕೋಟೆ, ಬೆಳಗಾವಿ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಗಂಟೆಗೆ 40 ರಿಂದ 50 ಕಿ.ಮೀ ವೇಗದ ಗಾಳಿಯೊಂದಿಗೆ ಭಾರಿ ಮಳೆಯಾಗುವ ನಿರೀಕ್ಷೆಯಿದೆ. ದಕ್ಷಿಣ ಒಳನಾಡು ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಗಾಳಿ ಸಹಿತ ಭಾರಿ ಮಳೆಯಾಗಲಿದೆ.

# ಸಿಎಂ ಸಿದ್ದು ವಿದಾಯದ ಕಣ್ಣೀರು ಡಿಕೆಶಿ ಪರ್ವ ಶುರು



1 ತಮ್ಮ ರಾಜೀನಾಮೆ ಬೆನ್ನಲ್ಲೇ ಸುದ್ದಿಗೋಷ್ಠಿ

2 ಭಾವುಕ ಮಾತುಗಳನ್ನಾಡಿದ ಸಿದ್ದರಾಮಯ್ಯ

3 ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರು ಎಂಬ ಯಕ್ಷಪ್ರಶ್ನೆಗೆ ನೇರವಾಗಿ ಹೆಸರು ಹೇಳದ ಹಾಲಿ ಸಿಎಂ

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಕಾರಣದಲ್ಲಿ ಕಳೆದ ಕೆಲವು ದಿನಗಳಿಂದ ಮುಂದುವರಿದಿದ್ದ ತೀವ್ರ ಕುತೂಹಲ ಮತ್ತು ಹೈಡ್ರಾಮಾಗೆ ಕೊನೆಗೂ ಭಾವುಕ ತೆರೆ ಬಿದ್ದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ಅಧಿಕೃತವಾಗಿ ರಾಜೀನಾಮೆ ಸಲ್ಲಿಸುವ ಮೂಲಕ ಅಧಿಕಾರದಿಂದ ಕೆಳಗೆ ಇಳಿದಿದ್ದಾರೆ. ರಾಜೀನಾಮೆ ಸಲ್ಲಿಕೆಗೂ ಮುನ್ನ ಇಂದು ಬೆಳಿಗ್ಗೆ ಮುಖ್ಯಮಂತ್ರಿಗಳ ಅಧಿಕೃತ ನಿವಾಸ 'ಕಾವೇರಿಯಲ್ಲಿ ಸಚಿವರ ಕೊನೆಯ 'ಬ್ರೇಕ್‌ಫಾಸ್ಟ್ ಮೀಟಿಂಗ್' ನಡೆಯಿತು. ಕಾವೇರಿ ನಿವಾಸದ ಅಂಗಳ ಸದಾ ಜನಸಾಗರದಿಂದ, ಅಧಿಕಾರದ ಗಿಜಿಗುಡುವಿಕೆಯಿಂದ ತುಂಬಿರುತ್ತಿತ್ತು. ಆದರೆ ಅಲ್ಲಿ ಆವರಿಸಿದ್ದ ಮೌನವೇ ಬೇರೆಯಾಗಿತ್ತು.

ಉಪಹಾರ ಸಭೆಯಲ್ಲಿ ಭಾಗಿಯಾಗಿದ್ದ ಪ್ರಮುಖ ಮಂತ್ರಿಗಳು ಮತ್ತು ಆಪ್ತ ನಾಯಕರು ಸಿದ್ದರಾಮಯ್ಯ ಅವರ ಸುದೀರ್ಘ ಹೋರಾಟದ ಪಯಣವನ್ನು ನೆನೆದು ಭಾವುಕರಾದರು. ಹಲವು ಸಚಿವರ ಕಣ್ಣಾಲಿಗಳು ತೇವಗೊಂಡಿದ್ದವು. ಸಹೋದ್ಯೋಗಿ ಮಂತ್ರಿಗಳಿಗೆ ಧೈರ್ಯ ತುಂಬಿದ ಸಿದ್ದರಾಮಯ್ಯ ಮಧ್ಯಾಹ್ನ ಭೋಜನ ಬಳಿಕ ರಾಜೀನಾಮೆ ಪತ್ರ ಹಿಡಿದು ಕಾರಿನಲ್ಲಿ ಲೋಕಭವನದತ್ತ ತೆರಳಿದರು.

ರಾಜ್ಯಪಾಲರು ಪ್ರಸ್ತುತ ರಾಜಧಾನಿಯಲ್ಲಿ ಇಲ್ಲದ ಕಾರಣ, ಅವರ ಅನುಪಸ್ಥಿತಿಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ತಮ್ಮ ರಾಜೀನಾಮೆ ಪತ್ರವನ್ನು ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗೆ ಹಸ್ತಾಂತರಿಸಿದರು. ಸದ್ಯಕ್ಕೆ ರಾಜೀನಾಮೆ ಪತ್ರವನ್ನು ಕಾರ್ಯದರ್ಶಿಗಳು ಸ್ವೀಕರಿಸಿದ್ದರೂ, ಐದು ದಶಕಗಳ ಸುದೀರ್ಘ ರಾಜಕೀಯ ಚರಿತ್ರೆಯ ದಣಿವರಿಯದ ಹೋರಾಟಗಾರ ಸಿದ್ದರಾಮಯ್ಯ ಅವರ ಎರಡನೇ ಅವಧಿಯ ಮುಖ್ಯಮಂತ್ರಿ ಆಡಳಿತ ಅಂತ್ಯ ಕಂಡಿದೆ. ಹೈಕಮಾಂಡ್ ಸೂಚನೆ ಮತ್ತು ರಾಹುಲ್ ಗಾಂಧಿ ಅವರ ಸಂದೇಶಕ್ಕೆ ಗೌರವ ನೀಡಿ, ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರ್ಧರಿಸುವ ಮೂಲಕ ರಾಜ್ಯ ರಾಜಕಾರಣದ ಮಹತ್ವದ ಹಂತವೊಂದಕ್ಕೆ ಭಾವುಕ ತೆರೆ ಎಳೆದಿದ್ದಾರೆ.



**ಸಿದ್ದರಾಮಯ್ಯ ಭಾವುಕ ಪೋಸ್ಟ್!:** ಸಿದ್ದರಾಮಯ್ಯ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ ನಂತರ ರಾಜ್ಯದ ಜನರು ನೀಡಿದ ಪ್ರೀತಿ ಮತ್ತು ಬೆಂಬಲಕ್ಕಾಗಿ ಧನ್ಯವಾದ ಹೇಳುವ ಭಾವನಾತ್ಮಕ ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದಾರೆ. ಕೃತಜ್ಞತೆಯ ಸೂಚಕವಾಗಿ ವೇದಿಕೆಯ ಮೇಲೆ ಕೈಗಳನ್ನು ಎತ್ತಿ ನಮಸ್ಕರಿಸುವ ಫೋಟೋವೊಂದನ್ನು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಅವರು ಹಂಚಿಕೊಂಡಿದ್ದು, ಧನ್ಯವಾದಗಳು. ನಿಮ್ಮ ಪ್ರೀತಿ. ನಿಮ್ಮ ನಂಬಿಕೆ. ನನ್ನ ಶಾಶ್ವತ ಶಕ್ತಿ ಎಂದು ಬರೆದುಕೊಂಡಿದ್ದಾರೆ. ಕಷ್ಟದ ಸಮಯದಲ್ಲಿ ತನ್ನೊಂದಿಗೆ ನಿಂತಿದ್ದಕ್ಕಾಗಿ ಜನರಿಗೆ ಧನ್ಯವಾದ ಹೇಳಿದ್ದಾರೆ.

ಜನರ ಪ್ರೀತಿಗೆ ನಾನು ಚಿರಋಣಿ. ನನ್ನನ್ನು ತಮ್ಮಲ್ಲಿ ಒಬ್ಬನೆಂದು ಪರಿಗಣಿಸಿದ, ನನ್ನನ್ನು ಆಶೀರ್ವದಿಸಿದ, ನನ್ನನ್ನು ಪ್ರೋತ್ಸಾಹಿಸಿದ, ನನ್ನನ್ನು ಸರಿಪಡಿಸಿದ, ಕಷ್ಟದ ಸಮಯದಲ್ಲಿ ನನ್ನೊಂದಿಗೆ ನಿಂತ ಮತ್ತು ಈ ದೀರ್ಘ ಪ್ರಯಾಣದುದ್ದಕ್ಕೂ ನನ್ನ ಕೈ ಹಿಡಿದ ಲಕ್ಷಾಂತರ ಪ್ರೀತಿಯ ಹೃದಯಗಳಿಗೆ ಮುಂದೆ ತಲೆಬಾಗುತ್ತೇನೆ. ನಾನು ಇಂದು ಏನಾಗಿದ್ದೇನೆಯೋ ಅದಕ್ಕೆ ನೀವೇ ಕಾರಣ ಎಂದಿದ್ದಾರೆ.

### ಸಿಎಂ ರಾಜೀನಾಮೆಗೆ ತೀವ್ರ ಆಕ್ರೋಶ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಹೈಕಮಾಂಡ್ ಸೂಚನೆ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇದಕ್ಕೂ ಮುನ್ನ ಬೆಂಗಳೂರಿನ ಸಿಎಂ ಅಧಿಕೃತ ನಿವಾಸ ಕಾವೇರಿಯಲ್ಲಿ ಮಹತ್ವದ ಬ್ರೇಕ್‌ಫಾಸ್ಟ್ ಮೀಟಿಂಗ್ ನಡೆಸಿದ್ದರು. ಮತ್ತೊಂದೆಡೆ ಹೊರಗಡೆ ಜಮಾಯಿಸಿದ ಸಿದ್ದರಾಮಯ್ಯ ಅವರ ಅಪಾರ ಅಭಿಮಾನಿಗಳು ಹಾಗೂ ಅಹಿಂದ ಸಂಘಟನೆಗಳ ಕಾರ್ಯಕರ್ತರು ರಾಜೀನಾಮೆ ನಿರ್ಧಾರಕ್ಕೆ ತೀವ್ರ ಆಕ್ರೋಶ ಹೊರಹಾಕಿದ್ದಾರೆ.

ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು. ಸಾಮಾಜಿಕ ನ್ಯಾಯ ನೀಡಿದ ಏಕೈಕ ನಾಯಕ ಅವರಾಗಿದ್ದಾರೆ. ಅವರು ಇಲ್ಲದಿದ್ದರೆ ಕಾಂಗ್ರೆಸ್ ಪಕ್ಷಕ್ಕೆ ಭವಿಷ್ಯವಿಲ್ಲ, ಮುಂದಿನ 2028ರ ಚುನಾವಣೆಯಲ್ಲಿ ಇಪ್ಪತ್ತು ಸೀಟುಗಳೂ ಬರಲ್ಲ ಎಂದು ಅಭಿಮಾನಿಗಳು ಆಕ್ರೋಶದಿಂದ ವಾದಿಸಿದ್ದಾರೆ. ಇದೇ ವೇಳೆ ಡಿ.ಕೆ. ಶಿವಕುಮಾರ್ ಅವರ ಮುಖ್ಯಮಂತ್ರಿ ಪಟ್ಟದ ಆಕಾಂಕ್ಷೆಗೆ ಕೆಲವರು ತೀವ್ರ ವಿರೋಧ ವ್ಯಕ್ತಪಡಿಸಿ, ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು. ಅವರು ದುಡ್ಡಿಗಾಗಿ ಕೆಲಸ ಮಾಡಿದ್ದಾರೆಯೇ ಹೊರತು ಸಿದ್ದರಾಮಯ್ಯನವರಂತೆ ಪಕ್ಷ ಕಟ್ಟಿಲ್ಲ ಎಂದು ನೇರವಾಗಿ ಆರೋಪಿಸಿದ್ದಾರೆ.

### ನಗುಮುಖದಿಂದ ಎದ್ದು ಹೋದ ಸಿಎಂ

ಮುಂದೆ ಕರ್ನಾಟಕದ ಸಿಎಂ ಯಾರು ಎನ್ನುವ ಪ್ರಶ್ನೆಗೆ ಸಿಎಂ ಯಾವುದೇ ಉತ್ತರ ನೀಡದೇ ಹೈಕಮಾಂಡ್ ನಿರ್ಧಾರ ಮಾಡಲಿದೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ. ಹ ಕಚೇರಿ ಕೃಷ್ಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಹೈಕಮಾಂಡ್ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಆಯ್ಕೆ ಮಾಡಲಾಗುತ್ತದೆ. ಅವರು ಮುಖ್ಯಮಂತ್ರಿಯಾಗಿ ಆಯ್ಕೆಯಾಗಲಿದ್ದಾರೆ ಎಂದು ತಿಳಿಸಿದರು.

ನನ್ನನ್ನು ಸೋನಿಯಾ ಗಾಂಧಿ ಅವರು ಕಾಂಗ್ರೆಸ್‌ಗೆ ಸೇರ್ಪಡೆ ಮಾಡಿಕೊಂಡರು. ಆಗ ನನ್ನ ಜೊತೆ 8 ಜನ ಶಾಸಕರು ಸೇರಿಕೊಂಡಿದ್ದರು. ಅವರ ಪೈಕಿ ಕೆಲವರು ನಿಧನರಾಗಿದ್ದಾರೆ. ಅವರಿಗೆಲ್ಲ ನಾನು ಚಿರಋಣಿಯಾಗಿರುತ್ತೇನೆ. 8 ವರ್ಷ ಸಿಎಂ, ಎರಡು ಸಲ ವಿರೋಧ ಪಕ್ಷದ ನಾಯಕನಾಗಿ ಕಾಂಗ್ರೆಸ್ ಅವಕಾಶ ಕೊಟ್ಟಿದೆ.

**ನನ್ನ ರಾಜೀನಾಮೆ ಮುಖ್ಯಮಂತ್ರಿ ಹುದ್ದೆಗೆ ಮಾತ್ರ ಸೀಮಿತ, ಸಕ್ರಿಯ**

**ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ**

**ಭಾವುಕ ವಿದಾಯ ಭಾಷಣ**

**ರಾಜ್ಯಪಾಲರ ಕಾರ್ಯದರ್ಶಿಗೆ ಪತ್ರ ಹಸ್ತಾಂತರ**

**ಸಿದ್ದರಾಮಯ್ಯ ಹೈಕಮಾಂಡ್ ಜತೆ 40 ನಿಮಿಷಗಳ ಕಾಲ ಕ್ಲೋಸ್ ಡೋರ್ ಮೀಟಿಂಗ್!**



### ಕರಿವೃಷಭ ಸ್ವಾಮೀಜಿ ಎಚ್ಚರಿಕೆ

ಶಾಸ್ತ್ರದ ಪ್ರಕಾರ ಡಿಕೆ ಶಿವಕುಮಾರ್ ಅವರು ಸಕಲ ದೋಷ ನೋಡಿಕೊಂಡು ಮುನ್ನಡೆಯಬೇಕಾಗುತ್ತದೆ ಎಂದು ನೊಣವಿನಕೆರೆಯ ಕಾಡಸಿದ್ದೇಶ್ವರ ಮಠದ ಕರಿವೃಷಭ ಶಿವಯೋಗೀಶ್ವರ ಸ್ವಾಮೀಜಿ ಎಚ್ಚರಿಕೆ ನೀಡಿದ್ದಾರೆ. ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ಹಾಗೂ ಮುಂದಿನ ಸಿಎಂ ಡಿಕೆಶಿ ಎನ್ನುವ ವಿಚಾರ ಕುರಿತು ಮಾಧ್ಯಮಗಳೊಂದಿಗೆ ಅವರು ಮಾತನಾಡಿದರು. ಶ್ರೀಮಠದ ಆಶೀರ್ವಾದ ಡಿಕೆಶಿ ಅವರಿಗೆ ಇದ್ದೇ ಇರುತ್ತದೆ. ರಾಜಾ ಪ್ರತ್ಯಕ್ಷ ದೇವತಾ ಅಂದ್ರೆ ರಾಜ್ಯವನ್ನು ಆಳುವಂತಾ ದೊರೆ ನಾಯಕ. ರೈತರ ಪರ ಬಡವರ ಪರಯಿರುವ ನಾಯಕನಾಗಿ ಹೊರಹೊಮ್ಮುತ್ತಾರೆ.

**ಸಿಎಂ ಒಪ್ಪಿಸಲು ಜಾರ್ಜ್‌ಗೆ ರಾಹುಲ್**

**ಕುರ್ಚಿ ಜಟಾಪಟಿಗೆ ಮುಕ್ತಿ**

### ಸಿದ್ದು ದಿಲ್ಲಿಗೆ

ಮುಖ್ಯಮಂತ್ರಿ ಸ್ಥಾನಕ್ಕೆ ಲೋಕಭವನದಲ್ಲಿ ತೆರಳಿ ರಾಜೀನಾಮೆ ಸಲ್ಲಿಸಿದ ಬೆನ್ನಲ್ಲೇ ಸಿದ್ದರಾಮಯ್ಯ ಅವರು ಹೊಸದಿಲ್ಲಿಗೆ ಪ್ರಯಾಣ ಬೆಳೆಸಿದ್ದಾರೆ. ಎಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದ ಮೂಲಕ ತಮ್ಮ ಆಪ್ತರ ಜತೆಗೆ ಹೊಸದಿಲ್ಲಿಗೆ ತೆರಳಿದರು. ಹೊಸದಿಲ್ಲಿ ತಲುಪಲಿರುವ ಸಿದ್ದರಾಮಯ್ಯ ಅವರು, ಅಲ್ಲಿನ ಕರ್ನಾಟಕ ಭವನದಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ಹೊಸ ನಾಯಕನ ಆಯ್ಕೆ ಹೊಸ ಸಚಿವ ಸಂಪುಟ ರಚನೆ ಹಾಗೂ ಕೆಪಿಸಿಸಿ ಹೊಸ ಅಧ್ಯಕ್ಷರ ಆಯ್ಕೆ ಕುರಿತು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ ಎಂದು ತಿಳಿದು ಬಂದಿದೆ.

## ಸಿದ್ದರಾಮಯ್ಯರನ್ನು ರಾಹುಲ್ ಗಾಂಧಿ ನಡೆಸಿಕೊಂಡ ರೀತಿ ಸರಿಯಿಲ್ಲ: ಪ್ರಹ್ಲಾದ ಜೋಶಿ

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ ಒಂದು ಅರಾಜಕ ಪಕ್ಷ. ಅಂದರೆ ಅರಾಜಕತೆ ಗ್ಯಾರಂಟಿ. ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಅಸ್ಥಿರತೆ, ಅರಾಜಕತೆ, ಅವಿಶ್ವಾಸ, ಗೊಂದಲದ ವಾತಾವರಣವಿತ್ತು. ಇದು ಪರಾಕಾಷ್ಠೆಗೆ ತಲುಪಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ದೇಶದಲ್ಲಿ ನಾಲ್ಕು ರಾಜ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಅಧಿಕಾರದಲ್ಲಿರುವುದು. ಇದರಲ್ಲಿ ಮೂರು ಕಡೆಗಳಲ್ಲಿ ಮೇಲ್ಜಾತಿಯವರೇ ಸಿಎಂ. ಆದರೆ, ದಿನ ಬೆಳಗಾದರೆ ಕಾಂಗ್ರೆಸ್ ಒಬಿಸಿ ಮಂತ್ರ ಜಪಿಸುತ್ತದೆ. ಆದರೆ, ಇದ್ದ ಒಬ್ಬ ಒಬಿಸಿ ಸಿಎಂ ಸಿದ್ದರಾಮಯ್ಯಗೆ ತೊಂದರೆ ಕೊಡಲು ಹೊರಟಿದ್ದಾರೆ. ಯಾವ ರೀತಿ ವೀರೇಂದ್ರ ಪಾಟೀಲ್ ಅವರನ್ನು ರಾಜೀವ್ ಗಾಂಧಿ ಅಪಮಾನ ಮಾಡಿದರೋ, ಅದೇ ರೀತಿ ಅವರ ಪುತ್ರ ರಾಹುಲ್ ಗಾಂಧಿ ಸಿದ್ದರಾಮಯ್ಯ ಅವರನ್ನು ನಡೆಸಿಕೊಂಡಿದ್ದಾರೆ. ಹಾಗೆಂದು ಸಿದ್ದರಾಮಯ್ಯ ಭಾರಿ ಪ್ರಾಮಾಣಿಕ ಎಂದಲ್ಲ. ಆದರೆ, ಅವರನ್ನು ರಾಹುಲ್ ಗಾಂಧಿ ನಡೆಸಿಕೊಂಡ ರೀತಿ ಮಾತ್ರ ಸರಿಯಲ್ಲ. ಆದ್ದರಿಂದ ಕಾಂಗ್ರೆಸ್ ಪಕ್ಷದ ಅಸ್ಥಿರತೆ ಆದಷ್ಟು ಶೀಘ್ರ ಮುಕ್ತಾಯಗೊಳ್ಳಲಿ ಎಂದರು.

ಇತ್ತೀಚೆಗೆ ಕರ್ನಾಟಕದಲ್ಲಿ ಬಂದ ಸಿಎಂಗಳಲ್ಲಿ ಸಿದ್ದರಾಮಯ್ಯ ಹಾಗೂ ಯಡಿಯೂರಪ್ಪ ಮಾಸ್ ಲೀಡರ್ಸ್‌ಗಳು. ಆದ್ದರಿಂದ ಸಿದ್ದರಾಮಯ್ಯ ಅವರನ್ನು ಬಿಟ್ಟು ರಾಜ್ಯದ ಸ್ಥಿತಿ ಹೇಗಿರುತ್ತದೆ ಎಂದು ಹೇಳಲು ನಾನು ಭವಿಷ್ಯ ಹೇಳುವವನಲ್ಲ. ಆದರೆ, ಅವರನ್ನು ನಡೆಸಿಕೊಂಡ ರೀತಿ ಮಾತ್ರ ಸರಿಯಲ್ಲ ಎಂದರು.

ಕರ್ನಾಟಕ ರಾಜ್ಯದಲ್ಲಿ ಆಡಳಿತ ಇರಲೇ ಇಲ್ಲ. ಇಲ್ಲಿದ್ದದ್ದು ಕೇವಲ ತುಷ್ಟೀಕರಣ ಹಾಗೂ ಭ್ರಷ್ಟಾಚಾರ. ಡಿಕೆಶಿ ಸಿಎಂ ಆದರೂ ಅದು ಮುಂದುವರೆಯುತ್ತದೆ. ಕಾಂಗ್ರೆಸ್ ಅಸಫಲರಾಗಿ ಬಿಜೆಪಿ ಅಧಿಕಾರಕ್ಕೆ ಬರಬೇಕೆಂದಿಲ್ಲ. ಮೋದಿಯವರ ಮಾರ್ಗದರ್ಶನದಲ್ಲಿ, ಸಕಾರಾತ್ಮಕ ಚಿಂತನೆಗಳ ಮೂಲಕ ಬಿಜೆಪಿ ಅಧಿಕಾರಕ್ಕೆ ಬರುತ್ತದೆ. ಯಾವ ರೀತಿ ಬಂಗಾಳ ಅಸ್ಸಾಂ, ಮಹಾರಾಷ್ಟ್ರದಲ್ಲಿ ಅಧಿಕಾರಕ್ಕೆ ಬಂದೆವೋ. ಅದೇ ರೀತಿ ಹಿಂದೆಂದೂ ಬಾರದ ಪ್ರಬಲ ಬಹುಮತದೊಂದಿಗೆ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುತ್ತೇವೆ ಎಂದು ಇದೇ ವೇಳೆ ಪ್ರಹ್ಲಾದ ಜೋಶಿ ಭವಿಷ್ಯ ನುಡಿದರು.

### ಸಿಎಂ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಹೈಕಮಾಡ್

ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ಪತ್ರ ಸಲ್ಲಿಸಿದರು. ಮಧ್ಯಾಹ್ನ 3 ಗಂಟೆಗೆ ರಾಜೀನಾಮೆ ಪತ್ರವನ್ನು ಸಿದ್ದರಾಮಯ್ಯ ಅವರು ರಾಜಭವನದ ಕಾರ್ಯದರ್ಶಿಗೆ ಸಲ್ಲಿಸಿದರು. ರಾಜ್ಯಪಾಲರ ಪರವಾಗಿ ಲೋಕಭವನ ಕಾರ್ಯದರ್ಶಿ ಅವರು ರಾಜೀನಾಮೆ ಪತ್ರವನ್ನು ಸ್ವೀಕರಿಸಿದರು. ಡಿ.ಕೆ. ಶಿವಕುಮಾರ್ ಸೇರಿದಂತೆ ಇನ್ನಿತರ ಸಚಿವರೊಂದಿಗೆ ಆಗಮಿಸಿದ್ದ ಸಿದ್ದರಾಮಯ್ಯ, ರಾಜೀನಾಮೆ ಬಳಿಕ ಅಲ್ಲಿಂದ ತೆರಳಿದರು.



**ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಭವಿಷ್ಯ**

**ಕಾಂಗ್ರೆಸ್ ಒಬಿಸಿ ಮಂತ್ರ**

## ಬಿ.ವೈ.ವಿಜಯೇಂದ್ರ ವಾಗ್ದಾಳಿ

### ಸರ್ಕಾರದಲ್ಲಿ ಬಿಜೆಪಿ ಹಸ್ತಕ್ಷೇಪ ಮಾಡುವುದಿಲ್ಲ

• ಉದಯವಾಹಿನಿ, ಬೆಂಗಳೂರು:

ರಾಜ್ಯದ ಜನರ ಪಾಲಿಕೆ ಕಾಂಗ್ರೆಸ್ ಸರ್ಕಾರ ಶಾಪವಾಗಿ ಪರಿಣಮಿಸಿದೆ. ಸಿದ್ದರಾಮಯ್ಯ ಅವರ ನಂತರ ಯಾರೇ ಮುಖ್ಯಮಂತ್ರಿಗಳಾದರೂ ರಾಜ್ಯದ ಸ್ಥಿತಿ ಸುಧಾರಣೆಯಾಗುವ ವಿಶ್ವಾಸ ಇಲ್ಲ ಎಂದು ಶಾಸಕ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ನಂತರ ಯಾರು ಮುಖ್ಯಮಂತ್ರಿ ಆಗುತ್ತಾರೆ ಎಂಬುದು ಯಕ್ಷಪ್ರಶ್ನೆಯಾಗಿದೆ.

ಕಾಂಗ್ರೆಸ್ ಪಕ್ಷದ ಮೂರು ವರ್ಷಗಳ ಆಡಳಿತದಲ್ಲಿ ರಾಜ್ಯ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ಈ ಸರ್ಕಾರ ಜನರಿಗೆ ಉತ್ತಮ ಆಡಳಿತ ನೀಡುವ ಪ್ರಯತ್ನ ಮಾಡಲೇ ಇಲ್ಲ ಎಂದು ಟೀಕಿಸಿದರು.

ರಾಜ್ಯದಲ್ಲಿ ಆಡಳಿತ ಸಂಪೂರ್ಣ ಕುಸಿದಿದೆ. ಈ ಸರ್ಕಾರ ಅಲ್ಪಸಂಖ್ಯಾತರ ಓಲೈಕೆ ಮಾಡುವಲ್ಲಿ ತೊಡಗಿತ್ತೇ ಹೊರತು ರೈತರ, ಬಡವರ, ಯುವಕರ ಸಮಸ್ಯೆಗಳನ್ನು ಆಲಿಸಲಿಲ್ಲ. ಮುಖ್ಯಮಂತ್ರಿ ಕುರ್ಚಿಯ ಕಚ್ಚಾಟವೇ ದೊಡ್ಡದಾಗಿದೆ. ಅಧಿಕಾರಕ್ಕಾಗಿ ನಡೆಯುತ್ತಿರುವ ಆಂತರಿಕ ಕಚ್ಚಾಟ ಆಡಳಿತದ ಮೇಲೆ ಪರಿಣಾಮ ಬೀರಿದೆ.

ಈ ಸರ್ಕಾರದ ಮೇಲೆ ಯುವಕರು ಅಸಮಾಧಾನಗೊಂಡಿದ್ದಾರೆ.

ರಾಜ್ಯ ಡ್ರಗ್ಸ್ ರಾಜಧಾನಿಯಾಗುವತ್ತ ಸಾಗಿದೆ ಎಂದು ದೂರಿದರು. ಸಿದ್ದರಾಮಯ್ಯರು ರಾಜೀನಾಮೆ ನೀಡಿದ ನಂತರ ಸಿಎಂ ಆಗಿ ಡಾ. ಜಿ.ಪರಮೇಶ್ವರ್, ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ ಅಧಿಕಾರಕ್ಕೆ ಬರಬೇಕು ಎಂಬ ಕಚ್ಚಾಟ



ಆರಂಭವಾಗಿದೆ. ಯಾರೇ ಸಿಎಂ ಆದರೂ ರಾಜ್ಯಕ್ಕೆ ಲಾಭ ಇಲ್ಲ. ಇಲ್ಲಿನ ಆರ್ಥಿಕ ಸ್ಥಿತಿ ಸುಧಾರಿಸಲು ಸಾಧ್ಯವಾಗದಷ್ಟು ದಿವಾಳಿಯಾಗಿದೆ. ಸಿಎಂ ಸ್ಥಾನದ ಗುದ್ದಾಟಕ್ಕೆ ಅಷ್ಟು ಬೇಗ ಉತ್ತರ ಕಂಡುಕೊಳ್ಳುವ ಶಕ್ತಿ ಕಾಂಗ್ರೆಸ್ ಹೈಕಮಾಂಡ್‌ಗೆ ಇಲ್ಲ ಎಂದು ವ್ಯಂಗ್ಯವಾಡಿದರು. ರಾಜ್ಯದಲ್ಲಿ ಒಂದು ರೀತಿ ಅರಾಜಕತೆ ಸೃಷ್ಟಿಯಾಗುತ್ತಿದೆ. ಭ್ರಷ್ಟಾಚಾರದಿಂದ ಸಾಮಾನ್ಯ ಜನ ಬೇಸತ್ತಿದ್ದಾರೆ. ರಸಗೊಬ್ಬರ ಕೃತಕ ಅಭಾವ ಸೃಷ್ಟಿಸುವ ಷಡ್ಯಂತ್ರ ನಡೆದಿದೆ.

ಉಸ್ತುವಾರಿ ಸಚಿವರು ಹಾಗೂ ಶಾಸಕರು ರೈತರ ಸಮಸ್ಯೆ ಕೇಳುತ್ತಿಲ್ಲ. ಅವರೆಲ್ಲ ಅಧಿಕಾರಕ್ಕಾಗಿ ದೆಹಲಿಯಲ್ಲಿ ಬೀಡು ಬಿಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಸರ್ಕಾರಕ್ಕೆ ಪೂರ್ಣ ಬಹುಮತ ಇದೆ. ನಾವು ಇದರಲ್ಲಿ ರಾಜಕಾರಣ ಮಾಡಲು ಸಾಧ್ಯವಿಲ್ಲ. ವಿರೋಧ ಪಕ್ಷವಾಗಿ ಕೆಲಸವನ್ನು ಸಮರ್ಥವಾಗಿ ಮಾಡಿದ್ದೇವೆ. ಸರ್ಕಾರದಲ್ಲಿ ಬಿಜೆಪಿ ಹಸ್ತಕ್ಷೇಪ ಮಾಡುವುದಿಲ್ಲ. ಮೂಗು ತೂರಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

# ಬೆಂಗಳೂರಲ್ಲಿ ಹೆಲ್ಮೆಟ್ ಧರಿಸದ ಬೈಕ್ ಸವಾರರಿಗೆ ಖಾಕಿ ಬಿಸಿ: 3 ತಿಂಗಳಲ್ಲಿ 10.78 ಲಕ್ಷ ಕೇಸ್ ದಾಖಲು, ಲಕ್ಷಾಂತರ ರೂ. ದಂಡ!

• ಉದಯವಾಹಿನಿ,ಬೆಂಗಳೂರು

ದೇಶದ ಐಟಿ–ಸಿಟಿ, ಸುಶಿಕ್ಷಿತರ ನಗರ ಎಂಬ ಹೆಗ್ಗಳಿಕೆ ಹೊಂದಿರುವ ಬೆಂಗಳೂರಿನ ನಾಗರಿಕರು ಸಂಚಾರ ನಿಯಮಗಳ ಪಾಲನೆಯನ್ನು ನಿರ್ಲಕ್ಷಿಸುತ್ತಿರುವುದು ಬೆಳಕಿಗೆ ಬಂದಿದೆ. ಇದೇ ವರ್ಷದ ಮಾರ್ಚ್ ಅಂತ್ಯಕ್ಕೆ ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಸಂಬಂಧ ದಾಖಲಾಗಿರುವ ಪ್ರಕರಣಗಳು ಇದನ್ನು ಪುಷ್ಟೀಕರಿಸಿವೆ.

ನಗರಾದ್ಯಂತ ತಂತ್ರಜ್ಞಾನ ಆಧಾರಿತ ಸ್ವಯಂಚಾಲಿತ ಹಾಗೂ ಪೊಲೀಸರ ಕಾರ್ಯಾಚರಣೆಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡಿರುವ ವಾಹನ ಸವಾರರ ವಿರುದ್ಧ 27,33,267 ಕೇಸ್ ದಾಖಲಾಗಿವೆ. ಈ ಪಟ್ಟಿಯಲ್ಲಿ ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಚಾಲನೆ ಮಾಡಿದವರು ಅಗ್ರಪಟ್ಟಿಯಲ್ಲಿದ್ದಾರೆ. ಹೆಲ್ಮೆಟ್ ಧರಿಸದೆ ಬೈಕ್ ಚಾಲನೆ ಮಾಡುವಲ್ಲಿ ಸವಾರರು ಅಸಡ್ಡೆ ತೋರುತ್ತಿದ್ದು, ಬರೋಬ್ಬರಿ 10,78,903 ಕೇಸ್‌ಗಳು ವರದಿಯಾಗಿವೆ. ಹೆಲ್ಮೆಟ್ ಧರಿಸದವರು ಲಕ್ಷಾಂತರ ರೂ. ದಂಡ ತೆತ್ತಿದ್ದಾರೆ.

ಈ ನಿಟ್ಟಿನಲ್ಲಿ ಹೆಲ್ಮೆಟ್ ಧರಿಸದ ಸವಾರರಿಗೆ ಬಿಸಿ ಮುಟ್ಟಿಸುವ ಸಲುವಾಗಿ ನಗರ ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ



ಆರಂಭಿಸಿದ್ದಾರೆ. ಪ್ರತಿ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಎರಡು ದಿನಗಳಿಂದ ಪೊಲೀಸರು ಫೀಲ್ಡ್‌ಗೆ ಇಳಿದಿದ್ದಾರೆ. ಹೆಲ್ಮೆಟ್ ಧರಿಸದ ಸವಾರರನ್ನು ಗುರುತಿಸಿ ದಂಡ ವಿಧಿಸುತ್ತಿದ್ದಾರೆ. ಎರಡು ದಿನಗಳಲ್ಲಿ ಹೆಲ್ಮೆಟ್ ಧರಿಸದ ಸವಾರರು ಹಾಗೂ ಹಿಂಬದಿ ಸವಾರರು ಸೇರಿ ಒಟ್ಟು 8,968 ಕೇಸ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ನಗರದಲ್ಲಿ ಪ್ರತಿನಿತ್ಯ ಒಂದಲ್ಲ ಒಂದು ಭಾಗದಲ್ಲಿ ಅಪಘಾತಗಳು ಸಂಭವಿಸುತ್ತಿದ್ದು, ದ್ವಿಚಕ್ರ ವಾಹನ ಸವಾರರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಬಹುತೇಕ ಅಪಘಾತಗಳಲ್ಲಿ ಬೈಕ್ ಸವಾರರು ತಲೆಗೆ ಹೆಲ್ಮೆಟ್ ಧರಿಸದ ಕಾರಣ ಗಂಭೀರವಾಗಿ ಗಾಯಗೊಂಡು ಜೀವ ಕಳೆದುಕೊಂಡಿದ್ದಾರೆ. ಅಪಘಾತಗಳಲ್ಲಿ ಮೃತಪಟ್ಟ ಬೈಕ್ ಸವಾರರು ಹೆಲ್ಮೆಟ್ ಧರಿಸದೆ ನಿರ್ಲಕ್ಷ್ಯ ವಹಿಸಿದ್ದಕ್ಕೆ ವಿಮೆ ಮೊತ್ತವೂ ಕಡಿಮೆ ಆಗಿರುವ ಸಾಕಷ್ಟು ಪ್ರಕರಣಗಳಿವೆ.



ಇಷ್ಟಾದರೂ, ಹೆಲ್ಮೆಟ್ ಧರಿಸಲು ಜನರು ಹಿಂದೇಟು ಹಾಕುತ್ತಿರುವುದು ಅತ್ಯಂತ ಬೇಸರದ ಸಂಗತಿಯಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸುತ್ತಾರೆ.ಹೆಲ್ಮೆಟ್ ಧರಿಸದೆ ಬೈಕ್ ಚಾಲನೆ ಮಾಡಿದರೆ 500 ರೂ. ದಂಡ ವಿಧಿಸಲಾಗುತ್ತದೆ. ಹಿಂಬದಿ ಸವಾರ ಹೆಲ್ಮೆಟ್ ಧರಿಸದಿದ್ದರೂ 500 ರೂ. ದಂಡ ಪಾವತಿಸಬೇಕಿದೆ. ಆದರೆ, ದಂಡ ಸಂಗ್ರಹ ಪೊಲೀಸರ ಗುರಿಯಲ್ಲ. ಪ್ರಾಣ ರಕ್ಷಣೆ ಹಾಗೂ ಸುರಕ್ಷತೆ ಪಾಲಿಸುವ ಸಲುವಾಗಿ ಹೆಲ್ಮೆಟ್ ಕಡ್ಡಾಯವಾಗಿ ಧರಿಸಬೇಕು. ಭಾರತೀಯ ಮೋಟಾರು ವಾಹನ ಕಾಯಿದೆಯು ಬೈಕ್ ಸವಾರರು ಕಡ್ಡಾಯವಾಗಿ ಐಎಸ್‌ಐ ಗುರುತಿನ ಹೆಲ್ಮೆಟ್ ಧರಿಸಬೇಕು ಎಂಬ ನಿಯಮ ಪ್ರತಿಪಾದಿಸುತ್ತದೆ. ಆದರೆ, ಬಹುತೇಕರು ಕಾಟಾಚಾರಕ್ಕೆ ಕಳಪೆ ಗುಣಮಟ್ಟದ ಹೆಲ್ಮೆಟ್ ಧರಿಸುತ್ತಿದ್ದಾರೆ.

ಇಂತಹ ಹೆಲ್ಮೆಟ್ ಧರಿಸಿದವರ ವಿರುದ್ಧವೂ ಕೇಸ್ ದಾಖಲಿಸಲಾಗುತ್ತಿದೆ. ಜತೆಗೆ, ಜಂಕ್ಷನ್‌ಗಳಲ್ಲಿ ಅಳವಡಿಸಿರುವ ಕೃತಕ ಬುದ್ಧಿಮತ್ತೆ (ಎಐ) ಕ್ಯಾಮೆರಾಗಳು ಅರ್ಧ ಹೆಲ್ಮೆಟ್‌ಗಳನ್ನು ಗಣನೆಗೆ ಪರಿಗಣಿಸುವುದಿಲ್ಲ. ಹೀಗಾಗಿ, ಹೆಲ್ಮೆಟ್ ರಹಿತ ಪ್ರಯಾಣ ಎಂದೇ ಪರಿಗಣಿಸಲಾಗುತ್ತದೆ ಎಂದು ಅಧಿಕಾರಿ ವಿವರಿಸಿದರು.

### ಸಿಗ್ನಲ್ ಜಂಪಿಂಗ್‌ನಲ್ಲೂ ಮುಂದು

ನಗರದ ಸಂಚಾರ ಸಿಗ್ನಲ್‌ಗಳಲ್ಲಿ ಅವಧಿ ಮುಗಿಯುವ ಮುನ್ನವೇ ಶರವೇಗದಲ್ಲಿ ದಾಟುವ ವಾಹನ ಸವಾರರ ಸಂಖ್ಯೆಯೂ ಹೆಚ್ಚಾಗಿದ್ದು, ಅವರ ನಿಯಮ ಉಲ್ಲಂಘನೆ ಚಾಲನೆ ಕರಾಮತ್ತು ಕ್ಯಾಮೆರಾಗಳಲ್ಲಿ ಸೆರೆಯಾಗಿದೆ. ಸಿಗ್ನಲ್ ಜಂಪ್ ಸಂಬಂಧ ಒಟ್ಟು 3,39,344 ಕೇಸ್‌ಗಳು ದಾಖಲಾಗಿವೆ. ತ್ರಿಬಲ್ ರೈಡಿಂಗ್‌ಗೆ 37,480 ಗಳು ಹಾಗೂ ವಾಹನ ಚಾಲನೆ ವೇಳೆ ಮೊಬೈಲ್ ಬಳಸಿದ ಸವಾರರ ವಿರುದ್ಧ 19,135 ಕೇಸ್‌ಗಳು ವರದಿಯಾಗಿವೆ.

ನಗರದಲ್ಲಿ ಸಂಭವಿಸುತ್ತಿರುವ ಅಪಘಾತಗಳಲ್ಲಿ ಹೆಲ್ಮೆಟ್ ಧರಿಸದವರು ಮೃತಪಟ್ಟಿರುವುದು ಕಂಡು ಬಂದಿದೆ. ಜತೆಗೆ, ಬೆಳಗಿನ ಸಮಯದಲ್ಲಿ ಹೆಲ್ಮೆಟ್ ಧರಿಸದೆ ಪ್ರಯಾಣ ಮಾಡುವ ಸವಾರರ ಪ್ರಮಾಣವೂ ಹೆಚ್ಚಾಗಿದೆ. ಈ ನಿಟ್ಟಿನಲ್ಲಿ ಹೆಲ್ಮೆಟ್ ರಹಿತ ಸವಾರರ ವಿರುದ್ಧ ವಿಶೇಷ ಕಾರ್ಯಾಚರಣೆ ನಿರಂತರವಾಗಿ ನಡೆಯಲಿದೆ.

**ಈ ದಿನದ ದರ** ಪೆಟ್ರೋಲ್: 110.89 ₹/L ಡೀಸೆಲ್ : 98.80₹/L ಬಂಗಾರ: ₹ 15,606/Gram 24ct ₹14,303 /Gram 22ct ಬೆಳ್ಳಿ: ₹275.00/Gram


# ರಾಜ್ಯಾದ್ಯಂತ ಬಕ್ರೀದ್ ಹಬ್ಬ ಆಚರಣೆ: ಮುಸ್ಲಿಂ ಬಾಂಧವರಿಂದ ಸಾಮೂಹಿಕ ಪ್ರಾರ್ಥನೆ

• ಉದಯವಾಹಿನಿ, ಬೆಂಗಳೂರು

ರಾಜ್ಯಾದ್ಯಂತ ಇಂದು ತ್ಯಾಗ ಬಲಿದಾನಗಳ ಸಂಕೇತವಾದ ಬಕ್ರೀದ್ ಹಬ್ಬವನ್ನು ಬಹಳ ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಗುತ್ತಿದೆ. ಉಡುಪಿ, ಬಳ್ಳಾರಿ ಸೇರಿದಂತೆ ವಿವಿಧ ನಗರದಲ್ಲಿ ಮುಸ್ಲಿಂ ಬಾಂಧವರು ಶ್ರದ್ಧೆ ಭಕ್ತಿಯಿಂದ ಭಾಗಿಯಾಗಿದ್ದರು.

ಹೊಸ ಬಟ್ಟೆ ಧರಿಸಿ ಮುಂಜಾನೆಯೇ ಉಡುಪಿ ನಗರ, ಕಾಪು, ಬ್ರಹ್ಮಾವರ ಕುಂದಾಪುರ, ಬೈಂದೂರು ಹೆಬ್ರಿ, ಕಾರ್ಕಳ ತಾಲ್ಲೂಕುಗಳ ಎಲ್ಲಾ ಮಸೀದಿ ಹಾಗೂ ಈದ್ಗಾ ಮೈದಾನದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಕೆಲವು ಮಸೀದಿಗಳಲ್ಲಿ ಮಹಿಳೆಯರಿಗೂ ಈದ್ ನಮಾಝ್ ಮಾಡಲು




ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿತ್ತು. ಉಡುಪಿ ಜಾಮೀಯಾ ಮಸೀದಿಯಲ್ಲಿ ಮೌಲಾನಾ ಅಬ್ದುರರಶೀದ್ ನದ್ವಿ ನೇತೃತ್ವದಲ್ಲಿ ಮತ್ತು ಉಡುಪಿಯ ಅಂಜುಮಾನ್ ಮಸೀದಿಯಲ್ಲಿ ಮೌಲಾನ ಇನಾಯುತುಲ್ಲಾ ರಝ್ವಿ ನೇತೃತ್ವದಲ್ಲಿ ಈದ್ ನಮಾಝ್ ನಿರ್ವಹಿಸಲಾಯಿತು. ದೊಡ್ಡಣಗುಡ್ಡೆ ಮಸೀದಿಯ ಖತೀಬರಾದ ಖಾಸಿಂ ಸಅದಿ ಈದ್ ಸಂದೇಶ ನೀಡಿದರು. ನಮಾಝ್ ಬಳಿಕ ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಧರ್ಮ ಗುರುಗಳು ಹಬ್ಬದ ಸಂದೇಶ ಸಾರಿ, ಬಕ್ರೀದ್ ಹಬ್ಬದ ಆಚರಣೆ ಹಾಗೂ ದಾನ-ಧರ್ಮದ ಮಹತ್ವ ಕುರಿತು ಬೋಧನೆ ಮಾಡಿದರು. ಸರ್ವ ಧರ್ಮೀಯರಿಗೂ ಈದ್ ಶುಭಾಶಯಗಳು. ಮಕ್ಕಾದಲ್ಲಿ ಪವಿತ್ರ ಹಜ್ ಯಾತ್ರೆ ನಡೆಯುವ ವೇಳೆ ಈ ಹಬ್ಬವನ್ನು ಆಚರಿಸಲಾಗುತ್ತದೆ. ಜೀವನದಲ್ಲಿ ಒಂದು ಬಾರಿಯಾದರೂ ಹಜ್ ಯಾತ್ರೆ ಕೈಗೊಳ್ಳಬೇಕೆಂದು ಇಸ್ಲಾಂ ಹೇಳುತ್ತದೆ. ಹಜ್‌ನ ಧಾರ್ಮಿಕ ವಿಧಿ-ವಿಧಾನಗಳು ಈ ಹಬ್ಬದೊಂದಿಗೆ ಮುಕ್ತಾಯಗೊಳ್ಳುತ್ತದೆ. ನಮ್ಮೆಲ್ಲರಿಗೂ ಈ ತ್ಯಾಗ ಬಲಿದಾನದ ಹಬ್ಬವು ಆರೋಗ್ಯ, ಐಶ್ವರ್ಯ ಕರುಣಿಸಲಿ ಎಂದು ಅಲ್ಲಾಹುವಿನಲ್ಲಿ ಪ್ರಾರ್ಥಿಸೋಣ. ಈ ಹಬ್ಬದಿಂದ ದೇಶದ ಎಲ್ಲಾ ಜನರಿಗೂ ಒಳಿತಾಗಲಿ, ನಾಡಿಗೆ ಸುಭಿಕ್ಷೆ ದೊರಕಲಿ ಎಂದು ಶುಭ ಹಾರೈಸಿದರು.

### ಸಂಭ್ರಮದ ಬಕ್ರೀದ್ ಹಬ್ಬ

**ಗಣಿನಾಡು ಬಳ್ಳಾರಿಯಲ್ಲಿಯೂ ತ್ಯಾಗ ಬಲಿದಾನಗಳ ಸಂಕೇತವಾದ ಬ್ರಕ್ರೀದ್ ಹಬ್ಬವನ್ನ ಮುಸ್ಲಿಂ ಬಾಂಧವರು ಶ್ರದ್ಧೆ ಭಕ್ತಿಯಿಂದ ಆಚರಿಸಿದರು. ನಗರದ ಎಪಿಎಂಸಿ ಬಳಿಯ ಈದ್ಗಾ ಮೈದಾನಕ್ಕೆ ಬೆಳಗ್ಗೆಯಿಂದಲೇ ತಂಡೋಪತಂಡವಾಗಿ ತೆರಳಿದ ಮುಸ್ಲಿಮರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.**

# ಕೃಷಿ ಸಾಲ ವಿತರಣೆ ಶೇ.111 ಸಾಧನೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯ (ಎಸ್‌ಎಲ್‌ಬಿಸಿ) 175ನೇ ಮಹತ್ವದ ಸಭೆಯು ಮೇ 25ರಂದು ವಿಧಾನಸೌಧದಲ್ಲಿ ಯಶಸ್ವಿಯಾಗಿ ಜರುಗಿತು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ, ಬ್ಯಾಂಕಿಂಗ್ ವಲಯದ ಸಾಧನೆಗಳು ಹಾಗೂ ಗ್ರಾಮೀಣಾಭಿವೃದ್ಧಿ ಯೋಜನೆಗಳ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು.

ಸಭೆಯಲ್ಲಿ ಕೆನರಾ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕರಾದ ಭವೇಂದ್ರ ಕುಮಾರ್ ಅವರು ಬ್ಯಾಂಕುಗಳ ಸಾಧನೆಯ ವರದಿಯನ್ನು ಮಂಡಿಸಿದರು. 2026ರ ಮಾರ್ಚ್ 31ರ ಅಂತ್ಯಕ್ಕೆ ಕೃಷಿ ವಲಯದ ಅಡಿಯಲ್ಲಿ 2,22,203 ಕೋಟಿಗಳ ಸಾಲ ವಿತರಣೆಯ ಗುರಿ ಹೊಂದಲಾಗಿತ್ತು. ಆದರೆ, ಬ್ಯಾಂಕುಗಳು ಭರ್ಜರಿ ಪ್ರಗತಿ ಸಾಧಿಸುವ ಮೂಲಕ 2,47,754 ಕೋಟಿಗಳನ್ನು ವಿತರಿಸಿವೆ. ಇದು ನಿಗದಿತ ಗುರಿಗಿಂತ ಶೇಕಡಾ 111 ರಷ್ಟು ಹೆಚ್ಚಿನ ಸಾಧನೆಯಾಗಿದೆ. ಉಳಿದಂತೆ, ಎಂಎಸ್‌ಎಂಇ ವಲಯದಲ್ಲಿ ಶೇಕಡಾ 106ರಷ್ಟು ಹಾಗೂ ಒಟ್ಟು ಆದ್ಯತಾ ವಲಯದಲ್ಲಿ ಶೇಕಡಾ 108 ರಷ್ಟು ಪ್ರಗತಿ ದಾಖಲಾಗಿದೆ. ಮುಂಬರುವ ಆರ್ಥಿಕ ವರ್ಷದಲ್ಲೂ ಬ್ಯಾಂಕುಗಳು ಇದೇ ರೀತಿಯ ಅತ್ಯುತ್ತಮ ಕಾರ್ಯಕ್ಷಮತೆಯನ್ನು ಕಾಯ್ದುಕೊಳ್ಳಬೇಕು ಎಂದು ಅವರು ಕರೆ ನೀಡಿದರು.

**ಬಾಕಿ ಅರ್ಜಿಗಳ ಶೀಘ್ರ ವಿಲೇವಾರಿಗೆ ಸಿಎಸ್ ಸೂಚನೆ :** ರಾಜ್ಯದ ಒಟ್ಟು ಸಾಲ, ಒಟ್ಟು ಠೇವಣಿ ಹಾಗೂ ಆದ್ಯತಾ ವಲಯದ ಪ್ರಗತಿಯನ್ನು ಜಿಲ್ಲಾವಾರು ಮತ್ತು ಬ್ಯಾಂಕ್‌ವಾರು ಪರಿಶೀಲಿಸಿದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರು, ಅಭಿವೃದ್ಧಿ ಯೋಜನೆಗಳ ಯಶಸ್ಸಿಗೆ ಸರ್ಕಾರದ ಇಲಾಖೆಗಳು ಮತ್ತು ಬ್ಯಾಂಕುಗಳು ಸಮನ್ವಯತೆಯಿಂದ ಕೆಲಸ ಮಾಡಬೇಕು ಎಂದು ತಿಳಿಸಿದರು. ಸರ್ಕಾರಿ ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ ಬ್ಯಾಂಕುಗಳಲ್ಲಿ ಬಾಕಿ ಇರುವ ಎಲ್ಲಾ ಸಾಲದ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.






### ಗ್ರಾಮೀಣ ಬ್ಯಾಂಕಿಂಗ್‌ಗೂ 'ಬಿಸಿ ಸಖಿ' ನೆರವು

**ಗ್ರಾಮೀಣ ಭಾಗದಲ್ಲಿ ಬ್ಯಾಂಕಿಂಗ್ ಸೇವೆಗಳನ್ನು ಮತ್ತಷ್ಟು ಬಲಪಡಿಸಲು, ಎಲ್ಲಾ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಎನ್‌ಆರ್‌ಎಲ್‌ಎಂ ಸ್ವಸಹಾಯ ಗುಂಪುಗಳ 'ಬಿಸಿ ಸಖಿಯರನ್ನು ಬಿಸಿನೆಸ್ ಕರೆಸ್ಪಾಂಡೆಂಟ್ ಏಜೆಂಟರನ್ನಾಗಿ ಕಡ್ಡಾಯವಾಗಿ ನೇಮಕ ಮಾಡಿಕೊಳ್ಳಲು ಸಭೆಯಲ್ಲಿ ಸೂಚಿಸಲಾಯಿತು. ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಾದ ಉಮಾ ಮಹದೇವನ್ ಅವರು ಸಹ ಈ ಅಂಶವನ್ನು ಒತ್ತಿ ಹೇಳಿದರು.**

### ಹೊಸ ಸಂಚಾಲಕರ ಪರಿಚಯ

**ವಯೋನಿವೃತ್ತಿ ಹೊಂದುತ್ತಿರುವ ಕೆನರಾ ಬ್ಯಾಂಕ್‌ನ ಮಹಾಪ್ರಬಂಧಕ ಹಾಗೂ ಎಸ್‌ಎಲ್‌ಬಿಸಿ ಕರ್ನಾಟಕದ ಸಂಚಾಲಕರಾದ ಭಾಸ್ಕರ ಚಕ್ರವರ್ತಿ ಎಂ ಅವರು, ತಮ್ಮ ಸ್ಥಾನವನ್ನು ಅಲಂಕರಿಸಲಿರುವ ಹೊಸ ಸಂಚಾಲಕರಾದ ಶ್ರೀ ಶ್ರೀನಾಥ್ ಜೋಶಿ ಅವರನ್ನು ಸಭೆಗೆ ಪರಿಚಯಿಸಿದರು. ಸಭೆಯ ಆರಂಭದಲ್ಲಿ ಕೆನರಾ ಬ್ಯಾಂಕ್ ಮತ್ತು ಎಸ್‌ಎಲ್‌ಬಿಸಿ ಮುಖ್ಯ ಮಹಾಪ್ರಬಂಧಕರಾದ ಶಂಭುಲಾಲ್ ಅವರು ಸ್ವಾಗತಿಸಿದರು. ವಿವಿಧ ಬ್ಯಾಂಕುಗಳ ರಾಜ್ಯ ಮಟ್ಟದ ಮುಖ್ಯಸ್ಥರು ಮತ್ತು ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದ ಸಭೆಯು, ಹೊಸ ಆರ್ಥಿಕ ವರ್ಷದಲ್ಲಿ (2026-27) ಗುರಿಗಳನ್ನು ಯಶಸ್ವಿಯಾಗಿ ತಲುಪುವ ಭರವಸೆಯೊಂದಿಗೆ ಮುಕ್ತಾಯಗೊಂಡಿತು.**


### ಹಣಕಾಸು ಸೇರ್ಪಡೆ 2025-30ಕ್ಕೆ ಒತ್ತು

**ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಾದೇಶಿಕ ನಿರ್ದೇಶಕರಾದ ಕಾಯಾ ತ್ರಿಪಾಠಿ ಅವರು ಮಾತನಾಡಿ, ಮುಂದಿನ ಐದು ವರ್ಷಗಳ ಅವಧಿಯ ಹಣಕಾಸು ಸೇರ್ಪಡೆ 2025-30 ಮಾರ್ಗಸೂಚಿಯನ್ನು ಸಿದ್ಧಪಡಿಸುವ ಅಗತ್ಯತೆಯನ್ನು ವಿವರಿಸಿದರು. ಡೇಟಾ ಅಪ್ಡೇಟ್ ಪ್ರಕ್ರಿಯೆಯನ್ನು ಸುಲಭಗೊಳಿಸಲು ಇರುವ ಸಂಯೋಜಿತ ಪೋರ್ಟಲ್ ಬಳಕೆಯ ಬಗ್ಗೆಯೂ ಅವರು ಮಾಹಿತಿ ನೀಡಿದರು.**

**ನಬಾರ್ಡ್‌ನ ಮುಖ್ಯ ಮಹಾಪ್ರಬಂಧಕರಾದ ಡಾ. ಸುರೇಂದ್ರ ಬಾಬು ಅವರು, ಬ್ಯಾಂಕುಗಳು ನಿಗದಿತ ಸಮಯಕ್ಕಿಂತ ಮುಂಚಿತವಾಗಿಯೇ ತಮ್ಮ ಗುರಿಗಳನ್ನು ತಲುಪಲು ಗಮನಹರಿಸಬೇಕು ಎಂದರು.**








# ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನ ದುರುಪಯೋಗ: ಕ್ರಮಕ್ಕೆ ಆಗ್ರಹ

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನವನ್ನು ದುರುಪಯೋಗಪಡಿಸಿಕೊಂಡಿರುವ ದಲಿತ ವಿರೋಧಿ ಪಾಲಿಕೆ ಅಧಿಕಾರಿಗಳ ವಿರುದ್ಧ ಕಠಿಣ ಶಿಸ್ತು ಕ್ರಮ ಜರುಗಿಸಬೇಕು ಮತ್ತು ಅವರ ವಿರುದ್ಧ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೆ ಮನವಿ ಪತ್ರ ಸಲ್ಲಿಸಲಾಯಿತು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯಾಧ್ಯಕ್ಷರಾದ ಶ್ರೀ ಚಳುವಳಿ ಅಯ್ಯಪ್ಪ ಕೆ. ರವರ ನೇತೃತ್ವದಲ್ಲಿ ಆಯೋಗಕ್ಕೆ ಹಕ್ಕೊತ್ತಾಯಗಳ ಮನವಿ ಪತ್ರವನ್ನು ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಬೆಂಗಳೂರು ನಗರ ಜಿಲ್ಲಾಧ್ಯಕ್ಷರಾದ ಎನ್. ಪ್ರಸಾದ್, ಮುಖಂಡರಾದ ಶ್ರೀಮತಿ ಮಂಜುಳಾ ಸೇರಿದಂತೆ ಸಂಘಟನೆಯ ಪ್ರಮುಖ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮನವಿ ಪತ್ರ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯಾಧ್ಯಕ್ಷ ಚಳುವಳಿ ಅಯ್ಯಪ್ಪ ಅವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನವಸತಿ ಪ್ರದೇಶಗಳಲ್ಲಿ ರಸ್ತೆ, ಕುಡಿಯುವ ನೀರು, ಒಳಚರಂಡಿಯಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೋಟ್ಯಂತರ ರೂಪಾಯಿ ಅನುದಾನ ಹಂಚಿಕೆ ಮಾಡುತ್ತದೆ. ಆದರೆ, ಪಾಲಿಕೆಯ ಕೆಲವು ದಲಿತ ವಿರೋಧಿ ಅಧಿಕಾರಿಗಳು ದಲ್ಲಾಳಿಗಳ (ಬ್ರೋಕರ್‌ಗಳ) ಜೊತೆ ಶಾಮೀಲಾಗಿ ಈ ಹಣವನ್ನು ಸಂಪೂರ್ಣವಾಗಿ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಗಂಭೀರವಾಗಿ ಆರೋಪಿಸಿದರು. ಅರ್ಹ ಫಲಾನುಭವಿಗಳಿಗೆ ಸೇರಬೇಕಾದ ಸೌಲಭ್ಯಗಳನ್ನು ವಂಚಿಸಿ, ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿದ ಅಧಿಕಾರಿಗಳ ವಿರುದ್ಧ ಇಲಾಖಾ ಮಟ್ಟದ ಶಿಸ್ತು ಕ್ರಮ ಕೈಗೊಳ್ಳಬೇಕು. ಅಷ್ಟೇ ಅಲ್ಲದೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಯ್ದೆಯಡಿ ಇಂತಹ ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಸಂಬಂಧಪಟ್ಟ ಪೊಲೀಸ್ ಇಲಾಖೆಗೆ ಆಯೋಗವು ಸೂಕ್ತ ನಿರ್ದೇಶನ ನೀಡಬೇಕು,'' ಎಂದು ಸಮಿತಿಯ ಬೆಂಗಳೂರು ನಗರ ಜಿಲ್ಲಾಧ್ಯಕ್ಷ ಎನ್. ಪ್ರಸಾದ್ ಒತ್ತಾಯಿಸಿದರು.

# ಬಕ್ರೀದ್‌ಗೆ ಬಕ್ರಾ ಬಿಕರಿ ಜೋರು

• ಉದಯವಾಹಿನಿ, ದೇವನಹಳ್ಳಿ

ಬಕ್ರೀದ್ ಹಬ್ಬಕ್ಕೆ ಸ್ಥಳೀಯ ಕುರಿ, ಮೇಕೆ, ನಾಟಿ ಕೋಳಿಗೆ ಹೆಚ್ಚು ಬೇಡಿಕೆ ಬಂದಿರುವುದು ರೈತಾಪಿ ವರ್ಗಕ್ಕೆ ಆದಾಯ ತರಿಸಿದೆ.

ಹಬ್ಬದ ಹಿನ್ನೆಲೆಯಲ್ಲಿ ವಿಜಯಪುರ ಸಮೀಪದ ಇಂಡಿಗಾನಹಳ್ಳಿ, ಯಲಿಯೂರು ಸಂತೆಗಳಲ್ಲಿ ಕುರಿ, ಮೇಕೆಗಳ ಮಾರಾಟ ಜೋರಾಗಿತ್ತು. ಸಾಮಾನ್ಯ ದಿನಗಳಿಗಿಂತ ಸಂತೆಗಳಲ್ಲಿ ಕುರಿ, ಮೇಕೆ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿದ್ದವು. ಅಲ್ಲದೇ ಹಬ್ಬಕ್ಕಾಗಿ ಮುಸ್ಲಿಮರು ರೈತರಿಂದ ನೇರವಾಗಿ ಕುರಿ, ಮೇಕೆಗಳನ್ನು ಖರೀದಿಸಿ ತಂದು ಮನೆಯ ಅಂಗಳದಲ್ಲಿ ಕಟ್ಟಿ ಹಾಕಿದ್ದಾರೆ. ಮಾಂಸದ ವ್ಯಾಪಾರಿಗಳು ಅಂಗಡಿ ಮಂಡಿಯ ಎದುರು ಮಾರಾಟಕ್ಕೆ ಸಿದ್ಧತೆ ನಡೆಸಿದ್ದಾರೆ.

ಮಾಂಸದ ಅಂಗಡಿಗಳಲ್ಲಿ ಕುರಿ ಮತ್ತು ಮೇಕೆ ಕೆ.ಜಿ 800, ಫಾರಂ ಕೋಳಿ 300, ನಾಟಿ ಕೋಳಿ 650ಕ್ಕೆ ಮಾರಾಟ ಆಗುತ್ತಿದೆ.

'ಕಳೆದ ಏಳು ವರ್ಷಗಳಿಂದ ನಾನು ಕುರಿ ಸಾಕಾಣಿಕೆ ಮಾಡುತ್ತಿರುವೆ. ಪ್ರತಿ ವರ್ಷ ಬಕ್ರೀದ್‌ಗೆ ಕುರಿಗಳನ್ನು ಮಾರಾಟ ಮಾಡುವೆ. ಈ ವರ್ಷ 30 ಕುರಿಗಳನ್ನು ಸಾಕಿರುವೆ. ಈಗಾಗಲೇ 20 ಕುರಿಗಳನ್ನು ಮಾರಾಟ ಮಾಡಿರುವೆ. 25 ರಿಂದ 30 ಕೆ.ಜಿ ಬರುವ ಕುರಿ 25 ರಿಂದ 30 ಸಾವಿರ ನಂತೆ ಒಳ್ಳೆಯ ಬೆಲೆಗೆ ಮಾರಾಟ ಮಾಡಿದ್ದು, ಒಳ್ಳೆಯ ಲಾಭ ಸಿಕ್ಕಿದೆ. ಮೇಕೆಗಳು ಸಹ ಉತ್ತಮ ಬೆಲೆಗೆ ಮಾರಾಟವಾಗುತ್ತಿದೆ' ಎಂದು ಎನ್ನುತ್ತಾರೆ ಗುರುಪ್ಪನ ಮಠದ ರೈತ ನಾಗರಾಜ್.

# ಇತಿಹಾಸ ಪ್ರಸಿದ್ಧ ಬಸವೇಶ್ವರಸ್ವಾಮಿ ಜಯಂತ್ಯುತ್ಸವ ಮುಕ್ತಾಯ

• ಉದಯವಾಹಿನಿ,ಹೊಸಕೋಟೆ

ಗ್ರಾಮದಲ್ಲಿ ಎರಡು ದಿನಗಳಿಂದ ನಡೆದ ಇತಿಹಾಸ ಪ್ರಸಿದ್ದ ಬಸವೇಶ್ವರಸ್ವಾಮಿ ಜಯಂತ್ಯುತ್ಸವ ಭಾನುವಾರ ಮುಕ್ತಾಯವಾಯಿತು.

ವಿಜಯಪುರ ಜಿಲ್ಲೆಯ ಬಸವಕಲ್ಯಾಣ ಮಠದ ಪೀಠಾಧಿಪತಿ ಮಹದೇವಸ್ವಾಮಿ ಹಾಗೂ ನಾಗಲಾಪುರ ಸಂಸ್ಥಾನ ಮಠದ ಪೀಠಾಧಿಪತಿ ತೇಜೇಶಲಿಂಗ ಶಿವಾಚಾರ್ಯಸ್ವಾಮಿ ಅವರನ್ನು ಪಲ್ಲಕಿಯಲ್ಲಿ ಗ್ರಾಮದ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಪಲ್ಲಕ್ಕಿ ಯೊಂದಿಗೆ ಬಸವೇಶ್ವರಸ್ವಾಮಿಯ ಉತ್ಸವವು ವೀರಗಾಸೆಯ ನೃತ್ಯ ಹಾಗೂ ವಾದ್ಯಗೋಷ್ಠಿಯೊಂದಿಗೆ ಅಗ್ನಿಕೊಂಡ ಪ್ರವೇಶಿಸಿತು. ನಂತರ ವೀರಶೈವ ಲಿಂಗಾಯತ ಸಮುದಾಯದವರಿಂದ ದೀಪಾರತಿ ಮಾಡುವುದರೊಂದಿಗೆ ಕಾರ್ಯಕ್ರಮಕ್ಕೆ ತೆರೆ ಎಳೆಯಲಾಯಿತು. ದೇವಾಲಯದ ಪ್ರಧಾನ ಅರ್ಚಕ ಬಸವ ಆರಾಧ್ಯಸ್ವಾಮಿ, ತಾವರೆಕೆರೆ ಬಸವ ಸೇವಾ ಸಮಿತಿಯ ಪದಾಧಿಕಾರಿಗಳು ಗ್ರಾಮಸ್ಥರು ಹಾಗೂ ವೀರಶೈವ ಲಿಂಗಾಯತ ಸಮುದಾಯದ ಕುಟುಂಬಸ್ಥರು ಇದ್ದರು.

# ಕನಿಷ್ಠ ವೇತನ ಪರಿಷ್ಕರಣೆ: ಕೂಡಲೇ ಜಾರಿಗೊಳಿಸಿ;ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ

• ಉದಯವಾಹಿನಿ, ಬೆಂಗಳೂರು

ಕನಿಷ್ಠ ವೇತನ ಪರಿಷ್ಕರಣೆ ಕುರಿತು ರಾಜ್ಯ ಸರ್ಕಾರ ಹೊರಡಿಸಿರುವ ಅಂತಿಮ ಅಧಿಸೂಚನೆಯನ್ನು ಕೂಡಲೇ ಅನುಷ್ಠಾನಗೊಳಿಸಬೇಕು. ಮಾಲೀಕರ ಒತ್ತಡಕ್ಕೆ ಮಣಿದು ಅದನ್ನು ಹಿಂಪಡೆದರೆ ಪ್ರತಿಭಟನೆ ನಡೆಸಲಾಗುವುದು ಎಂದು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ತಿಳಿಸಿದೆ. ನಡೆದ ಸುದ್ದಿಗೋಷ್ಠಿಯಲ್ಲಿ ಸಮಿತಿಯ ರಾಜ್ಯ ಸಂಚಾಲಕ ಕೆ.ವಿ. ಭಟ್, ಮುಖಂಡರಾದ ಜಿ.ಆರ್. ಶಿವಶಂಕರ್, ಮೀನಾಕ್ಷಿ ಸುಂದರಂ, ಮೈತ್ರೇಯಿ ಕೃಷ್ಣನ್, ನಾಗಾಸುಂದರಂ, ರಮಾದೇವಿ ಕಾಳಪ್ಪ, ಬಾಬು ಮ್ಯಾಥ್ಯ ಮಾತನಾಡಿದರು.

ಕಾರ್ಮಿಕರ ಕನಿಷ್ಠ ವೇತನ ಪರಿಷ್ಕರಣೆಗೆ ಆಗ್ರಹಿಸಿ ಮೇ 27 ರಂದು ಆಯೋಜಿಸಿದ್ದ ಪ್ರತಿಭಟನೆಯನ್ನು ಹಿಂಪಡೆಯಲಾಗಿದೆ. ರಾಜ್ಯ ಸರ್ಕಾರ ವೈಜ್ಞಾನಿಕವಾಗಿ ಕಾರ್ಮಿಕರ ಕನಿಷ್ಠ ವೇತನ ಪರಿಷ್ಕರಣೆಗೆ ಮುಂದಾಗಿರುವುದು ಸ್ವಾಗತಾರ್ಹ.

# ದೇಶದ ವೈಜ್ಞಾನಿಕ ಪ್ರಗತಿಗೆ ಪ್ರಯತ್ನಿಸಿದ್ದ ನೆಹರೂ: ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿ ದೇಶದ ಪ್ರಗತಿಯನ್ನು ವೈಜ್ಞಾನಿಕವಾಗಿ ಸಾಧಿಸುವ ಪ್ರಯತ್ನ ಮಾಡಿದ್ದ ಜವಾಹರಲಾಲ್ ನೆಹರೂ ಅವರು ಆಧುನಿಕ ಭಾರತದ ನಿರ್ಮಾಣದಲ್ಲಿ ದೊಡ್ಡ ಪಾತ್ರ ವಹಿಸಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನೆಹರೂ ಅವರ 62ನೇ ಪುಣ್ಯತಿಥಿಯ ಪ್ರಯುಕ್ತ ವಿಧಾನಸೌಧದ




ಆವರಣದಲ್ಲಿರುವ ನೆಹರೂ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಮೊದಲ ಪ್ರಧಾನಿಯಾಗಿ 17 ವರ್ಷ ಜನಸೇವೆ ಮಾಡಿದ್ದಾರೆ. ಸಮಾಜವಾದಿ ಮತ್ತು ಮಿಶ್ರ ಆರ್ಥಿಕತೆಗೆ ಹೆಚ್ಚು ಒತ್ತು ನೀಡಿ ಬೃಹತ್ ಅಣೆಕಟ್ಟುಗಳ ನಿರ್ಮಾಣ, ಶಿಕ್ಷಣ, ಸಹಕಾರ ಕ್ಷೇತ್ರಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ಕಾರಣಕರ್ತರಾದರು ಎಂದು ನೆನಪು ಮಾಡಿಕೊಂಡರು. **ಕೆಪಿಸಿಸಿ ಕಚೇರಿಗೆ ಬಾರದ ಸಿಎಂ:** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ನೆಹರೂ ಪುಣ್ಯ ಸ್ಮರಣೆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬರುತ್ತಾರೆ ಎಂದು ಸಚಿವರು, ಮಾಜಿ ಸಚಿವರಾದಿಯಾಗಿ ಕಾಂಗ್ರೆಸ್‌ನ ಅನೇಕರು ಕಾದು ಕುಳಿತಿದ್ದರು. ಸಿದ್ದರಾಮಯ್ಯ ಅವರು ವಿಧಾನಸೌಧದ ಮುಂಭಾಗದಲ್ಲಿ ಪುಷ್ಪನಮನ ಸಲ್ಲಿಸಿದ ಬಳಿಕ ನೇರವಾಗಿ ಕಾವೇರಿ ನಿವಾಸಕ್ಕೆ ತೆರಳಿದರು.

# ನಾಲ್ವರು ಆರೋಪಿಗಳ ಬಂಧನ

• ಉದಯವಾಹಿನಿ, ಬೆಂಗಳೂರು

ಮಾಜಿ ಪ್ರಿಯತಮೆಯ ಭೇಟಿಗೆ ಬಂದು ಆಕೆಯ ಕುಟುಂಬಸ್ಥರಿಂದ ಹಲ್ಲೆಗೊಳಗಾದ ವ್ಯಕ್ತಿ ಸಾವನ್ನಪ್ಪಿದ ಘಟನೆ ನಗರದಲ್ಲಿ ನಡೆದಿದೆ. ಮೇ 25ರಂದು ಬ್ಯಾಟರಾಯನಪುರ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಮೃತನನ್ನು ರಾಮನಗರ ಮೂಲದ ಖಾಸಿಂ ಎಂದು ಗುರುತಿಸಲಾಗಿದೆ. ಖಾಸಿಂ ಪೋಷಕರು ನೀಡಿದ ದೂರಿನನ್ವಯ ಅರ್ಬಿಯಾ ಕೌಸರ್, ಆಕೆಯ ಪತಿ ಮೊಹಮ್ಮದ್ ಅಕ್ಬರ್, ಸಂಬಂಧಿಕರಾದ ಓವೈಸ್ ಪಾಶಾ ಹಾಗೂ ಮೊಹಮ್ಮದ್ ಚಾಂದ್ ಪಾಶಾ ಎಂಬ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ರಾಮನಗರದಲ್ಲಿ ಗುಜುರಿ ವ್ಯಾಪಾರ ಮಾಡುತ್ತಿದ್ದ ಖಾಸಿಂಗೆ ಇತ್ತೀಚೆಗೆ ಸಾಮಾಜಿಕ ಜಾಲತಾಣದ ಮೂಲಕ ತನ್ನ ಮಾಜಿ ಪ್ರೇಯಸಿ ಅರ್ಬಿಯಾಳ ಜೊತೆ ಸಂಪರ್ಕ ಏರ್ಪಟ್ಟಿತ್ತು. ಘಟನೆಯ ದಿನ ಯಾರೂ ಇರದಿದ್ದಾಗ ಅರ್ಬಿಯಾಳ ಮನೆಗೆ ಖಾಸಿಂ ಭೇಟಿ ನೀಡಿದ್ದ. ಇಬ್ಬರೂ ಮನೆಯಲ್ಲಿದ್ದಾಗ ಆಕೆಯ ಪತಿ ಮೊಹಮ್ಮದ್ ಅಕ್ಬರ್ ಕೈಗೆ ಸಿಕ್ಕಿಹಾಕಿಕೊಂಡಿದ್ದರು. ಈ ವೇಳೆ ಅಕ್ಬರ್ ಮತ್ತು ಆತನ ಕುಟುಂಬದ ಸದಸ್ಯರು ಖಾಸಿಂ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಿ, ಎಚ್ಚರಿಕೆ ನೀಡಿ ಬಿಟ್ಟು ಕಳಿಸಿದ್ದರು.

ತಲೆಗೆ ತೀವ್ರವಾಗಿ ಗಾಯಗೊಂಡಿದ್ದ ಖಾಸಿಂ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾನೆ. ನಂತರ ಮೃತನ ಪೋಷಕರು ಬ್ಯಾಟರಾಯನಪುರ ಠಾಣೆಗೆ ದೂರು ನೀಡಿದ್ದರು.ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿರುವ ಪೊಲೀಸರು ಅರ್ಬಿಯಾ, ಆಕೆಯ ಪತಿ ಮೊಹಮ್ಮದ್ ಅಕ್ಬರ್ ಸೇರಿದಂತೆ ನಾಲ್ವರು ಆರೋಪಿಗಳನ್ನೂ ಬಂಧಿಸಿರುವುದಾಗಿ ತಿಳಿಸಿದ್ದಾರೆ. ಆಟೋ ಚಾಲಕನ ಹತ್ಯೆಗೈದು ಹೂತುಹಾಕಿದ ಸ್ನೇಹಿತರು ಹಣಕಾಸಿನ ವಿಚಾರಕ್ಕೆ ಆಟೋ ಚಾಲಕನನ್ನು ಸ್ನೇಹಿತರೇ ಬರ್ಬರವಾಗಿ ಹತ್ಯೆಗೈದು ನಿರ್ಜನ ಪ್ರದೇಶದಲ್ಲಿ ಹೂತುಹಾಕಿದ ಆತಂಕಕಾರಿ ಘಟನೆ ಬೆಂಗಳೂರಿನ ಕುಂಬಳಗೋಡಿನ ರಾಮಸಂದ್ರ ಕೆರೆ ಬಳಿ ಇತ್ತೀಚಿಗೆ ನಡೆದಿತ್ತು. ತಾವರೆಕೆರೆಯ ಉದಯ ಲೇಔಟ್ ನಿವಾಸಿಯಾಗಿದ್ದ ರಕ್ಷಿತ್ ಎನ್ (25) ಹತ್ಯೆಯಾದವರು. ಆರೋಪಿಗಳ ಪೈಕಿ ಮೋಹಿನ್ ಪಾಶಾ ಎಂಬಾತನನ್ನು ಬಂಧಿಸಲಾಗಿದ್ದು, ಹಸನ್ ಎಂಬಾತನಿಗಾಗಿ ಹುಡುಕಾಟ ಮುಂದುವರೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದರು. ಪ್ಯಾಸೆಂಜರ್ ಆಟೋ ಚಾಲಕನಾಗಿದ್ದ ರಕ್ಷಿತ್ ಎನ್. ತನ್ನ ಸ್ನೇಹಿತ ಕಂಬೀಪುರದ ವಾಸಿ ಮೋಹಿನ್ ಪಾಶಾಗೆ ಹಣ ನೀಡಿದ್ದ. ಹಣ ವಾಪಸ್ ಪಡೆದುಕೊಂಡು ಬರುವುದಾಗಿ ಮೇ 24ರಂದು ಸಂಜೆ 6 ಗಂಟೆಗೆ ಮನೆಯಿಂದ ತೆರಳಿದ್ದವನು ಮರಳಿರಲಿಲ್ಲ. ನಂತರ ಮೇ 25ರಂದು ರಕ್ಷಿತ್ ತಾಯಿ ಕಂಬೀಪುರಕ್ಕೆ ತೆರಳಿ ಮೋಹಿನ್ ಪಾಶಾನ ಬಳಿ ಮಗನ ಬಗ್ಗೆ ವಿಚಾರಿಸಿದ್ದರು. ಆಗ ಆರೋಪಿಗಳು ಹಣಕಾಸಿನ ವಿಚಾರಕ್ಕೆ ರಕ್ಷಿತ್ ಜೊತೆ ಗಲಾಟೆ ಮಾಡಿಕೊಂಡು ಆತನ ತಲೆ ಮೇಲೆ ಕಲ್ಲು ಎತ್ತಿಹಾಕಿ ಹತ್ಯೆಗೈದು, ರಾಮಸಂದ್ರದ ಕೆರೆಯ ಬಳಿ ಹೂತಿರುವುದಾಗಿ ಹಾಗೂ ಆತನ ಆಟೋವನ್ನು ಜ್ಞಾನಭಾರತಿ ಬಳಿ ಬಿಟ್ಟಿರುವುದಾಗಿ ಮೋಹಿನ್ ಪಾಶಾ ಬಾಯಿಬಿಟ್ಟಿದ್ದ.

# 3000 ಕೋಟಿ ಹಗರಣ ಮಾಡಿದೆ ಅವರ ವಿರುದ್ಧ ಕಾನೂನು ಕ್ರಮ

• ಉದಯವಾಹಿನಿ,ಕೆಆರ್‌ಪುರ

32 ಎಕರೆ ಕೆಐಎಡಿಬಿ ಮಂಡಳಿಗೆ ಸೇರಿದ ಸರ್ಕಾರಿ ಜಾಗವನ್ನು ಆಕ್ರಮಿಸಿಕೊಂಡಿರುವ ಸಾಯಿ ಲಕ್ಷ್ಮಿ ಇಂಡಸ್ಟ್ರಿಯಲ್ ಪ್ರೈ.ಲಿ. ಕಂಪನಿ 3000 ಕೋಟಿ ಹಗರಣ ಮಾಡಿದೆ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೇಂದು ಆಗ್ರಹಿಸಿ ಜೈ ಭೀಮ್ ಕರ್ನಾಟಕ ರಾಜ್ಯಾಧ್ಯಕ್ಷ ಎಂ. ಅಣ್ಣಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಮಹದೇವಪುರ ಕ್ಷೇತ್ರದ ಕನ್ನಮಂಗಳ ಗ್ರಾಮದ ಹಲವು ಸರ್ವೆ ನಂಬರ್ ಗಳಲ್ಲಿ ಆಕ್ರಮ ನಡೆದಿದ್ದು ನ್ಯಾಯಾಲಯ ಆದೇಶವನ್ನು ಆಕ್ರಮ ಕಟ್ಟಡಗಳ ಮೇಲೆ ಬರೆದು ನಂತರ ಮಾತನಾಡಿದ ಅವರು. ಸಾಯಿ ಲಕ್ಷ್ಮಿ ಇಂಡಸ್ಟ್ರಿಯಲ್ ಕಂಪನಿ ಹಲವು ವರ್ಷಗಳ ನಂತರ ಕಂಪನಿ ಶಾಶ್ವತವಾಗಿ ಮುಚ್ಚಿದ್ದು. ಕೆಐಎಡಿಬಿ ಮಂಡಳಿಗೆ ತಿಳಿಸದೆ ಸ್ಥಳೀಯ ಪಿಡಿಒ ಅಧಿಕಾರಿಗಳನ್ನು ಶಾಮೀಲು ಮಾಡಿಕೊಂಡು ಇಲ್ಲಿನ ಸರ್ಕಾರಿ ಜಾಗದಲ್ಲಿ ವಿಲ್ಲಾ, ಅಪಾರ್ಟ್ಮೆಂಟ್, ಫ್ಲಾಟ್‌ಗಳನ್ನು ನಿರ್ಮಿಸಿ ಮಾರಾಟ




ಮಾಡುವ ಹಗರಣವನ್ನು ಎಸಗಿದ್ದಾರೆ. ಸಿಎ ಜಾಗವನ್ನು ಸಹ ಖಾಸಗಿ ಶಾಲೆಗಳಿಗೆ ಮಾರಾಟ ಮಾಡಿದ್ದಾರೆ ಎಂದು ದೂರಿದರು. 3000 ಕೋಟಿ ಪ್ರಾಜೆಕ್ಟ್ ಹಗರಣವನ್ನು ಬಯಲು ಮಾಡಲು ಸಂಘಟನೆ ಸುಮಾರು 5 ವರ್ಷಗಳಿಂದ ಹೋರಾಟ ಮಾಡುತ್ತಿದ್ದು, ಮುಖ್ಯಮಂತ್ರಿಗಳಿಂದ ಹಿಡಿದು ಸ್ಥಳೀಯ ಎಲ್ಲಾ ಅಧಿಕಾರಿಗಳವರೆಗೂ ಈ ವಿರುದ್ಧ ದೂರು ದಾಖಲಿಸಿದ್ದರು ಯಾವುದೇ ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ವಿಚಾರವಾಗಿ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಡಬ್ಲ್ಯು ಪಿ ನಂಬರ್ ಮಾಡಿಸಲಾಗಿದೆ. ಇಂದು ಓಎಸ್ ನಂಬರ್‌ಗಳನ್ನು ಬರೆದು ಬರಲಾಗಿದೆ, ಮುಂದಿನ ದಿನಗಳಲ್ಲಿ ಈ ಹೋರಾಟದ ಮೂಲಕ ಸರ್ಕಾರಿ ಜಾಗವನ್ನು ಸರ್ಕಾರಕ್ಕೆ ಮರಳಿಸುವಂತಹ ಪ್ರಯತ್ನವನ್ನು ಮಾಡಲಾಗುತ್ತಿದೆ ಎಂದರು.

ಕೆಐಎಡಿಬಿ ಮಂಡಳಿಗೆ ಹಲವು ರೈತರ ಭೂಮಿಯನ್ನು ಮರುಮಂಜೂರಾತಿ ಮಾಡಿಕೊಡಬೇಕು ಮತ್ತು ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ನೀಡಬೇಕು, ಕೆಐಎಡಿಬಿ ಸ್ಥಳವನ್ನು ಕೆಐಎಡಿಬಿ ಹಿಂದಿರುಗಿಸಬೇಕೆಂದರು. ಇದೇವೇಳೆ ಗೋಡೆಗಳ ಮೇಲೆ ಬರೆದಿದ್ದ ಒ. ಎಸ್ ನಂಬರ್ ಗಳನ್ನು ಪೈಂಟ್ ಹಚ್ಚಿ ಮುಚ್ಚಿದ್ದಾರೆ.

ಇದು ಕಾನೂನು ಬಾಹಿರ ಎಂದರು. ಕಾಡುಗೋಡಿ ಡಿ ಎಸ್ ಎಸ್ ಪ್ರಕಾಶ್, ಜೈ ಭೀಮ್ ಕರ್ನಾಟಕ ಗುಂಡಣ್ಣ, ನಡವತ್ತಿ ವಾಟಾಳ್ ನಾಗರಾಜ್, ಮೇತನಹಳ್ಳಿ, ವೈ ಎಸ್ ಕೆ ಸಂತೋಷ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಅಂದು, ಇಂದು, ಎಂದೆಂದೂ ಒಗ್ಗಟ್ಟೇ ನಮ್ಮ ಶಕ್ತಿ: ಕಾಂಗ್ರೆಸ್ ಟ್ವೀಟ್

• ಉದಯವಾಹಿನಿ, ಬೆಂಗಳೂರು

ಅಂದು, ಇಂದು, ಎಂದೆಂದೂ ಒಗ್ಗಟ್ಟೇ ನಮ್ಮ ಶಕ್ತಿ ಎಂದು ಕರ್ನಾಟಕ ಕಾಂಗ್ರೆಸ್ ಮತ್ತೊಮ್ಮೆ ಒತ್ತಿ ಹೇಳಿದೆ. ಸಿಎಂ ವಿದಾಯದ ಬ್ರೇಕ್‌ಫಾಸ್ಟ್ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಪರಸ್ಪರ ಅಪ್ಪಿಕೊಂಡ ಮತ್ತು ಡಿಕೆಶಿ ಸಿಎಂ ಸಿದ್ದರಾಮಯ್ಯರ ಕಾಲಿಗೆ ಬಿದ್ದು ಆಶೀರ್ವಾದ ತೆಗೆದುಕೊಳ್ಳುತ್ತಿರುವ ಫೋಟೋಗಳನ್ನು ಕರ್ನಾಟಕ ಕಾಂಗ್ರೆಸ್ ಎಕ್ಸ್‌ನಲ್ಲಿ ಹಂಚಿಕೊಂಡಿದೆ. ಸಿಎಂ-ಡಿಸಿಎಂ ಫೋಟೋಗಳನ್ನು ಹಂಚಿಕೊಂಡ ಕಾಂಗ್ರೆಸ್, ಅಂದು ಇಂದು ಎಂದೆಂದೂ ಒಗ್ಗಟ್ಟೇ ನಮ್ಮ ಶಕ್ತಿ.

ನನಗೆ ಯಾವುದೇ ನೋವಿಲ್ಲ, ಮನಃಪೂರ್ವಕವಾಗಿ ರಾಜೀನಾಮೆ ನೀಡುತ್ತಿದ್ದೇನೆ ಎಂದು ಸಿಎಂ ಸಿದ್ದರಾಮಯ್ಯ ವಿದಾಯದ ಬ್ರೇಕ್‌ಫಾಸ್ಟ್‌ನಲ್ಲಿ ನುಡಿದಿದ್ದಾರೆ. ಮಂತ್ರಿಗಳ ಜೊತೆಗಿನ ಉಪಹಾರ ಸಭೆಯಲ್ಲಿ ಮಾತನಾಡಿದ ಅವರು, ಹೈಕಮಾಂಡ್ ಹೇಳುವುವುದನ್ನು ಪಾಲನೆ ಮಾಡುವುದು ನನ್ನ ಕರ್ತವ್ಯ ಎಂದು ನುಡಿದಿದ್ದಾರೆ.

ಸಿದ್ದರಾಮಯ್ಯ ಸಂಪುಟ ಸಹೋದ್ಯೋಗಿಗಳ ಮುಂದೆ ರಾಜೀನಾಮೆ ನೀಡುವ ನಿರ್ಧಾರ ಪ್ರಕಟಿಸಿದರು.

# ಕನ್ನಡ ಸಾಮ್ರಾಜ್ಯೋತ್ಸವ ಮನೆಯ ಉತ್ಸವವಾಗಲಿ

• ಉದಯವಾಹಿನಿ ,ಬೆಂಗಳೂರು

ಕರ್ನಾಟಕದ ಇತಿಹಾಸ ವಿಶ್ವದ ಮಾನ್ಯತೆ ಪಡೆದು ಕನ್ನಡ ಭಾಷೆಗೆ ಶ್ರೀಮಂತಿಕೆಯನ್ನು ತಂದಿದೆ ಕನ್ನಡ ಸಾಮ್ರಾಜ್ಯದ ಉದಯಕ್ಕೆ ಮೂಲ ಕಾರಣವಾದ ಮಯೂರನ ಆಡಳಿತ ಕನ್ನಡಿಗರ ಮನದಲ್ಲಿ ಶಾಶ್ವತವಾಗಿ ಆಚರಣೆಯಾಗಬೇಕು ಮಯೂರವರ್ಮನ ನಾಡಪ್ರೇಮ ಅಮರವಾಗಬೇಕು ವಿಶ್ವ ಮಟ್ಟದಲ್ಲಿ ಕನ್ನಡ ಸಾಮ್ರಾಜ್ಯೋತ್ಸವ ನಡೆಯುತ್ತಿರುವ ಈ ವೇಳೆ ಅತ್ಯಂತ ಮಹತ್ವದ ಸಂಗತಿ ಆಗಿದೆ ಎಂದು ಚಿತ್ರ ಸಾಹಿತಿ ವಿ ನಾಗೇಂದ್ರ ಪ್ರಸಾದ್ ಅಭಿಪ್ರಾಯ ಪಟ್ಟರು.

ಕನ್ನಡ ಮೊದಲು ಬಳಗದ ವತಿಯಿಂದ ನಡೆದ ಮಯೂರ ವರ್ಮನ ನೆನಪಿನ ಕನ್ನಡ ಸಾಮ್ರಾಜ್ಯೋತ್ಸವ ಕಾರ್ಯಕ್ರಮವನ್ನು ಕುರುಬರಹಳ್ಳಿಯ ಚಾಲುಕ್ಯ ಡಾ. ರಾಜಕುಮಾರ್ ಟ್ರಸ್ಟ್ ಸ್ಥಳದಲ್ಲಿನ ಮಯೂರವರ್ಮನ ಪ್ರತಿಮೆಗೆ ಕಿರೀಟಧಾರಣೆ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಕನ್ನಡ ಮೊದಲು ಬಳಗದ ಅಧ್ಯಕ್ಷರಾದ ಜ್ಞಾನೇಶ್ವರ ಮಧು ಅವರು ಮಾತನಾಡುತ್ತಾ ಕನ್ನಡ ಸಾಮ್ರಾಜ್ಯ ಉದಯವಾಗಿ 1681 ವರ್ಷಗಳ ಇತಿಹಾಸ ನಮ್ಮಲ್ಲಿ ಕಂಡು ಬಂದಿದೆ ಎಂದು ತಿಳಿಸಿದರು.





ಕಾರ್ಯಕ್ರಮದಲ್ಲಿ ಕನ್ನಡಪರ ಹೋರಾಟಗಾರರಾದ ರಾ ಲಕ್ಷ್ಮ ನಾರಾಯಣ್, ಕುರುಬರಹಳ್ಳಿ ರಮೇಶ್, ಶಶಿಕುಮಾರ್,ಯಲ್ಲಪ್ಪ. ವೈ. ಕುಂಬಾರ, ಶ್ರೀರಾಜ್ , ಶ್ರೀಮತಿ ಸಾರಿಕಾ ಶ್ರೀಮತಿ ವಾಣಿ , ಜಯರಾಮ್, ಪ್ರಭು, ಹೀಗೆ ನೂರಾರು ಮಂದಿ ಗಣ್ಯರು ಭಾಗವಹಿಸಿದ್ದರು.

### ಮಯೂರವರ್ಮನ ನೆನಪು

**ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಸ್ಪೈನ್ ಇಟಲಿ ದುಬೈ ಸೇರಿದಂತೆ ರಾಜ್ಯದ ಅನೇಕ ಕನ್ನಡಪರ ಮನಸ್ಸುಗಳು ಕನ್ನಡ ಸಾಮ್ರಾಜ್ಯೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡು ಕನ್ನಡ ಭಾಷೆಯ ಬೆಳವಣಿಗೆಯ ಜೊತೆ ಜೊತೆಗೆ ಮಯೂರವರ್ಮನ ನೆನಪು ಉಳಿಯುವಂತಾಗಬೇಕು ಎಂದು ಕರೆ ನೀಡಿದರು.**

**ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಗೌರವ ಕಾರ್ಯದರ್ಶಿ ನೇಭ ರಾಮಲಿಂಗಶೆಟ್ಟಿ ಶೆಟ್ಟಿ ಮಾತನಾಡುತ್ತಾ ಸಾವಿರಾರು ವರ್ಷಗಳ ಇತಿಹಾಸ ಇರುವ ಕನ್ನಡದ ಭಾಷೆ ಸದಾ ಕಾಲ ಜೀವಂತವಾಗಿರುತ್ತದೆ ಕನ್ನಡ ಚಳುವಳಿಗೆ ನಾಡಿನ ಚಳುವಳಿಗಾರರು ಸಾಹಿತಿಗಳು ಸದಾ ಕಾಲ ಜಾಗೃತರಾಗಿ ಕನ್ನಡ ಭಾಷೆಯನ್ನು ಉಳಿಸುತ್ತಿದ್ದಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.**





# ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಚಿಕ್ಕಬಳ್ಳಾಪುರ ನಗರಕ್ಕೆ ಹೊಂದಿಕೊಂಡಿರುವ ನಂದಿ ಕ್ರಾಸ್ ಬಳಿಯ ತೋಟಗಾರಿಕೆ ಇಲಾಖೆಗೆ ಸೇರಿದ 20 ಎಕರೆಗೂ ಹೆಚ್ಚಿನ ಜಮೀನನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ)ಯಿಂದ ಹೂವಿನ ಮಾರುಕಟ್ಟೆ ನಿರ್ಮಾಣಕ್ಕೆ ಮಂಜೂರು ಮಾಡುವ ಪ್ರಕ್ರಿಯೆ ಪ್ರಶ್ನಿಸಿ, ಹೈಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿದೆ. ಚಿಕ್ಕಬಳ್ಳಾಪುರ ತಾಲ್ಲೂಕಿನ ತಿಪ್ಪೇನಹಳ್ಳಿಯ ಕೃಷಿಕ ಬಿ. ತಿಪ್ಪಾರೆಡ್ಡಿ ಸೇರಿದಂತೆ ಒಟ್ಟು ಆರು ಮಂದಿ ಸ್ಥಳೀಯ ರೈತರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಮತ್ತು ನ್ಯಾಯಮೂರ್ತಿ ಎಸ್. ರಾಚಯ್ಯ ಅವರಿದ್ದ ನ್ಯಾಯಪೀಠ, ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿ ಆಕ್ಷೇಪಣೆ ಸಲ್ಲಿಸಲು ಸೂಚನೆ ನೀಡಿದೆ. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ನಂದಿ ಹೋಬಳಿ, ಯಲುವನಹಳ್ಳಿಯ ವಿವಿಧ ಸರ್ವೇ ನಂಬರ್‌ಗಳಲ್ಲಿರುವ 20 ಎಕರೆಗೂ ಹೆಚ್ಚಿನ ಜಮೀನನ್ನು ಎಪಿಎಂಸಿಗೆ ಹಸ್ತಾಂತರಿಸುವ ಭರದ ಚಟುವಟಿಕೆಗಳು ನಡೆದಿವೆ.

# ರಾಮನಗರ ಜಿಲ್ಲೆಗೆ 5ನೇ 'ಮುಖ್ಯಮಂತ್ರಿ' ಪಟ್ಟ: ಇದುವರೆಗೆ ಸಿಎಂ ಹುದ್ದೆಗೇರಿದವರು..

• ಉದಯವಾಹಿನಿ, ರಾಮನಗರ

ರಾಜ್ಯದಲ್ಲಿ ನಾಯಕತ್ವ ಬದಲಾವಣೆಗೆ ಕಡೆಗೂ ಕಾಲ ಕೂಡಿ ಬಂದಿದೆ. ಜಿಲ್ಲೆಯವರೇ ಆಗಿರುವ ಕನಕಪುರ ಪ್ರತಿನಿಧಿಸುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮುಖ್ಯಮಂತ್ರಿ ಹುದ್ದೆಯ ಹಾದಿ ಬಹುತೇಕ ಅಂತಿಮಗೊಂಡಿದೆ.

ಅಂದುಕೊಂಡಂತೆ ಎಲ್ಲವೂ ಸುಗಮವಾಗಿ ನಡೆದು ಶಿವಕುಮಾರ್ ಅಧಿಕಾರ ಸ್ವೀಕರಿಸಿದರೆ ಜಿಲ್ಲೆಯಿಂದ ಮುಖ್ಯಮಂತ್ರಿ ಹುದ್ದೆಗೇರಿದ ಐದನೇ ರಾಜಕಾರಣಿಯಾಗಲಿದ್ದಾರೆ. ಅದರಲ್ಲೂ, ಕಾಂಗ್ರೆಸ್‌ನಿಂದ ಮುಖ್ಯಮಂತ್ರಿ ಸ್ಥಾನಕ್ಕೇರಿದ ಜಿಲ್ಲೆಯ ಎರಡನೇ ರಾಜಕಾರಣಿ ಎಂಬ ಹೆಗ್ಗಳಿಕೆ ಅವರದ್ದಾಗಲಿದೆ.ಕೆಂಗಲ್ ಹನುಮಂತಯ್ಯ

ಕೆಂಗಲ್ ಹನುಮಂತಯ್ಯ ಕರ್ನಾಟಕದ ಮೊದಲ ಚುನಾಯಿತ ಮುಖ್ಯಮಂತ್ರಿ ಎಂಬ ಖ್ಯಾತಿ ಕೆಂಗಲ್ ಹನುಮಂತಯ್ಯ ಅವರದ್ದು.


ಉದಯವಾಹಿನಿ ಚಿತ್ರ

ರಾಜ್ಯದ ಆಡಳಿತ ಸೌಧವಾದ ವಿಧಾನಸೌಧ ನಿರ್ಮಿಸಿದ ಖ್ಯಾತಿಯ ಇವರು ರಾಮನಗರ ತಾಲ್ಲೂಕಿನವರು. ಅಂದಿನ ಮೈಸೂರು ರಾಜ್ಯದಲ್ಲಿ 1952 ಮತ್ತು 1957ರ ಚುನಾವಣೆಗಳಲ್ಲಿ ರಾಮನಗರ ಕ್ಷೇತ್ರದಿಂದ ಆಯ್ಕೆಯಾಗಿದ್ದರು. 1952ರ ಮೊದಲ ವಿಧಾನಸಭೆಯಲ್ಲಿ ಮುಖ್ಯಮಂತ್ರಿಯಾಗಿದ್ದ ಹನುಮಂತಯ್ಯ ಅವರು 4 ವರ್ಷ 5 ತಿಂಗಳ ಆಡಳಿತ ನಡೆಸಿದ್ದರು.

**ರಾಮಕೃಷ್ಣ ಹೆಗಡೆ :** ರಾಜ್ಯದಲ್ಲಿ 1983ರಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರವಾಗಿ ಜನತಾ ಪಕ್ಷ ಅಧಿಕಾರಕ್ಕೆ ಬಂದಾಗ ರಾಮಕೃಷ್ಣ ಹೆಗಡೆ ಅವರಿಗೆ ಸಿ.ಎಂ ಆಗುವ ಅದೃಷ್ಟ ಬಂತು. ಆಗ, ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯರೂ ಆಗಿರದ ಅವರಿಗೆ ಕನಕಪುರದಲ್ಲಿ ಜನತಾ ಪರಿವಾರದಿಂದ ಮೊದಲ ಬಾರಿಗೆ ಚುನಾಯಿತರಾಗಿದ್ದ ಪಿ.ಜಿ.ಆರ್. ಸಿಂಧ್ಯ ತಮ್ಮ ಸ್ಥಾನ ಬಿಟ್ಟು ಕೊಟ್ಟರು. ಅದೇ ವರ್ಷ ನಡೆದ ಉಪ ಚುನಾವಣೆಯಲ್ಲಿ ಹೆಗಡೆ ಗೆಲುವು ಸಾಧಿಸಿ ಒಂದು ವರ್ಷ ಅಧಿಕಾರದಲ್ಲಿದ್ದರು. **ಎಚ್.ಡಿ. ದೇವೇಗೌಡ:** 1994ರ ನಡೆದ ಚುನಾವಣೆಯಲ್ಲಿ ರಾಮನಗರದಿಂದ ಮೊದಲ ಬಾರಿಗೆ ಎಚ್.ಡಿ. ದೇವೇಗೌಡ ಅವರು ಸ್ಪರ್ಧಿಸಿ ಗೆಲುವು ಸಾಧಿಸಿದರು. ಆಗ ರಾಜ್ಯದಲ್ಲಿ ಜನತಾ ದಳ 115 ಸ್ಥಾನಗಳ ಪ್ರಚಂಡ ಬಹುಮತ ಪಡೆದು ಗೌಡರಿಗೆ ಸಿ.ಎಂ ಆಗುವ ಅವಕಾಶ ಬಂತು. 17 ತಿಂಗಳು ಆಡಳಿತ ನಡೆಸಿದ ಅವರು, ಬದಲಾದ ರಾಜಕೀಯ ಬೆಳವಣಿಗೆಯಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ದೇಶದ ಪ್ರಧಾನಮಂತ್ರಿ ಹುದ್ದೆಗೇರಿದರು.

**ಎಚ್.ಡಿ. ಕುಮಾರಸ್ವಾಮಿ:** ಜಿಲ್ಲೆಯಿಂದ ಎರಡು ಬಾರಿ ಸಿ.ಎಂ ಹುದ್ದೆಗೇರಿದ ಹಿರಿಮೆ ಎಚ್.ಡಿ. ಕುಮಾರಸ್ವಾಮಿ ಅವರದ್ದು. ತಮ್ಮ ತಂದೆಯ ಅದೃಷ್ಟದ ಕ್ಷೇತ್ರವಾದ ರಾಮನಗರದಿಂದ 2004ರಲ್ಲಿ ಸ್ಪರ್ಧಿಸಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದ ಅವರು, 12ನೇ ವಿಧಾನಸಭೆಯಲ್ಲಿ ಜೆಡಿಎಸ್-ಬಿಜೆಪಿ ಸಮ್ಮಿಶ್ರ ಸರ್ಕಾರದಲ್ಲಿ 20 ತಿಂಗಳು ಅಧಿಕಾರ ನಡೆಸಿದ್ದರು.

# ಕೋಲಾರಕ್ಕೆ 3,834 ಕೋಟಿ ಅನುದಾನ

## ವೈದ್ಯಕೀಯ ಕಾಲೇಜು ಸಂಬಂಧ ಪಿಪಿಪಿ ಮಾದರಿಗೆ ಟೀಕೆ

• ಉದಯವಾಹಿನಿ ,ಕೋಲಾರ

ಅಭಿವೃದ್ಧಿ ಕಾಮಗಾರಿ, ಗ್ಯಾರಂಟಿ ಯೋಜನೆ ಹಾಗೂ ಹಾಲಿನ ಪ್ರೋತ್ಸಾಹಧನ ಸೇರಿ ಕೋಲಾರ ವಿಧಾನಸಭಾ ಕ್ಷೇತ್ರಕ್ಕೆ ಮೂರು ವರ್ಷಗಳಲ್ಲಿ ಒಟ್ಟು 3,834.37 ಕೋಟಿ ಅನುದಾನ ಸಿಕ್ಕಿದೆ. ಬರೀ ಅಭಿವೃದ್ಧಿ ಕಾಮಗಾರಿಗೆಂದೇ 2,583.43 ಕೋಟಿ ಲಭಿಸಿದೆ ಎಂದು ಶಾಸಕ ಕೊತ್ತೂರು ಮಂಜುನಾಥ್ ತಿಳಿಸಿದರು.

ನಗರ ಹೊರವಲಯದ ಅರಣ್ಯ ಇಲಾಖೆ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕ್ಷೇತ್ರದಲ್ಲಿ ಏನೂ ಅಭಿವೃದ್ಧಿ ಕೆಲಸ ಆಗಿಲ್ಲವೆಂದು ಮಾಜಿ ಸಂಸದ ಎಂ.ಮುನಿಸ್ವಾಮಿ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಓಂಶಕ್ತಿ ಛಲಪತಿ ಈಚೆಗೆ ಟೀಕಿಸಿದ್ದರು. ಅವರು ಟೀಕಿಸಿದ್ದರಲ್ಲಿ ತಪ್ಪಿಲ್ಲ. ವಿರೋಧ ಪಕ್ಷದ ಜವಾಬ್ದಾರಿಯನ್ನು ಅವರು ನಿಭಾಯಿಸಿದ್ದಾರೆ. ಹೀಗಾಗಿ, ಕ್ಷೇತ್ರಕ್ಕೆ ಎಷ್ಟು ಅನುದಾನ ತಂದಿದ್ದೇವೆ ಹಾಗೂ ಏನೆಲ್ಲಾ ಅಭಿವೃದ್ಧಿ ಕೆಲಸಗಳು ನಡೆದಿವೆ ಎಂಬುದ ಬಗ್ಗೆ ನಾವು ಜನರಿಗೆ ದಾಖಲೆಗಳ ಸಮೇತ ನಿಜವಾದ ಮಾಹಿತಿ ಕೊಡುತ್ತಿದ್ದೇವೆ' ಎಂದರು.

ವೈದ್ಯಕೀಯ ಕಾಲೇಜು ಸಂಬಂಧ ಪಿಪಿಪಿ ಮಾದರಿಗೆ ಟೀಕೆ ಹಾಗೂ ಆರೋಪ ಎದುರಾದ ಕಾರಣ ಕೈಬಿಡಲಾಯಿತು. ಸರ್ಕಾರಿ ವೈದ್ಯಕೀಯ ಕಾಲೇಜು ನಿರ್ಮಾಣ ಸಂಬಂಧ ರಾಜ್ಯ ಸರ್ಕಾರಕ್ಕೆ ಡಿಪಿಆರ್ ಸಲ್ಲಿಕೆ ಆಗಿದ್ದು, ಕಾಮಗಾರಿಗೆ 500 ಕೋಟಿ ಅನುದಾನ ಸಿಗಲಿದೆ. ಅರಣ್ಯ ಇಲಾಖೆ ಜಾಗ ಪಡೆದು ಅವರಿಗೆ ಬದಲಿ ಜಾಗ ಕೊಟ್ಟಿದ್ದೇವೆ. ವೈದ್ಯಕೀಯ ಕಾಲೇಜು ಸಂಬಂಧ ಮುಂದೆ ಪ್ರವಾಸಿ ಮಂದಿರದ ಜಾಗವನ್ನು ಬಳಸಿಕೊಳ್ಳಬಹುದು. ಪ್ರವಾಸಿ ಮಂದಿರಕ್ಕೆ ಬೇರೆ ಕಡೆ ಆರು ಎಕರೆ ಜಾಗ ನಿಗದಿಪಡಿಸಿದ್ದೇವೆ ಎಂದರು.

ಕೆಎಸ್‌ಎಚ್‌ಐಪಿನಿಂದ ಬೆಂಗಳೂರು ಗ್ರಾಮಾಂತರ ಗಡಿಯಿಂದ ಕೋಲಾರಕ್ಕೆ 537.46 ಕೋಟಿ ಹಾಗೂ ವೇಮಗಲ್‌ನಿಂದ ಮಾಲೂರು ಗಡಿವರೆಗೆ 340.34 ಕೋಟಿ ಸೇರಿ ಸುಮಾರು 877.8 ಕೋಟಿ ವೆಚ್ಚದಲ್ಲಿ ಹೆದ್ದಾರಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಮಾರ್ಚ್‌ನೊಳಗೆ ಕೋಲಾರ ಕ್ಷೇತ್ರದ ವ್ಯಾಪ್ತಿಯಲ್ಲಿ ಹೆದ್ದಾರಿ ಕಾಮಗಾರಿ ಪೂರ್ಣಗೊಳಿಸಿ ಜನರ ಓಡಾಟಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ ಎಂದು ಭರವಸೆ ನೀಡಿದರು. ಉನ್ನತ ಶಿಕ್ಷಣ ಇಲಾಖೆಯಿಂದ ಕ್ಷೇತ್ರಕ್ಕೆ 103.39 ಕೋಟಿ ಅನುದಾನ ಬಂದಿದೆ. ರಾಜ್ಯದ ಬೇರೆ ಯಾವುದೇ ತಾಲ್ಲೂಕಿಗೂ ಇಷ್ಟು ಹಣ ಬಂದಿಲ್ಲ ಎಂದರು.

ಕೋಮುಲ್ ನಿರ್ದೇಶಕ ಚಂಜಿಮಲೆ ರಮೇಶ್, ಕುಡಾ ಅಧ್ಯಕ್ಷ ಮೊಹಮ್ಮದ್ ಹನೀಫ್, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ವೈ.ಶಿವಕುಮಾರ್, ತಾಲ್ಲೂಕು ಅಧ್ಯಕ್ಷ ವೇಮಗಲ್ ಮುನಿಯಪ್ಪ, ಕಾಂಗ್ರೆಸ್ ಗ್ರಾಮಾಂತರ ಬ್ಲಾಕ್ ಅಧ್ಯಕ್ಷ ಮೈಲಾಂಡಹಳ್ಳಿ ಮುರಳಿ, ಕಾಂಗ್ರೆಸ್ ನಗರ ಬ್ಲಾಕ್ ಅಧ್ಯಕ್ಷ ಅಪ್ಪರ್, ಕೋಮುಲ್ ನಾಮಿನಿ ನಿರ್ದೇಶಕ ಶಂಶೀರ್, ಮುಖಂಡರಾದ ಬೆಳಗಾನಹಳ್ಳಿ ಮುನಿವೆಂಕಟಪ್ಪ, ಖಾಜಿಕಲ್ಲಹಳ್ಳಿ ಮುನಿರಾಜು, ಉರಟಅಗ್ರಹಾರ ಚೌಡರೆಡ್ಡಿ, ಪೆಮ್ಮಶೆಟ್ಟಹಳ್ಳಿ ಸುರೇಶ್ ಹಾಗೂ ಮುಖಂಡರು ಇದ್ದರು.



ಉದಯವಾಹಿನಿ ಚಿತ್ರ

> ಹೆದ್ದಾರಿ ವಿಚಾರವಾಗಿ ದೇವನಹಳ್ಳಿಯಿಂದ ಮಾಲೂರುವರೆಗೆ ಐದು ವಿಧಾನಸಭಾ ಕ್ಷೇತ್ರ ಇದ್ದು, ವೇಮಗಲ್‌ನಿಂದ ಮಾಲೂರು ಗಡಿವರೆಗೆ 340 ಕೋಟಿ ವೆಚ್ಚದಲ್ಲಿ ಕಾಮಗಾರಿ ನಡೆಯಲಿದೆ ಎಂದು ಹೇಳಿದರು. ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ಆರೋಪದ ಬಗ್ಗೆ ಪ್ರತಿಕ್ರಿಯಿಸಿ, 'ಅಧಿಕಾರಿಗಳು ಭ್ರಷ್ಟರಾದರೆ ಜನರೂ ಭ್ರಷ್ಟರಾಗಿದ್ದಾರೆ ಎಂದು ಅರ್ಥ. ಯಾವ ಕಚೇರಿಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದನ್ನು ನಿಖರವಾಗಿ ಹೇಳಬೇಕು. ತಹಶೀಲ್ದಾರ್ ಕಚೇರಿ ಸಂಬಂಧ ದೂರುಗಳಿದ್ದು, ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತರಲಾಗಿದೆ.
>
> ಎಂ.ಎಲ್.ಅನಿಲ್ ಕುಮಾರ್ ವಿಧಾನ ಪರಿಷತ್ ಸದಸ್ಯ

### ರೈಲು ಯೋಜನೆಗೆ ಭೂಸ್ವಾಧೀನ ಕ್ರಮ

ಎಪಿಎಂಸಿ ಮಾರುಕಟ್ಟೆಗೆ ೮೭ ಎಕರೆ ಜಾಗವನ್ನು ಕೋರಗೊಂಡನಹಳ್ಳಿ/ಕೋನೆಪುರ ಬಳಿ ಗುರುತಿಸಲಾಗಿದೆ. ೬೦.೩೦ ಎಕರೆ ಜಾಗ ಮಂಜೂರಾತಿ ಹಂತದಲ್ಲಿದೆ. ಇನ್ನೂ ೧೯.೧೦ ಎಕರೆ ಜಾಗ ಪಡೆಯುವ ಪ್ರಕ್ರಿಯೆ ನಡೆಯುತ್ತಿದೆ ಎಂದರು. ಕೋಲಾರ ನಗರದಲ್ಲಿ ದಟ್ಟಣೆ ಹೆಚ್ಚಿದ್ದು, ರಸ್ತೆ ವಿಸ್ತರಣೆ ಬಗ್ಗೆ ಕೇಳಿದ ಪ್ರಶ್ನೆಗೆ, ಈ ಸಂಬಂಧ ಪ್ರಯತ್ನ ನಡೆಸುತ್ತಿದ್ದೇವೆ. ಆದರೆ, ತೆರವು ಕಾರ್ಯಾಚರಣೆ ನಡೆಸಿ ನ್ಯಾಯಾಲಯ ಮೊರೆ ಹೋಗಬಹುದು, ರಾಜಕೀಯ ನಿರ್ಮಾಣವಾಗುತ್ತದೆ. ಹೀಗಾಗಿ, ಎಲ್ಲರ ಸಭೆ ಕರೆದು ಚರ್ಚಿಸಿ ಕ್ರಮ ವಹಿಸಬೇಕಾಗುತ್ತದೆ' ಎಂದು ತಿಳಿಸಿದರು. ರೈಲು ಯೋಜನೆಗೆ ಭೂಸ್ವಾಧೀನ ಕ್ರಮ ವಹಿಸಿಲ್ಲ ಎಂಬ ಸಂಸದರ ಆರೋಪಕ್ಕೆ ಪ್ರತಿಕ್ರಿಯಿಸಿ, 'ರೈಲು ಯೋಜನೆಗೆ ಜಮೀನು ಹಾಗೂ ಯೋಜನೆಗೆ ಶೇ ೫೦ ಹಣ ಕೊಡಬೇಕು ಎಂಬುದಾಗಿ ಕೇಳಿದ್ದಾರೆ. ಆದರೆ, ನಾವು ಜಾಗ ಕೊಡುತ್ತೇವೆ, ಯೋಜನೆ ಹಣವನ್ನು ಅವರೇ ಸಂಪೂರ್ಣವಾಗಿ ಭರಿಸಬೇಕು. ಈ ಸಂಬಂಧ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಪತ್ರ ಬರಬೇಕು. ಮುಳಬಾಗಿಲಿನಿಂದ ಕೋಲಾರ ಮೂಲಕ ವೈಟ್‌ಫೀಲ್ಡ್‌ಗೆ ರೈಲು ಬರಬೇಕು ಎಂದರು.




ಅರಣ್ಯ ಇಲಾಖೆ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿ

ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಪತ್ರ ಬರಬೇಕು

# ಹುಳಿಯಾರಿನಲ್ಲಿ ಸಂಭ್ರಮದಿಂದ ಬಕ್ರೀದ್ ಆಚರಣೆ

• ಉದಯವಾಹಿನಿ, ಹುಳಿಯಾರು

ಪ್ರವಾದಿ ಇಬ್ರಾಹಿಂ ಅವರ ತ್ಯಾಗ-ಬಲಿದಾನಗಳ ನೆನಪಿನಲ್ಲಿ ಆಚರಿಸುವ 'ಈದ್ ಉಲ್ ಅದ್‌ಹಾ' ಭಾರತದಲ್ಲಿ ಬಕ್ರೀದ್ ಎಂದೇ ಪ್ರಸಿದ್ಧಿ ಪಡೆದಿರುವ ಹಬ್ಬವನ್ನು ಹುಳಿಯಾರು ಪಟ್ಟಣ ಸೇರಿದಂತೆ ಯಾಕೂಬ್‌ಸಾಬ್‌ಪಾಳ್ಯ, ಬಳ್ಳೆಕಟ್ಟೆ, ಕಂಪನಹಳ್ಳಿ, ಯಗಚಿಹಳ್ಳಿ, ಗಾಣಧಾಳು, ದಬ್ಬಗುಂಟೆ ಮುಂತಾದೆಡೆ ಮುಸ್ಲಿಂ ಬಾಂಧವರು ಗುರುವಾರ ಶ್ರದ್ಧಾಭಕ್ತಿಯಿಂದ ಆಚರಿಸಿದರು.


ಉದಯವಾಹಿನಿ ಚಿತ್ರ

ಪಟ್ಟಣದಲ್ಲಿ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಮುಸ್ಲಿಂ ಭಾಂದವರು ಮುಂಜಾನೆಯೇ ಹೊಸಬಟ್ಟೆ ತೊಟ್ಟು ಜಾಮಿಯಾ, ನೂರಾನಿ, ಮದೀನಾ ಮಸೀದಿಗಳಲ್ಲಿ ಪ್ರಾರ್ಥನೆ ಮಾಡಿ ನಂತರ ಈದ್ಗಾ ಮೈದಾನಕ್ಕೆ ಆಗಮಿಸಿದರು. ಈದ್ಗಾ ಮೈದಾನದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಮುಸ್ಲಿಂ ಬಾಂಧವರು ಬೆಳಿಗ್ಗೆ ಸಾಮೂಹಿಕ ನಮಾಜ್ ಮಾಡಿದರು. ಧರ್ಮ ಗುರುಗಳು ಈ ಸಂದರ್ಭದಲ್ಲಿ ಹಬ್ಬದ ಸಂದೇಶ ನೀಡಿ ಬಕ್ರೀದ್ ಹಬ್ಬದ ಆಚರಣೆ ಹಾಗೂ ದಾನ ಧರ್ಮದ ಮಹತ್ವ ಕುರಿತು ಭೋಧನೆ ಮಾಡಿದರು. ನಂತರ ಪ್ರಮುಖ ಬೀದಿಯಲ್ಲಿ ಮೆರವಣಿಗೆಯೊಂದಿಗೆ ಸಾಗಿದ ಮುಸ್ಲಿಂ ಸಮುದಾಯದ ಮುಖಂಡರು ಹಾಗೂ ಬಂಧುಗಳು ಪರಸ್ಪರ ಆಲಂಗಿಸಿಕೊಂಡು ಹಬ್ಬದ ಶುಭಾಷಯ ವಿನಿಮಯ ಮಾಡಿಕೊಂಡರು. ಕುರಿಯನ್ನು ಬಲಿ ನೀಡುವುದು, ಮಾಂಸವನ್ನು ಬಡವರಿಗೆ ಹಂಚುವುದು. ಹಾಗಾಗಿ ಮನೆಗಳಲ್ಲಿ ವಿಶೇಷ ಖಾದ್ಯಗಳನ್ನು ತಯಾರಿಸಿ ಗೆಳೆಯರು, ಬಂಧುಗಳನ್ನು ಆಹ್ವಾನಿಸಿ ಜೊತೆಯಾಗಿ ಊಟ ಮಾಡಿ, ಸಂಭ್ರಮ ಹಂಚಿಕೊಂಡರು.

ಸಾವಿರಾರು ವರ್ಷಗಳ ಹಿಂದೆ ಹುಟ್ಟಿದ ಪ್ರವಾದಿ ಇಬ್ರಾಹಿಂ ಅವರ ತ್ಯಾಗವನ್ನು ನೆನಪಿಸುವುದು ಬಕ್ರೀದ್‌ನ ಮುಖ್ಯ ಆಶಯವಾಗಿದೆ.

## ವಿಐಪಿ ಪಕ್ಷದಿಂದ 70 ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧೆ: ಮೋಹನ್‌ಕುಮಾರ್ ಬಿ.ಕೆ.

• ಉದಯವಾಹಿನಿ, ಮೈಸೂರು

ರಾಜ್ಯ ರಾಜಕಾರಣಕ್ಕೆ 'ವಿಕಾಸಶೀಲ ಇನ್ಸಾನ್ ಪಾರ್ಟಿ' (ವಿಐಪಿ) ಪ್ರವೇಶಿಸಿದ್ದು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ 70 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು ಎಂದು ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಮೋಹನ್‌ಕುಮಾರ್ ಬಿ.ಕೆ. ತಿಳಿಸಿದರು. ಇಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳಿಗೆ ಆಗಿರುವ ಅನ್ಯಾಯ, ರಾಜಕೀಯ ಪ್ರಾತಿನಿಧ್ಯದ ಕೊರತೆಯನ್ನು ಮನದಟ್ಟು ಮಾಡಿಕೊಡಲಾಗುವುದು. ಮಹರ್ಷಿ ವಾಲ್ಮೀಕಿ, ಅಂಬಿಗರ ಚೌಡಯ್ಯ, ಬಸವಣ್ಣ, ಬುದ್ಧ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ತತ್ವಗಳಡಿ ಪಕ್ಷ ಮುನ್ನಡೆಸಲಾಗುವುದು' ಎಂದು ಹೇಳಿದರು.'ರಾಜ್ಯದಲ್ಲಿ ಕೋಲಿ, ಗಂಗಾಮತ ಹಾಗೂ ಬೆಸ್ತ ಸಮಾಜದವರೇ ನಮ್ಮ ಪಕ್ಷದ ಮುಖ್ಯ ಮತದಾರರು. ಈ ಸಮಾಜಗಳ ಜನಸಂಖ್ಯೆ 60 ಲಕ್ಷದಿಂದ 70 ಲಕ್ಷದಷ್ಟಿದೆ.

# ನೀರಿನ ಸಮಸ್ಯೆಗೆ ತುರ್ತಾಗಿ ಸ್ಪಂದಿಸಿ: ಸಿಇಒ ನಂದಿನಿ ಕೆ

• ಉದಯವಾಹಿನಿ, ಮಂಡ್ಯ

ಜಿಲ್ಲೆಯ ಯಾವುದೇ ಗ್ರಾಮದಲ್ಲಿಯೂ ಕುಡಿಯುವ ನೀರಿಗೆ ಸಮಸ್ಯೆ ಎದುರಾಗದಂತೆ ನಿಯಮಾನುಸಾರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಿ' ಎಂದು ಜಿಲ್ಲಾ ಪಂಚಾಯಿತಿ ಸಿಇಒ ನಂದಿನಿ ಕೆ.ಆರ್. ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಆದ್ಯತೆ ಹಾಗೂ ಅವಶ್ಯ ಆಧಾರದಲ್ಲಿ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ತೆಗೆದುಕೊಂಡು ಸಾರ್ವಜನಿಕರಿಗೆ ನೀರು ಸರಬರಾಜಿನಲ್ಲಿ ಯಾವುದೇ ವ್ಯತ್ಯಯವಾಗದಂತೆ ನೀರು ಸರಬರಾಜು ಮಾಡಲು ಕ್ರಮವಹಿಸಬೇಕು ಎಂದು ಸೂಚಿಸಿದರು.


ಉದಯವಾಹಿನಿ ಚಿತ್ರ

ಯಾವುದೇ ಗ್ರಾಮದಲ್ಲಿ ನೀರಿನ ಗುಣಮಟ್ಟದಲ್ಲಾಗಲೀ, ನೀರಿನ ಪ್ರಮಾಣದಲ್ಲಾಗಲೀ ವ್ಯತ್ಯಾಸವಾಗಬಾರದು ಹಾಗೂ ಕಟ್ಟ ಕಡೆಯ ವ್ಯಕ್ತಿಗೂ ನಿಗದಿತ ಪ್ರಮಾಣದ ನೀರು ಲಭ್ಯವಾಗುವಂತೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದರು.

ವಿವಿಧ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಕೊರತೆ, ಬೋರ್‌ವೆಲ್‌ಗಳಲ್ಲಿ ನೀರಿನ ಮಟ್ಟ ಕುಸಿತ, ಪೈಪ್‌ಲೈನ್ ದುರಸ್ತಿ, ವಿದ್ಯುತ್ ಸಮಸ್ಯೆಗಳಿಂದ ನೀರು ಸರಬರಾಜಿನಲ್ಲಿ ಉಂಟಾಗುತ್ತಿರುವ ವ್ಯತ್ಯಯ ಸೇರಿದಂತೆ ಹಲವು ವಿಷಯಗಳ ಕುರಿತು ವಿಸ್ತ್ರತವಾಗಿ ಚರ್ಚಿಸಲಾಯಿತು.

ನೀರಿನ ಸಮಸ್ಯೆ ಗಂಭೀರವಾಗಿರುವ ಪ್ರದೇಶಗಳನ್ನು ಗುರುತಿಸಿ, ಹೊಸ ಬೋರ್‌ವೆಲ್ ಕೊರೆಸುವುದು, ಕೆಟ್ಟು ನಿಂತಿರುವ ಮೋಟಾರ್ ಮತ್ತು ಪಂಪ್‌ಸೆಟ್‌ಗಳನ್ನು ದುರಸ್ತಿಗೊಳಿಸುವುದು, ಅಗತ್ಯವಿದ್ದಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು, ತಾತ್ಕಾಲಿಕ ಪೈಪ್‌ಲೈನ್ ವ್ಯವಸ್ಥೆ ಕಲ್ಪಿಸುವುದು ಸೇರಿದಂತೆ ತುರ್ತು ಕ್ರಮಗಳನ್ನು ತಕ್ಷಣ ಜಾರಿಗೊಳಿಸುವಂತೆ ಸೂಚಿಸಿದರು.

ಸಭೆಯಲ್ಲಿ ಕಾರ್ಯಪಾಲಕ ಎಂಜಿನಿಯರ್ ಪ್ರಮೋದ್ ಕುಮಾರ್ ಎನ್.ಜಿ., ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಶ್ಮಿ, ಮಧುಸೂದನ್, ರಂಗಸ್ವಾಮಿ, ಗಣೇಶ್ ಹೆಗಡೆ, ಗಿರಿಜೇಶ್, ಮಮತಾ, ಸೌಮ್ಯ ಮತ್ತು ಸಿಬ್ಬಂದಿ ಹಾಜರಿದ್ದರು.


# 45 ಮೀನುಗಾರ ಫಲಾನುಭವಿಗಳಿಗೆ ಸವಲತ್ತು ವಿತರಣೆ

## ಉಪಕಸುಬಾಗಿ ಮೀನುಗಾರಿಕೆಯಿಂದ ಉತ್ತಮ ಸಂಪಾದನೆ, ಕೆರೆಗಳಲ್ಲಿ ಮೀನು ಸಾಕಣೆ ಹರಾಜು ಪ್ರಕ್ರಿಯೆ

• ಉದಯವಾಹಿನಿ, ತಿಪಟೂರು

ನಗರದ ಮೀನುಗಾರಿಕೆ ಇಲಾಖೆಯಿಂದ ರಾಜ್ಯ, ಜಿಲ್ಲಾ ಯೋಜನೆಯಡಿ ಆಯ್ಕೆಯಾದ ಮೀನುಗಾರ ಫಲಾನುಭವಿಗಳಿಗೆ ಮೀನುಗಾರಿಕಾ ಸಲಕರಣೆ ಹಾಗೂ ವಿವಿಧ ಸವಲತ್ತುಗಳನ್ನು ವಿತರಿಸಲಾಯಿತು. ತಾಲ್ಲೂಕಿಗೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿಯ 20, ಪಂಗಡದ 10 ಹಾಗೂ ಸಾಮಾನ್ಯ ವರ್ಗದ 11 ಜನರಿಗೆ ಸವಲತ್ತು ವಿತರಿಸಲಾಯಿತು. ಒಟ್ಟು 45 ಜನ ಫಲಾನುಭವಿಗಳಿಗೆ ವಿವಿಧ ಸವಲತ್ತುಗಳನ್ನು ವಿತರಿಸಲಾಯಿತು.

ಶಾಸಕ ಕೆ.ಷಡಕ್ಷರಿ ಮಾತನಾಡಿ, ಮೀನುಗಾರಿಕೆ ಬಗ್ಗೆ ಜನರಿಗೆ ಅರಿವು ಕಡಿಮೆ ಇದೆ. ಇದು ಆರ್ಥಿಕವಾಗಿ ಸಾಕಷ್ಟು ಸಂಪಾದನೆಗೆ ಅವಕಾಶವಿರುವ ಉದ್ದಿಮೆ. ಮೀನುಗಾರಿಕೆಯಲ್ಲಿ ತೊಡಗಿರುವ ಸೂರಿಲ್ಲದವರಿಗೆ ವಿಶೇಷ ಯೋಜನೆಯಡಿ 50 ಜನರಿಗೆ ಸರ್ಕಾರದಿಂದ ಮನೆ ಮಂಜೂರಾಗಿದ್ದು, ಅದರಲ್ಲಿ 40 ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದು, ಇನ್ನೂ 10 ಮಂದಿಗೆ ಹುಡುಕಿ ನೀಡಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ನಂತರ ಇನ್ನೂ 50 ಮನೆಗಳನ್ನು ಮಂಜೂರು ಮಾಡಿಸುತ್ತೇನೆ ಎಂದರು.


ಉದಯವಾಹಿನಿ ಚಿತ್ರ

ಎತ್ತಿನಹೊಳೆ ಯೋಜನೆಯಡಿ ಈ ವರ್ಷದ ಅಂತ್ಯದೊಳಗೆ ತಾಲ್ಲೂಕಿನ 105 ಕೆರೆಗಳಿಗೆ ನೀರು ಹರಿಸಲಿದ್ದು, ಈ ಎಲ್ಲಾ ಕೆರೆಗಳಲ್ಲಿ ಮೀನುಗಾರಿಕೆಗೆ ಸಾಕಷ್ಟು ಅವಕಾಶಗಳಿವೆ. ತಾಲ್ಲೂಕಿನಲ್ಲಿ ಜನರು ಮುಖ್ಯ ಕಸುಬಾಗಿ ತೆಂಗು ಮತ್ತು ಅಡಿಕೆ ಬೆಳೆಸುತ್ತಿದ್ದು ಉಪಕಸುಬಾಗಿ ಮೀನುಗಾರಿಕೆಯಿಂದ ಉತ್ತಮ ಸಂಪಾದನೆ ಮಾಡಬಹುದು ಎಂದು ತಿಳಿಸಿದರು.

ಕೆರೆಗಳಲ್ಲಿ ಮೀನು ಸಾಕಣೆ ಹರಾಜು ಪ್ರಕ್ರಿಯೆಯನ್ನು ಇ-ಟೆಂಟರ್ ಮೂಲಕ ನಡೆಸಲಾಗುತ್ತಿದ್ದು ಪಾರದರ್ಶಕವಾಗಿ ಇರುತ್ತದೆ. ಮೀನು ಸಾಕಣೆಯಲ್ಲಿ ತೊಡಗಿಸಿಕೊಂಡವರಿಗೆ ಇಲಾಖೆಯಿಂದ ಅನೇಕ ಸವಲತ್ತು ದೊರೆಯುತ್ತಿದೆ. ಇದರ ಸದ್ಬಳಕೆ ಮಾಡಿಕೊಂಡು ಆರ್ಥಿಕ ಸ್ಥಿತಿ ಉತ್ತಮಪಡಿಸಿಕೊಳ್ಳಬೇಕು ಎಂದರು.

ಮೀನುಗಾರಿಕಾ ಉಪನಿರ್ದೇಶಕ ಎಂ.ಎಚ್.ನಂಜುಂಡಪ್ಪ ಮಾತನಾಡಿದರು.ಸಹಾಯಕ ಮೀನುಗಾರಿಕಾ ನಿರ್ದೇಶಕ ಮೋಹನ್ ಕುಮಾರ್, ತಾ.ಪಂ ಮಾಜಿ ಅಧ್ಯಕ್ಷ ನ್ಯಾಕೇನಹಳ್ಳಿ ಸುರೇಶ್, ಹೊಸಳ್ಳಿ ಬಸವರಾಜು ಉಪಸ್ಥಿತರಿದ್ದರು.

# ಷೋ ಕೊಡಲು ಬಂದಿಲ್ಲ; ಕಡೆವರೆಗೆ ಜೊತೆಗಿರುವೆ; ನಿಖಿಲ್ ಕುಮಾರಸ್ವಾಮಿ



ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಮನಗರ

ನಾನಿಲ್ಲಿಗೆ ಷೋ ಕೊಟ್ಟು ಹೋಗಲು ಬಂದಿಲ್ಲ. ರೈತರ ಅಸ್ತಿತ್ವ ಮತ್ತು ಸ್ವಾಭಿಮಾನದ ಈ ಹೋರಾಟದುದ್ದಕ್ಕೂ ಜೊತೆಗಿದ್ದು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವೆ. ಕಾನೂನು ಹೋರಾಟಕ್ಕೂ ಜೊತೆಯಾಗಿರುವೆ' ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭರವಸೆ ನೀಡಿದರು. ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಜಿಬಿಐಟಿ) ಯೋಜನೆಗೆ ಭೂ ಸ್ವಾಧೀನ ವಿರೋಧಿಸಿ ಇಲ್ಲಿನ ಭೈರಮಂಗಲದಲ್ಲಿ ರೈತರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಹೋರಾಟ ಬೆಂಬಲಿಸಿ, ಯೋಜನಾ ಪ್ರದೇಶದ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಅಹವಾಲು ಆಲಿಸಿ ಅವರು ಮಾತನಾಡಿದರು.

ಟೌನ್‌ಶಿಪ್ ಯೋಜನೆಗೆ ಭೂ ಸ್ವಾಧೀನ ವಿರೋಧಿಸಿ ರೈತರು 440 ದಿನಗಳಿಂದ ಬೀದಿಯಲ್ಲಿದ್ದಾರೆ. ಆದರೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಿ.ಎಂ ಕುರ್ಚಿಗಾಗಿ ದೆಹಲಿಯಲ್ಲಿ ಬೀಡು ಬಿಟ್ಟಿದ್ದಾರೆ. ಇದೇನಾ ಈ ಜಿಲ್ಲೆಯ ಮಗನ ರೈತಪರ ಕಾಳಜಿ' ಎಂದು ಪ್ರಶ್ನಿಸಿದರು.

**ಚೊಂಬು ಕೊಡುತ್ತಿದ್ದಾರೆ:** 'ನಮ್ಮ ಕುಟುಂಬ ರಾಮನಗರ ಜಿಲ್ಲೆಯಲ್ಲಿ ಜನಿಸದಿರಬಹುದು. ಆದರೆ, ಜಿಲ್ಲೆಯ ಅಭಿವೃದ್ಧಿ ಮತ್ತು ಬೆಳವಣಿಗೆಗೆ ನಮ್ಮ ಕುಟುಂಬ ಕಾರಣ. ಎಚ್.ಡಿ. ದೇವೇಗೌಡರು ಮತ್ತು ಕುಮಾರಸ್ವಾಮಿ ಅವರು ಇಲ್ಲಿ ಅಭಿವೃದ್ಧಿಗೆ ಭದ್ರ ಅಡಿಪಾಯ ಹಾಕಿದ್ದಾರೆ. ಆದರೆ, ಜನರಿಂದ ಬೇಡಿ ಪೆನ್ನು-ಪೇಪರ್ ಪಡೆದವರು ಈಗ ರೈತರಿಗೆ ಚೊಂಬು ಕೊಡುತ್ತಿದ್ದಾರೆ. ಸ್ಥಳೀಯ ಶಾಸಕರೂ ಸಹ ಇತ್ತ ತಿರುಗಿ ನೋಡಿಲ್ಲ'ಎಂದು ವಾಗ್ದಾಳಿ ನಡೆಸಿದರು. ರೈತರು ಭರವಸೆ ಕಳೆದುಕೊಳ್ಳಬಾರದು. ಹೋರಾಟದ ಕಿಚ್ಚು ಹೀಗೆಯೇ ಇರಲಿ. ಇದು ಈ ನೆಲದ ಅನ್ನದಾತರ ಬದುಕಿನ ಪ್ರಶ್ನೆ. ಟೌನ್‌ಶಿಪ್ ಯೋಜನೆಯಿಂದ ರೈತರ ಬದುಕು ಬೀದಿಗೆ ಬರುತ್ತದೆ ಎಂದು ಗೊತ್ತಿದ್ದರೂ, ಕಾಂಗ್ರೆಸ್ ನಾಯಕರಿಗೆ ಇದು ಪ್ರತಿಷ್ಠೆಯಾಗಿದೆ. ಆದರೆ, ಜನರಿಗೆ ಇದು ಅಸ್ತಿತ್ವದ ಪ್ರಶ್ನೆ ಎಂಬುದನ್ನು ಮರೆತಿದ್ದಾರೆ ಎಂದು ಟೀಕಿಸಿದರು.



### ಕೃಷಿಕರನ್ನು ನೋಡಬನ್ನಿ:

ಯೋಜನಾ ಪ್ರದೇಶದಲ್ಲಿ ಕೃಷಿಕರೇ ಇಲ್ಲ ಎನ್ನುವ ಉಪ ಮುಖ್ಯಮಂತ್ರಿ ಅವರು ಯೋಜನಾ ಪ್ರದೇಶಕ್ಕೆ ಒಮ್ಮೆ ಬಂದು ನೋಡಲಿ. ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಕೂಲಿ ಮಾಡಿ ಬದುಕುತ್ತಿರುವವರ ಮಾತು ಆಲಿಸಲಿ. ದಲ್ಲಾಳಿಗಳು ಸೇರಿದಂತೆ ಕೆಲವರನ್ನು ಕಟ್ಟಿಕೊಂಡು ಯೋಜನೆಗೆ ಬಹುತೇಕ ಭೂ ಮಾಲೀಕರು ಒಪ್ಪಿಗೆ ಸೂಚಿಸಿದ್ದಾರೆ ಎನ್ನುವ ಅವರಿಗೆ ಇಲ್ಲಿಗೆ ಬಂದರೆ ವಾಸ್ತವ ಗೊತ್ತಾಗಲಿದೆ ಎಂದು ನಿಖಿಲ್ ಸವಾಲು ಹಾಕಿದರು.

> ರೈತರ ಪರವಾಗಿ ಮಾಜಿ ಪ್ರಧಾನಿ ಮೊಮ್ಮಗ ನ್ಯಾಯ ಕೇಳಿದರೆ ಚಿಕ್ಕವನು, ರಾಜಕೀಯ ಅನುಭವವಿಲ್ಲ ಎಂದು ಟೀಕಿಸುತ್ತಾರೆ. ಅವರ ಹಿನ್ನೆಲೆಗೆ ಬೇಕಾದಂತೆ ಇರಬಹುದಿತ್ತು. ಆದರೆ, ಎಲ್ಲವನ್ನೂ ಬಿಟ್ಟು ರೈತರ ಬದುಕು ಉಳಿಸಲು ಇಲ್ಲಿಗೆ ಬಂದಿದ್ದಾರೆ. ರೈತರ ಭೂಮಿ ಉಳಿಸಲು ನಾವು ಜೈಲಿಗೆ ಹೋಗುವುದಕ್ಕೂ ಸಿದ್ದವಾಗಿದ್ದೇವೆ.
>
> ಎ. ಮಂಜುನಾಥ್ ಮಾಜಿ ಶಾಸಕ

## ಮಿನಿ ನ್ಯೂಸ್


### ಗಲಭೆಕೋರರ ವಿರುದ್ಧದ ಪ್ರಕರಣ ವಾಪಸ್

• ಉದಯವಾಹಿನಿ, ಕೊಳ್ಳೇಗಾಲ

ರಾಜ್ಯದಲ್ಲಿ ಸಂಘ ಪರಿವಾರದ ಗಲಭೆಕೋರರ ವಿರುದ್ಧದ ಪ್ರಕರಣ ಹಿಂಪಡೆದದ್ದನ್ನು ವಿರೋಧಿಸಿ ಮತ್ತು ಗೋರಕ್ಷಣೆ ನೆಪದಲ್ಲಿ ಗೂಂಡಾಗಿರಿ ಮಾಡುತ್ತಿರುವುದನ್ನು ಖಂಡಿಸಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ(ಎಸ್‌ಡಿಪಿಐ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ನಗರದ ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂದೆ ಜಮಾಯಿಸಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.ಎಸ್‌ಡಿಪಿಐ ಟೌನ್ ಘಟಕದ ಅಧ್ಯಕ್ಷ ಇಮ್ರಾನ್ ಟಿಪ್ಪು ಮಾತನಾಡಿ. ಗೋರಕ್ಷಣೆ ಹೆಸರಿನಲ್ಲಿ ನಡೆಯುತ್ತಿರುವ ದೌರ್ಜನ್ಯಗಳು ನಿರಂತರ ಹೆಚ್ಚುತ್ತಿದ್ದು, ಸಾಮಾನ್ಯ ಜನರಿಗೆ ಭದ್ರತೆ ಇಲ್ಲವಾಗಿದೆ. ಇಂತಹ ಘಟನೆಗಳಿಗೆ ತಕ್ಷಣ ಕಡಿವಾಣ ಹಾಕಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು' ಎಂದರು.'ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡುವುದು ಸರ್ಕಾರದ ಜವಾಬ್ದಾರಿ. ನಿರಂತರ ತೊಂದರೆ ನೀಡುವ ಸಂಘ ಸಂಸ್ಥೆಗಳ ಬಗ್ಗೆ ಗಂಭೀರ ಕ್ರಮ ಅಗತ್ಯ. ಪ್ರಕರಣ ಹಿಂಪಡೆದುದ್ದನ್ನು ತಿರಸ್ಕರಿಸಬೇಕು.

### ಡಿಕೆಶಿ ಸಿಎಂ, ಹಬ್ಬದ ದಿನವೇ ಈಡೇರಿಸಿದ ಪ್ರಾರ್ಥನೆ: ಶಾಸಕ

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ಕಡೆಗೂ ನಮ್ಮ ನಾಯಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗುವ ಗಳಿಗೆ ಕೂಡಿ ಬಂತು. ಇದಕ್ಕಾಗಿ ಭಗವಂತನಲ್ಲಿ ನಾನು ಪ್ರಾರ್ಥನೆ ಮಾಡುತ್ತಿದ್ದೆ. ಬಕ್ರೀದ್ ಹಬ್ಬದ ದಿನವೇ ಆ ಬೇಡಿಕೆಯನ್ನು ಭಗವಂತ ಈಡೇರಿಸಿದ್ದಾನೆ' ಎಂದು ಡಿಕೆಶಿ ಆಪ್ತ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಸಂತಸ ವ್ಯಕ್ತಪಡಿಸಿದರು.

ಬಕ್ರೀದ್ ಪ್ರಯುಕ್ತ ನಗರದ ಈದ್ಗಾ ಮೈದಾನದಲ್ಲಿ ಗುರುವಾರ ವಿಶೇಷ ಪ್ರಾರ್ಥನೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಬೇಕು ಎಂದು ಪಕ್ಷದ ಲಕ್ಷಾಂತರ ಕಾರ್ಯಕರ್ತರು, ಮುಖಂಡರು ಸಹ ಆಸೆ ಪಟ್ಟಿದ್ದರು. ನಾಯಕತ್ವ ಬದಲಾವಣೆ ಕುರಿತು ನಾನು ಮೌನ ಮುರಿದು ಮಾತಾಡಿದ್ದೆ. ಉಳಿದವರು ಮೌನವಾಗಿಯೇ ಪ್ರಾರ್ಥಿಸಿದ್ದರು ಎಂದು ಹೇಳಿದರು. ಡಾ. ಜಿ. ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂಬ ಒತ್ತಾಯ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಪರಮೇಶ್ವರ್ ಕೂಡಾ ನಮ್ಮ ನಾಯಕರೇ. ಅವರು ಕೇಳುವುದರಲ್ಲಿ ತಪ್ಪೇನಿದೆ ಅವರೂ ಕೆಪಿಸಿಸಿ ಅಧ್ಯಕ್ಷರಾಗಿದ್ದರು. ಅವಕಾಶ ಕೇಳುವುದರಲ್ಲಿ ತಪ್ಪಲ್ಲ. ನಮ್ಮ ಜಿಲ್ಲೆಯವರು ಹಾಗೂ ನಮ್ಮ ನಾಯಕ ಶಿವಕುಮಾರ್ ಅವರಿಗೂ ಅವಕಾಶ ಕೊಡಬೇಕು ಅಂತ ನಾವು ಕೇಳಿದ್ದೆವು. ಅದು ಈಡೇರಿದೆ ಎಂದರು.

### ಬಕ್ರೀದ್: ಗೋಹತ್ಯೆಗೆ ಅವಕಾಶ ನೀಡಬಾರದೆಂದು ಡಿವೈಎಸ್‌ಪಿಗೆ ಮನವಿ

• ಉದಯವಾಹಿನಿ, ಕೆಜಿಎಫ್

ಬಕ್ರೀದ್ ಸಂದರ್ಭದಲ್ಲಿ ಗೋಹತ್ಯೆಗೆ ಅವಕಾಶ ಕೊಡಬಾರದೆಂದು ಒತ್ತಾಯಿಸಿ ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು ಡಿವೈಎಸ್‌ಪಿ ಲಕ್ಷ್ಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ವಿರುದ್ಧವಾಗಿ ಗೋವುಗಳನ್ನು ವಧೆ ಮಾಡಲಾಗುತ್ತಿದೆ. ಗೋವು ನಮಗೆ ಒಂದು ಪ್ರಾಣಿಯಾಗದೆ, ಪೂಜನೀಯ ಪ್ರಾಣಿಯಾಗಿದೆ. ರೈತಾಪಿ ಜನರು ಇವತ್ತಿಗೂ ತಮ್ಮ ಕೃಷಿ ಚಟುವಟಿಕೆಗಳಿಗೆ ಗೋವಿನಿಂದಲೇ ಪ್ರಾರಂಭಿಸುತ್ತಾರೆ ಹಾಗಾಗಿ ಗೋವುಗಳನ್ನು ವಧೆ ಮಾಡುವುದು ಹೇಯ ಕೃತ್ಯ. ಬಕ್ರೀದ್ ಸಂದರ್ಭದಲ್ಲಿ ಗೋವಿನ ಹತ್ಯೆ ಮಾಡುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಮನವಿ ಸಲ್ಲಿಸಿದರು. ಹಿಂದೂ ಜಾಗರಣ ವೇದಿಕೆ ಜಿಲ್ಲಾ ಸಂಯೋಜಕ ಚಂದ್ರು. ಚೆನ್ನಯ್ಯ, ರಾಜಣ್ಣ, ಪುರುಷೋತ್ತಮ್, ಜಯರಾಮ್ ಇದ್ದರು.

### ರೇಷ್ಮೆ ಉತ್ಪಾದನೆ: ತುಮಕೂರು ರಾಜ್ಯದಲ್ಲೇ ಪ್ರಥಮ

• ಉದಯವಾಹಿನಿ, ತುಮಕೂರು

ಸಾಮಾನ್ಯವಾಗಿ ತೆಂಗು ಮತ್ತು ಅಡಿಕೆಗೆ ಹೆಸರಾದ ಕಲ್ಪತರು ನಾಡು ತುಮಕೂರು ಈಗ ರೇಷ್ಮೆ ಕೃಷಿಯಲ್ಲೂ ರಾಜ್ಯಕ್ಕೆ ಮಾದರಿಯಾಗಿ ಹೊರಹೊಮ್ಮಿದೆ. 2025-26ನೇ ಸಾಲಿನ ರೇಷ್ಮೆ ಇಲಾಖೆಯ ಇತ್ತೀಚಿನ ಅಂಕಿ ಅಂಶಗಳ ಪ್ರಕಾರ, ರೇಷ್ಮೆ ಗೂಡು ಉತ್ಪಾದನೆಯಲ್ಲಿ ಜಿಲ್ಲೆಯು ರಾಜ್ಯದಲ್ಲೇ ಪ್ರಥಮ ಸ್ಥಾನ ಪಡೆದು ಹೊಸ ದಾಖಲೆ ಬರೆದಿದೆ.

ಮಾ 2020ರ ಅಂತ್ಯಕ್ಕೆ ಲಭ್ಯವಿರುವ ದತ್ತಾಂಶಗಳ ಪ್ರಕಾರ, ಜಿಲ್ಲೆಯ ರೈತರು ರೇಷ್ಮೆ ಕೃಷಿಯನ್ನು ಒಂದು ಲಾಭದಾಯಕ ಉದ್ದಿಮೆಯಾಗಿ ಸ್ವೀಕರಿಸಿದ್ದಾರೆ. ಜಿಲ್ಲೆಯಾದ್ಯಂತ ಒಟ್ಟು 10223 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆಯುವ ಗುರಿಯನ್ನು ತಲುಪಲಾಗಿದ್ದು, ಹಸಿರು ಹೊದಿಕೆಯಂತೆ ಕಾಡುತ್ತಿರುವ ಹಿಪ್ಪುನೇರಳೆ ತೋಟಗಳು ಜಿಲ್ಲೆಯ ಆರ್ಥಿಕತೆಗೆ ಬಲ ತುಂಬುತ್ತಿವೆ. ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ರೇಷ್ಮೆ ಕೃಷಿ ಸಮೃದ್ಧವಾಗಿ ಬೆಳೆದಿದೆ, ಸಿರಾ ಮತ್ತು ಪಾವಗಡದ ಭಾಗಗಳಲ್ಲಿ ನೀರಿನ ಮಿತಬಳಕೆಯೊಂದಿಗೆ ರೇಷ್ಮೆ ಕೃಷಿ ಕ್ರಾಂತಿ ಮಾಡಲಾಗಿದೆ. ಸಿರಾ ತಾಲ್ಲೂಕು 1921 ಹೆಕ್ಟೇರ್ ಹಾಗೂ ಪಾವಗಡ 1845 ಹೆಕ್ಟೇರ್ ವಿಸ್ತೀರ್ಣದೊಂದಿಗೆ ಜಿಲ್ಲೆಯ ಪ್ರಮುಖ ರೇಷ್ಮೆ ಕೇಂದ್ರಗಳಾಗಿ ಹೊರಹೊಮ್ಮಿವೆ. ಜಿಲ್ಲೆಯ ಒಟ್ಟು ಸಾಧನೆಯಲ್ಲಿ ಕುಣಿಗಲ್ ಬಿತ್ತನೆ ವಲಯದ ಪಾಲು ಅತಿ ದೊಡ್ಡದಾಗಿದ್ದು ಬರೊಬ್ಬರಿ 2209 ಹೆಕ್ಟೇರ್ ವಿಸ್ತೀರ್ಣದಲ್ಲಿ ಸಾಧನೆ ಮಾಡಿರುವ ಈ ವಲಯ, ಜಿಲ್ಲೆಯ ರೇಷ್ಮೆ ಕೃಷಿಯ ಬೆನ್ನೆಲುಬಾಗಿ ನಿಂತಿದೆ.

5 ಸಾವಿರ ಮೆಟ್ರಿಕ್ ಟನ್ ಗೂಡು ಉತ್ಪಾದನೆ ಜಿಲ್ಲೆಯ ರೈತರ ಶ್ರಮದ ಫಲವಾಗಿ ಒಟ್ಟು 5008.746 ಮೆಟ್ರಿಕ್ ಟನ್ ರೇಷ್ಮೆ ಗೂಡು ಉತ್ಪಾದನೆಯಾಗಿದೆ. ಇದರಲ್ಲಿ ಕೇವಲ ಪ್ರಮಾಣ ಮಾತ್ರವಲ್ಲದೆ ಗುಣಮಟ್ಟಕ್ಕೂ ಆದ್ಯತೆ ನೀಡಲಾಗಿದೆ. ಉತ್ತಮ ಗುಣ ಮಟ್ಟದ ದ್ವಿತಳಿ ರೇಷ್ಮೆಯು ಸುಮಾರು 2974.669 ಮೆ. ಟನ್ ಉತ್ಪಾದನೆಯಾ ಗಿದ್ದರೆ, ಮಿಶ್ರ ತಳಿ 1676.371 ಮೆ.ಟನ್ ಹಾಗೂ ಸಾಂಪ್ರದಾಯಿಕ ಮೈಸೂರು ತಳಿ 357.706 ಮೆ.ಟನ್‌ನಷ್ಟು ಉತ್ಪತ್ತಿಯಾಗಿದೆ.

ರೇಷ್ಮೆ ಇಲಾಖೆಯ ದಕ್ಷ ಮಾರ್ಗದರ್ಶನ ಮತ್ತು ರೈತರ ಅವಿರತ ಶ್ರಮದಿಂದಾಗಿ ತುಮಕೂರು ಜಿಲ್ಲೆಯು ಇಂದು ಕರ್ನಾಟಕದ ರೇಷ್ಮೆ ಭೂಪಟದಲ್ಲಿ ನಂಬರ್ ಒನ್ ಸ್ಥಾನಕ್ಕೆ ಏರಿದೆ. ಸುಮಾರು 7607.87 ಲಕ್ಷದಷ್ಟು ಚಾಕಿ ಮೊಟ್ಟೆಗಳ ಪೂರೈಕೆಯು ಜಿಲ್ಲೆಯ ರೇಷ್ಮೆ ಕೃಷಿಯ ವಿಸ್ತಾರವನ್ನು ಎತ್ತಿ ತೋರಿಸುತ್ತದೆ.

ಅಂತರಾಳದಿಂದ.. EDITORIAL

# ಎಸ್‌ಐಆರ್‌ಗೆ ಸುಪ್ರೀಂ ಸಮ್ಮತಿ ಇನ್ನಾದರೂ ಪಕ್ಷಗಳು ಸಹಕರಿಸಲಿ



ಭಾರತೀಯ ಚುನಾವಣ ಆಯೋಗವು ಕೈಗೆತ್ತಿಕೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್)ಯ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಈ ಮೂಲಕ ಕಳೆದೊಂದು ವರ್ಷದಿಂದ ನಡೆಯುತ್ತ ಬಂದಿರುವ ಕಾನೂನು ಸಮರಕ್ಕೆ ತೆರೆ ಎಳೆದಿದೆ.

ಕಳೆದ ವರ್ಷದ ನವೆಂಬರ್‌ನಲ್ಲಿ ನಡೆದ ಬಿಹಾರ ವಿಧಾನಸಭೆ ಚುನಾವಣೆಗೂ ಮುನ್ನ ಚುನಾವಣ ಆಯೋಗ ಎಸ್‌ಐಆರ್ ಕೈಗೆತ್ತಿಕೊಂಡಿತ್ತು. ಈ ವಿಷಯವಾಗಿ ರಾಜಕೀಯ ಪಕ್ಷಗಳ ನಡುವೆ ತೀವ್ರ ವಾಕ್ಸಮರ ನಡೆದಿತ್ತಲ್ಲದೆ, ಈ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಸುಪ್ರೀಂ ಕೋರ್ಟ್ ನೀಡಿದ ಕೆಲವು ನಿರ್ದೇಶನಗಳಿಗನುಗುಣವಾಗಿ ಆಯೋಗ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ರಾಜ್ಯ ವಿಧಾನಸಭೆ ಚುನಾವಣೆಯನ್ನು ನಡೆಸಿತ್ತು. ಇದಾದ ಬಳಿಕ ಹಂತಹಂತವಾಗಿ ದೇಶದ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ನಡೆಸುವುದಾಗಿ ಆಯೋಗ ಘೋಷಿಸಿದ್ದೇ ಅಲ್ಲದೆ ತಿಂಗಳುಗಳ ಹಿಂದೆ ಚುನಾವಣೆ ನಡೆದ ದೇಶದ ಐದು ರಾಜ್ಯಗಳಲ್ಲಿ ಚುನಾವಣೆಗೂ ಮುನ್ನ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಿತ್ತು.

ಇದರ ಹೊರತಾಗಿಯೂ ವಿವಿಧ ರಾಜಕೀಯ ಪಕ್ಷಗಳು, ಸ್ವಯಂಸೇವಾ ಸಂಸ್ಥೆಗಳು ಹಾಗೂ ಸಂಘಟನೆಗಳಿಂದ ಎಸ್‌ಐಆರ್‌ಗೆ ತೀವ್ರ ವಿರೋಧ ವ್ಯಕ್ತವಾಗು ತ್ತಲೇ ಬಂದಿದೆ. ಆಯೋಗ ಎಸ್‌ಐಆರ್ ವೇಳೆ ಅನುಸರಿಸುತ್ತಿರುವ ಸುರಕ್ಷಾ ಕ್ರಮಗಳು ಮತದಾರರ ಪಟ್ಟಿಯ ಸಮಗ್ರತೆಯನ್ನು ಕಾಯ್ದುಕೊಳ್ಳಲು ನೆರವಾಗುತ್ತಿದೆ ಎಂದು ಅಭಿಪ್ರಾಯಪಟ್ಟಿರುವ ನ್ಯಾಯ ಪೀಠವು ಚುನಾವಣ ಆಯೋಗದ ನಿಲುವನ್ನು ಬಲವಾಗಿ ಸಮರ್ಥಿಸಿಕೊಂಡಿದೆ. ಇದೇ ವೇಳೆ ಮತದಾರರ ಪಟ್ಟಿಯಿಂದ ಹೆಸರನ್ನು ಅಳಿಸಿದಾಕ್ಷಣ ಆತನ ಪೌರತ್ವವನ್ನು ರದ್ದುಗೊಳಿಸಿದಂತಾಗದು ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿರುವ ಸುಪ್ರೀಂ ನ್ಯಾಯಪೀಠ, ಯಾರದ್ದೇ ಪೌರತ್ವವನ್ನು ಚುನಾವಣ ಆಯೋಗ ನಿರ್ಧರಿಸಲಾಗದು ಎಂದು ತಿಳಿಸಿದೆ. ಪ್ರಾಧಿಕಾರ ಸಂಬಂಧಿತ ವ್ಯಕ್ತಿಗೆ ನೋಟಿಸ್ ನೀಡಿ ಆತನ ವಾದವನ್ನು ಆಲಿಸಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಒಂದು ವೇಳೆ ಪ್ರಾಧಿಕಾರ ಆತನ ಪೌರತ್ವವನ್ನು ಎತ್ತಿ ಹಿಡಿದದ್ದೇ ಆದಲ್ಲಿ ಆಯೋಗ ಆತನ ಹೆಸರನ್ನು ಮತ್ತೆ ಮತದಾರರ ಪಟ್ಟಿಗೆ ಕಡ್ಡಾಯವಾಗಿ ಸೇರ್ಪಡೆಗೊಳಿಸಬೇಕು. ಈ ಎಲ್ಲಾ ಪ್ರಕ್ರಿಯೆಗಳು ನಿಗದಿತ ಅವಧಿಯೊಳಗಾಗಿ ಪೂರ್ಣಗೊಳ್ಳಬೇಕು ಎಂದು ನಿರ್ದೇಶನ ನೀಡುವ ಮೂಲಕ ನ್ಯಾಯಪೀಠ ಈ ಬಗೆಗಿನ ಜನತೆಯ ಆತಂಕವನ್ನು ದೂರ ಮಾಡಿದೆ. ಸುಪ್ರೀಂಕೋರ್ಟ್‌ನ ತೀರ್ಪಿನ ಬಳಿಕವಾದರೂ ರಾಜಕೀಯ ಪಕ್ಷಗಳು ಮತ್ತು ಸಂಘಸಂಸ್ಥೆಗಳು ಚುನಾವಣ ಆಯೋಗ ನಡೆಸುತ್ತಿರುವ ಎಸ್‌ಐಆರ್ ಪ್ರಕ್ರಿಯೆಗೆ ಪೂರ್ಣ ಸಹಕಾರ ನೀಡಬೇಕು.

### ಚುನಾವಣೆಗೆ ಸಹಕಾರಿಯಾಗಲಿದೆ

**ಬಿಹಾರಕ್ಕೆ ಸಂಬಂಧಿಸಿದಂತೆ ಎಸ್‌ಐಆರ್‌ನ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್‌ನ ನ್ಯಾಯಪೀಠ ಸಮಗ್ರ ಪರಾಮರ್ಶೆ ನಡೆಸಿ, ಚುನಾವಣ ಆಯೋಗ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ನಡೆಸುತ್ತಿರುವ ಎಸ್‌ಐಆರ್ ಕಾನೂನುಬದ್ಧವಾಗಿದೆ ಎಂದು ತೀರ್ಪಿತ್ತಿದೆ.**

**ಎಸ್‌ಐಆರ್ ಸ್ವಪ್ನ ಮತ್ತು ನ್ಯಾಯಸಮ್ಮತ ಚುನಾವಣೆಗೆ ಸಹಕಾರಿ ಯಾಗಲಿದೆ. ಆರಂಭದಲ್ಲಿ ಕರಡು ಪಟ್ಟಿ ಪ್ರಕಟಿಸಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ಅವುಗಳನ್ನು ಇತ್ಯರ್ಥಪಡಿಸಿದ ಬಳಿಕವಷ್ಟೇ ಮತದಾರರ ಅಂತಿಮ ಪಟ್ಟಿಯನ್ನು ಬಿಡುಗಡೆ ಮಾಡುತ್ತಿದೆ.**

ಅರ್ಹ ಮತದಾರನ ಹೆಸರು ಮತದಾರರ ಪಟ್ಟಿಯಿಂದ ಕೈಬಿಟ್ಟು ಹೋಗದಂತೆ ಎಚ್ಚರ ವಹಿಸುವುದು ಚುನಾವಣ ಆಯೋಗ ಮತ್ತು ರಾಜಕೀಯ ಪಕ್ಷಗಳ ಸಮಾನ ಹೊಣೆಗಾರಿಕೆ ಯಾಗಿದೆ. ಇದನ್ನು ಅರಿತುಕೊಂಡು ಎಸ್‌ಐಆರ್ ಪ್ರಕ್ರಿಯೆ ಸುಸೂತ್ರವಾಗಿ ನಡೆಯುವಂತಾಗಲು ಚುನಾವಣ ಆಯೋಗದೊಂದಿಗೆ ಪಕ್ಷಗಳು ಮತ್ತು ಸಾರ್ವಜನಿಕರು ಕೈಜೋಡಿಸಬೇಕು.




• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಆ ಪರಮಮಂಗಳಮೂರ್ತಿಯಾದ ಶ್ರೀಹರಿ ರಾಮಚಂದ್ರನ ದೂತ. ತಾಯಿ, ರಾಘವನು ಕ್ಷೇಮದಿಂದಿದಾನೆ, ನಿನ್ನ ಹದುಳವನ್ನು ತಿಳಿದು ಬರಲು ನನ್ನನ್ನು ಕಳಿಸಲು, ನಾನು ಬರುವಾಗ ವೀರ ಲಕ್ಷ್ಮಣನು ನಿನಗೆ ತನ್ನ ನಮಸ್ಕಾರಗಳನ್ನು ತಿಳಿಸಲು ಹೇಳಿದ. ಇಬ್ಬರೂ ರಾಜಕುವರರೂ ಆರೋಗ್ಯದಿಂದಿದ್ದಾರೆ, ಆದರೆ ನಿನ್ನ ಯೋಚನೆಯಿಂದ ಕೊರಗುತ್ತಿದ್ದಾರೆ. ಅದಕ್ಕೆ ನನ್ನನ್ನು ಕಳಿಸಲು ನಾನು ಬಂದು ನಿನ್ನ ಚರಣಕಮಲಗಳನ್ನು ಕಂಡು ಕೃತಾರ್ಥನಾದೆ ಎಂದ ಆಗ ಜಾನಕಿಯು, ನೂರು ವರ್ಷದ ಆಯುಷ್ಯದಲ್ಲಿ ಒಮ್ಮೆಯಾದರೂ ಸಂತೋಷವುಂಟಾಗದಿರುವುದೇ' ಎಂಬ ಗಾದೆಯ ಹಾಗೆ ನನಗಿಂದು ಶ್ರೀರಘುವರನ ಧ್ಯಾನದ ಫಲ ದೊರಕಿತು ಎಂದು ಸುಮ್ಮನಾದಳು.

ಮಾರುತಿಯು ನಮಸ್ಕರಿಸುತ್ತ ಅವಳ ಹತ್ತಿರ ಬರಲುಪಕ್ರಮಿಸಿದ ಆದರೆ ಸೀತೆಯು ಭೀತಿಯಿಂದ ಹಿಂದೆ ಹಿಂದೆ ಸರಿದು ನಡುಗುತ್ತ ಅವನನ್ನು ಕುರಿತು, ಹಿತದ ಮಾತುಗಳನ್ನಾಡುತ್ತಿರುವ ಪಾಪಿಯೇ, ಭಿಕ್ಷುರೂಪದಿಂದ ಕಾಡಿನಿಂದ ಕದ್ದು ತಂದು ಈಗ ಮತ್ತೊಂದು ರೂಪದಲ್ಲಿ ಮೃದುಮಾತುಗಳನ್ನಾಡುತ್ತ ಬಂದಿರುವೆಯಲ್ಲವೇ? ರಾಜರುಗಳೊಡನೆ ಯುದ್ಧ ಮಾಡುತ್ತ, ದೇವಯಕ್ಷರುಗಳ ಮೇಲೆ ಕೋಪಗೊಂಡು, ಈಗ ಸಲ್ಲಾಪದ ನುಡಿಗಳನ್ನಾಡುತ್ತಿರುವೆಯಾ, ಹಿಂದೆ ಹೋಗು ಎಂದು ಭ್ರಮೆಗೊಳಗಾದವಳಂತೆ ಕಠಿಣ ನುಡಿಗಳನ್ನಾಡಿದಳು. ಕನಸೋ, ವಾಯುವಿಕಾರವೋ, ಪಿತ್ತದುರುಬೆಯೋ ಎಂಬಂತೆ ಚಿಂತೆಯಿಂದ ತುಂಬಿ, ಹಿಡಿದಿದ್ದ ಕೊಂಬೆಯನ್ನು ಬಿಟ್ರು ನೆಲದ ಮೇಲೆ ಕುಳಿತು ರಘುಪತಿಯನ್ನು ನೆನೆಸಿಕೊಂಡು ಕೊಂಚ ಹೊತ್ತು ಮನಸ್ಸು ಬಂದಂತೆ ಹಲುಬಿದಳು. ಕಪಿಯೊಂದು ಸಮುದ್ರವನ್ನು ದಾಟಿ ಬರುವುದು ಹೊಸ ಮಾತು, ಹುಸಿನುಡಿ ರಾಕ್ಷಸರ ನಡುವೆ ಮನುಷ್ಯರ ಹೆಸರು ಬರುವುದುಂಟೇ? ಮತ್ತೆ ದಶಮೌಳಿಯೇ ಕಪಟವೇಷದಲ್ಲಿ ಬಂದಿದ್ದಾನೆ ಎಂದು ತಳ್ಳಂಕಗೊಂಡು, ಹನುಮನಿದ್ದ ಕಡೆ ನೋಡುತ್ತ, ''ಕೇಳಯ್ಯಾ, ಕಪಿರಾಯ, ನೀನು ಶ್ರೀರಾಮನ ಸೇವಕನಾದರೆ ಅವನ ಗುಣವಿಶೇಷಗಳೇನು ಹೇಳು'' ಎಂದಳು. ಆ ಮಾತಿಗೆ ಸಂತಸಗೊಂಡ ಪ್ರಭಂಜನಕುಮಾರನು ಮತ್ತೆ ನಮಸ್ಕರಿಸಿ, 'ನನ್ನ ಸ್ವಾಮಿಯದು ಕಡಲ ಧೈರ್ಯ, ಸೂರ್ಯನ ತೇಜ, ಚಂದ್ರನ ಕಾಂತಿ, ಸಿಂಹದ ವಿಕ್ರಮ, ಸತ್ಯದ ಬೆಡಗುಳ್ಳ ನುಡಿ, ಕೋಪದಲ್ಲಿ ಬೆಂಕಿ – ಸುರರೊಡೆಯನಾದ ರಘುನಾಥನ ಶುಭಗುಣಗಳಿಗೆ ಸಾಟಿಯೇ ಇಲ್ಲ. ಅವನದು ಮನ್ಮಥನಂತಹ ಸುಂದರಾಕಾರ, ಸಾಧುಸಜ್ಜನ ಪೋಷಕ, ವಿಷ್ಣುಸಮಾನ, ಹೊನ್ನ ಜಿಂಕೆಯಾಕಾರದಲ್ಲಿ ಮಾರೀಚನು ದೂರಕ್ಕೆ ಸೆಳೆದೊಯ್ಯಲು, ರಾವಣನು ನಿನ್ನನ್ನು ಮುನಿವೇಷದಲ್ಲಿ ಕದ್ದೊಯ್ಯಲು, ಆ ಶ್ರೀರಾಮದೇವನು ನನ್ನನ್ನು ಕಳಿಸಿಕೊಟ್ಟಿದ್ದಾನೆ. ರಘುರಾಮನಿಗೆ ಸೂರ್ಯಕುಮಾರನಾದ ಸುಗೀವನ ಜೊತೆ ಗೆಳೆತನ ದೊರೆಯಲು ಅಪರಿಮಿತ ವಾನನರ ನಡುವೆ ನಿನ್ನ ಕುರುಹುಗಳನ್ನು ವಿವರಿಸಿ ವೇಗದಿಂದ ಹೋಗಿ ಧರಣಿಜೆಗೆ ಸಮಾಧಾನ ಹೇಳು ಎಂದು ಅಪ್ಪಣೆ ಕೊಡಲು ಬಂದಿರುವ ದೂತ ನಾನು ರಾಮನ ಕಿಂಕರ. ನನ್ನ ಮಾತನ್ನು ನಂಬು, ತಾಯಿ. ರಕ್ಕಸರಾಜನೆಂದು ಅನುಮಾನ ಪಡಬೇಡ, ನಾನು ನಿನ್ನ ಚರಣಸೇವಕ'' ಎಂದು ಶ್ರೀರಾಮನ ಕುರುಹುಗಳನ್ನು ವಿವವರಿಸಿದ ಆಗ ಸೀತೆಯು, ಸುಗ್ರೀವನಲ್ಲಿ ರಾಮನಿಗೆ ಗೆಳೆತನವಾಯಿತು, ನಾನು ಅವನ ದೂತ ಎಂದು ಹೇಳಿಕೊಂಡರೂ, ರಾಮಲಕ್ಷ್ಮಣರ ಲಕ್ಷಣಗಳನ್ನೂ ನಡವಳಿಕೆ ಬಗೆಯನ್ನೂ ಇನ್ನಷ್ಟು ವಿಸ್ತಾರವಾಗಿ ಹೇಳು ಎನ್ನಲು, ಹನುಮಂತನು **ಸಂತಸಗೊಂಡು ಬಣ್ಣಿಸಲು ತೊಡಗಿದ:** ಧೈರ್ಯದಲ್ಲಿ ಹಿಮವಂತ, ಬುದ್ಧಿಯಲ್ಲಿ ಬೃಹಸ್ಪತಿ, ತೇಜಸ್ಸಿನಲ್ಲಿ ಸೂರ್ಯಸಮಾನ, ಮನೋಹರತೆಯಲ್ಲಿ ಚಂದ್ರ, ಸ್ವಜನ ಪರಜನ ಮನೋಲ್ಲಾಸಕರ, ಲೋಕಪ್ರಾಣಸಂರಕ್ಷಕ, ಪರಸ್ತ್ರೀವಿಮುಖ, ಬಲಿಷ್ಠರಲ್ಲಿ ಬಲಿಷ್ಠ, ಸಾಧುಗಳನ್ನು ಪೊರೆದು ದುರ್ಜನರನ್ನು ಶಿಕ್ಷಿಸುವ ಸರ್ವಜ್ಞ ರಾಜವಿದ್ಯಾವಿಶಾರದ ಶ್ರೀರಾಮ.

ಮುಂದುವರೆಯುವುದು



ಕಲಾ ಸಾಹಿತ್ಯ

ವಿಶ್ವಾಸ್ ಡಿ. ಗೌಡ
ಲೇಖಕರು
ಸಾಮಾಜಿಕ ಚಿಂತಕ

# ಸಮಾಜದಲ್ಲಿ ಉತ್ತಮ ವಾತಾವರಣ ನಿರ್ಮಾಣ

## ಸಂಸ್ಕೃತಿಯೇ ನಮ್ಮ ದೇಶದ ದೊಡ್ಡ ಸಂಪತ್ತು

### ವೈವಿಧ್ಯತೆಯಲ್ಲಿ ಏಕತೆ

**ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ಉಳಿಯಬೇಕಾದರೆ ಪರಸ್ಪರ ಗೌರವ ಅತ್ಯಗತ್ಯ. ನಮ್ಮ ನಂಬಿಕೆಗಳನ್ನು ನಾವು ಪ್ರೀತಿಸುವುದರ ಜೊತೆಗೆ ಇತರರ ಭಾವನೆಗಳಿಗೂ ಮೌಲ್ಯ ನೀಡುವ ಗುಣ ಸಮಾಜವನ್ನು ಇನ್ನಷ್ಟು ಸುಂದರಗೊಳಿಸುತ್ತದೆ. ಧರ್ಮದ ಹೆಸರಿನಲ್ಲಿ ವಿಭಜನೆ ಮಾಡುವುದಕ್ಕಿಂತ, ಮಾನವೀಯತೆಯ ಆಧಾರದ ಮೇಲೆ ಒಂದಾಗುವುದು ಇಂದಿನ ಅಗತ್ಯವಾಗಿದೆ.**

**ಭಾರತದ ಸಂಸ್ಕೃತಿಯ ಮಹತ್ವವೇ ವೈವಿಧ್ಯತೆಯಲ್ಲಿ ಏಕತೆ. ಇಲ್ಲಿ ಅನೇಕ ಪರಂಪರೆಗಳು ಇದ್ದರೂ, ಎಲ್ಲರನ್ನೂ ಕೊಂಡೊಯ್ಯುವ ಸಾಮಾನ್ಯ ಮೌಲ್ಯ ಪ್ರೀತಿ ಮತ್ತು ಸಹಬಾಳ್ವೆ. ಹಬ್ಬಗಳು ಈ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಒಂದು ಉತ್ತಮ ಮಾಧ್ಯಮವಾಗಿವೆ. ಮಕ್ಕಳಿಗೆ ಸಹಾನುಭೂತಿ, ಸಹಕಾರ ಮತ್ತು ಗೌರವದ ಪಾಠವನ್ನು ಕಲಿಸುವುದರಲ್ಲಿ ಹಬ್ಬಗಳ ಪಾತ್ರ ಮಹತ್ತರವಾಗಿದೆ.**

## ಹಬ್ಬಗಳ ನಿಜವಾದ ಅರ್ಥ: ಮಾನವೀಯತೆ ಮತ್ತು ಸೌಹಾರ್ದತೆಯ ಸೇತು




ಭಾರತವು ಅನೇಕ ಧರ್ಮಗಳು, ಭಾಷೆಗಳು ಮತ್ತು ಸಂಸ್ಕೃತಿಗಳ ಸಮಾಗಮವಾಗಿರುವ ವಿಶಿಷ್ಟ ದೇಶ. ಇಲ್ಲಿ ಆಚರಿಸಲಾಗುವ ಪ್ರತಿಯೊಂದು ಹಬ್ಬವೂ ಕೇವಲ ಒಂದು ಸಮುದಾಯದ ಸಂತೋಷವಲ್ಲ; ಅದು ಸಮಾಜದಲ್ಲಿ ಪ್ರೀತಿ, ಸಹಬಾಳ್ವೆ ಮತ್ತು ಮಾನವೀಯ ಮೌಲ್ಯಗಳನ್ನು ಬಲಪಡಿಸುವ ಒಂದು ಅವಕಾಶವಾಗಿದೆ. ಹಬ್ಬಗಳು ಮನುಷ್ಯರನ್ನು ಹತ್ತಿರ ತರುವ ಶಕ್ತಿಯನ್ನು ಹೊಂದಿವೆ. ಪರಸ್ಪರ ಗೌರವ ಮತ್ತು ಸಂತೋಷ ಹಂಚಿಕೊಳ್ಳುವ ಸಂಸ್ಕೃತಿಯೇ ನಮ್ಮ ದೇಶದ ದೊಡ್ಡ ಸಂಪತ್ತು.

ಪ್ರತಿಯೊಂದು ಹಬ್ಬವೂ ತನ್ನದೇ ಆದ ಸಂದೇಶವನ್ನು ಹೊತ್ತು ತರುತ್ತದೆ. ಕೆಲವು ಹಬ್ಬಗಳು ತ್ಯಾಗವನ್ನು ನೆನಪಿಸುತ್ತವೆ, ಕೆಲವು ಕರುಣೆಯನ್ನು ಬೋಧಿಸುತ್ತವೆ, ಇನ್ನೂ ಕೆಲವು ಸಹೋದರತ್ವ ಮತ್ತು ಸೇವಾಭಾವವನ್ನು ಬೆಳೆಸುತ್ತವೆ. ಯಾವ ಧರ್ಮದ ಹಬ್ಬವಾಗಿರಲಿ, ಅದರ ಆಂತರಿಕ ಅರ್ಥ ಮಾನವೀಯ ಮೌಲ್ಯಗಳನ್ನೇ ಪ್ರತಿಬಿಂಬಿಸುತ್ತದೆ. ಇದೇ ಕಾರಣಕ್ಕೆ ಭಾರತದಲ್ಲಿ ವಿವಿಧ ಸಮುದಾಯಗಳ ಜನರು ಪರಸ್ಪರರ ಹಬ್ಬಗಳನ್ನು ಗೌರವದಿಂದ ನೋಡುತ್ತಾರೆ.

ಇಂದಿನ ವೇಗದ ಜೀವನದಲ್ಲಿ ಮನುಷ್ಯ ಮನುಷ್ಯನ ನಡುವೆ ಅಂತರ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ, ಹಬ್ಬಗಳು ಕುಟುಂಬ ಮತ್ತು ಸಮಾಜವನ್ನು ಒಟ್ಟುಗೂಡಿಸುವ ಕೆಲಸ ಮಾಡುತ್ತವೆ. ಸಂಬಂಧಗಳ ಮಹತ್ವವನ್ನು ನೆನಪಿಸಿ, ಸಂತೋಷವನ್ನು ಹಂಚಿಕೊಳ್ಳುವ ಮನೋಭಾವವನ್ನು ಬೆಳೆಸುತ್ತವೆ. ವಿಶೇಷವಾಗಿ ಬಡವರು, ಅಗತ್ಯವಿರುವವರು ಮತ್ತು ಸಮಾಜದ ಹಿಂದುಳಿದ ವರ್ಗಗಳೊಂದಿಗೆ ಸಹಾಯ ಮತ್ತು ಪ್ರೀತಿಯನ್ನು ಹಂಚಿಕೊಳ್ಳುವ ಸಂಸ್ಕೃತಿ ಹಬ್ಬಗಳ ಮೂಲಕ ಇನ್ನಷ್ಟು ಬಲವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳು ಮತ್ತು ಸಾರ್ವಜನಿಕ ಚರ್ಚೆಗಳಲ್ಲಿ ಅನಗತ್ಯ ವಿವಾದಗಳು ಹೆಚ್ಚಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇಂತಹ ಸಂದರ್ಭಗಳಲ್ಲಿ ಜವಾಬ್ದಾರಿಯುತವಾಗಿ ಮಾತನಾಡುವುದು ಮತ್ತು ಬರೆಯುವುದು ಅತ್ಯಂತ ಮುಖ್ಯ. ಯಾವುದೇ ಹಬ್ಬದ ಕುರಿತು ಬರೆಯುವಾಗ ಅದರ ಸಕಾರಾತ್ಮಕ ಸಂದೇಶವನ್ನು ಮಾತ್ರ ಮುಂದಿಟ್ಟರೆ ಸಮಾಜದಲ್ಲಿ ಉತ್ತಮ ವಾತಾವರಣ ನಿರ್ಮಾಣವಾಗುತ್ತದೆ.


**ಹಬ್ಬಗಳ ನಿಜವಾದ ಅರ್ಥ ವೈಭವ ಅಥವಾ ಪ್ರದರ್ಶನದಲ್ಲಿಲ್ಲ;** ಅದು ಮನುಷ್ಯರ ಮನಸ್ಸುಗಳನ್ನು ಹತ್ತಿರ ತರುವ ಶಕ್ತಿಯಲ್ಲಿದೆ. ಪರಸ್ಪರ ಸಂತೋಷ ಹಂಚಿಕೊಳ್ಳುವುದು, ಸಹಾಯ ಮಾಡುವ ಮನಸ್ಸು ಬೆಳೆಸುವುದು ಮತ್ತು ಸಮಾಜದಲ್ಲಿ ಶಾಂತಿಯ ಸಂದೇಶ ಹರಡುವುದೇ ಪ್ರತಿಯೊಂದು ಹಬ್ಬದ ಉದ್ದೇಶವಾಗಬೇಕು. ಕೊನೆಗೆ ಹೇಳುವುದಾದರೆ, ಹಬ್ಬಗಳು ಧರ್ಮಗಳ ನಡುವೆ ಗೋಡೆಗಳನ್ನು ನಿರ್ಮಿಸಲು ಅಲ್ಲ, ಹೃದಯಗಳನ್ನು ಸಂಪರ್ಕಿಸಲು ಬಂದಿರುವ ಸಾಂಸ್ಕೃತಿಕ ಸೇತುವೆಗಳಾಗಿವೆ. ಮಾನವೀಯತೆ, ಪ್ರೀತಿ ಮತ್ತು ಗೌರವ ಎಂಬ ಮೌಲ್ಯಗಳು ಉಳಿದರೆ ಸಮಾಜ ಸದಾ ಶಾಂತಿಯುತವಾಗಿರುತ್ತದೆ. ಹಬ್ಬಗಳ ಸಂದೇಶವೂ ಇದೇ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುತ್ತಾ, ಗೌರವಿಸುತ್ತಾ, ಒಗ್ಗಟ್ಟಿನಿಂದ ಬದುಕುವುದು.

# ಪ್ರಕಾಶನಗರ ರಾಯರ ಮಠದಲ್ಲಿ ಟಿಟಿಡಿ ಕಾರ್ಯಕ್ರಮ

• **ಉದಯವಾಹಿನಿ, ಬೆಂಗಳೂರು**

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಹಾಗೂ ಶ್ರೀ ಗುರು ರಾಘವೇಂದ್ರ ಸೇವಾ ಸಮಿತಿ ಪ್ರಕಾಶನಗರ ಇವುಗಳ ಸಂಯುಕ್ತಾಶ್ರಯದಲ್ಲಿ ಜೂನ್ 2 ರಿಂದ 5ರವರೆಗೆ ನಾಲ್ಕು ದಿನಗಳ ಕಾಲ ಧಾರ್ಮಿಕ/ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅವುಗಳ ವಿವರಗಳು ಈ ರೀತಿ ಇವೆ : ಜೂನ್ 2, ಮಂಗಳವಾರ : ಸಂಜೆ 6-00ಕ್ಕೆ-ರಾಜಾಜಿನಗರದ ಅಂಭೃಣಿ ಭಜನಾ ಮಂಡಳಿಯ ಸದಸರಿಂದ ಭಜನೆ, 7-00ಕ್ಕೆ-ಶ್ರೀ ರಾಮವಿಠಲಾಚಾರ್ಯರಿಂದ ಧಾರ್ಮಿಕ ಪ್ರವಚನ. ಜೂನ್ 3, ಬುಧವಾರ : ಸಂಜೆ 6-00ಕ್ಕೆ-ಗಿರಿನಗರದ ಶೃತಿ ಸಂಗೀತ ಶಾಲೆಯ ಸದಸ್ಯರಿಂದ ಭಜನೆ, 7-00ಕ್ಕೆ-ಶ್ರೀ ರಾಮವಿಠಲಾಚಾರ್ಯರಿಂದ ಧಾರ್ಮಿಕ ಪ್ರವಚನ.

**ಜೂನ್ 4, ಗುರುವಾರ :** ಸಂಜೆ 6-30ಕ್ಕೆ-ಹರಿನಾಮ ಸಂಕೀರ್ತನೆ'. ಗಾಯನ : ಕು|| ಅಭಿಜ್ಞ ಪಿ. ಕಶ್ಯಪ್, ಪಿಟೀಲು : ಶ್ರೀ ಎಸ್. ಶಶಿಧರ್, ಮೃದಂಗ : ಶ್ರೀ ಶ್ರೀಧರ್ ರಾವ್. 5, ಶುಕ್ರವಾರ : ಸಂಜೆ 6-00ಕ್ಕೆ-ರಾಜಾಜಿನಗರದ ರುಕ್ಮಿಣಿ ಮಹಿಳಾ ಸಂಘದ ಸದಸ್ಯರಿಂದ ಭಜನೆ, 7-00ಕ್ಕೆ ಶ್ರೀ ರಾಮವಿಠಲಾಚಾರ್ಯರಿಂದ ಧಾರ್ಮಿಕ ಪ್ರವಚನ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಟಿಟಿಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ|| ಪಿ. ಭುಜಂಗರಾವ್ ತಿಳಿಸಿದ್ದಾರೆ. ಸ್ಥಳ : ಕಾರ್ಯಕ್ರಮಗಳನ್ನು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, 11ನೇ ಮುಖ್ಯರಸ್ತೆ, ಪ್ರಕಾಶನಗರ, ಬೆಂಗಳೂರು-560021





# ಪೈಲ್ವಾನರ ಮೃತ್ತಿಕಾ ಚಿಕಿತ್ಸೆಯ ವೈಜ್ಞಾನಿಕ ಹಿರಿಮೆ



ಅಂತರಂಗದ ಮಾತು

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ಹಳ್ಳಿಯ ಗರಡಿ ಮನೆ ಕೇವಲ ಬೆವರು ಸುರಿಸುವ ತಾಣವಲ್ಲ ಅದು ಆರೋಗ್ಯದ ಅಮೃತ ಕಲಶ. ಅರುಣೋದಯದ ಇಬ್ಬನಿಯಲ್ಲಿ ಕೆಮ್ಮಣ್ಣಿನ ಕಣಕ್ಕಿಳಿದು, ಮೈಯೆಲ್ಲಾ ಮೃತ್ತಿಕೆ ಲೇಪಿಸಿಕೊಂಡು ಮಲ್ಲರು ಪಟ್ಟು ಹೂಡುವ ಚಿತ್ರವೇ ಕಾವ್ಯಮಯ. ನಾಗರಿಕರ ದೃಷ್ಟಿಗೆ ಇದು ಧೂಳಾಟವಾದರೂ, ಹಿರಿಯರು ಕಟ್ಟಿದ ಲೇಪನದ ಹಿಂದೆ ಜಗತ್ತು ನಿಬ್ಬೆರಗಾಗುವ ದೇಹ ತತ್ವವಿದೆ. ಇಲ್ಲಿ ಮಣ್ಣು ವಜ್ರದೇಹಕ್ಕೆ ಚೇತನ ಊಡುವ ಜೀವಾಮೃತ. ದಂಡ-ಬೈಠಕ್‌ನಲ್ಲಿ ಸ್ನಾಯುಗಳು ಕಾದ ಸಲಾಕೆಯಂತೆ ಧಗಧಗಿಸುವಾಗ, ಮೈಗೆ ಹಚ್ಚಿದ ಮಣ್ಣು ಅನುಪಮ ನೈಸರ್ಗಿಕ ಶೈತ್ಯಕಾರಿಯಾಗಿ ದೇಹತಾಪವನ್ನು ನಿಯಂತ್ರಿಸಿ, ಅವಿರತ ಸಾಧನೆಗೆ ಶಕ್ತಿ ತುಂಬುತ್ತದೆ. ಅಖಾಡದ ಮಣ್ಣು ಸಾಮಾನ್ಯವಲ್ಲ. ಹಾಲು, ತುಪ್ಪ, ಹರಳೆಣ್ಣೆ, ಔಷಧೀಯ ಸಸ್ಯಗಳಿಂದ ಸಂಸ್ಕರಿತ ಈ ಲೇಪವು ನಿರ್ಜೀವ ತ್ವಚಾ ಕಣಗಳನ್ನು ಕಿತ್ತೆಸೆದು ರೋಮರಂಧ್ರಗಳನ್ನು ವಿಕಸಿಸುತ್ತದೆ. ವಿಷಾಂಶಗಳು ಸ್ವೇದವಾಗಿ ಹೊರಹೊಮ್ಮಲು ಮಣ್ಣು ಚಾಲನೆ ನೀಡುತ್ತದೆ. ಇದರಿಂದಲೇ ಮಲ್ಲರ ಚರ್ಮ ವಿದ್ಯುತ್‌ಪ್ರಭೆ ಪಡೆಯುತ್ತದೆ.

ಅರ್ಥಿಂಗ್ ಎಂಬ ಆಧುನಿಕ ಸಂಶೋಧನೆ ಮಣ್ಣಿನ ಸ್ಪರ್ಶದಿಂದ ಮಾನಸಿಕ ಸ್ವಾಸ್ಥ್ಯ ವೃದ್ಧಿಸುತ್ತದೆ ಎನ್ನುತ್ತದೆ. ಮೃತ್ತಿಕಾ ಪರಿಮಳ ನರವ್ಯೂಹವನ್ನು ತಣಿಸಿ, ಒತ್ತಡದ ಕಾರ್ಟಿಸೋಲ್ ಕರಗಿಸುತ್ತದೆ. ಮಲ್ಲರ ಅಚಲ ಧೈರ್ಯಕ್ಕೆ ಈ ನಂಟೇ ಆಧಾರ.ಮಹಾನಗರಗಳ ಸ್ಪಾಗಳಲ್ಲಿ ಸಹಸ್ರಗಟ್ಟಲೆ ಸುರಿದು ಪಡೆಯುವ ಮಡ್ ಬಾತ್ ನಮ್ಮ ಗರಡಿಯಲ್ಲಿ ಯುಗಯುಗಗಳಿಂದ ಉಚಿತ. ಮಣ್ಣು ಮಲ್ಲರಿಗೆ ರಣಾಂಗಣ ಮಾತ್ರವಲ್ಲ, ಪೋಷಿಸುವ ಮಾತೃ. ಈ ಮೃತ್ತಿಕಾ ವಿಜ್ಞಾನವನ್ನು ಯುವಜನತೆ ಅಭಿಮಾನದಿಂದ ಸ್ವೀಕರಿಸಿದರೆ, ಭಾರತೀಯ ವಜ್ರಕಾಯದ ಸಂಕಲ್ಪ ಸಾಕಾರಗೊಳ್ಳುವುದರಲ್ಲಿ ಸಂಶಯವಿಲ್ಲ.

**ಸ್ವೇದದಿಂದ ಜಾರುವ ಮೈಗೆ ಮಣ್ಣು ಅಪ್ರತಿಮ ಹಿಡಿತ ಒದಗಿಸುತ್ತದೆ. ಸಹಜ ಘರ್ಷಣೆ ಸೃಷ್ಟಿಸಿ ಬಾಹುಬಲವನ್ನು ದ್ವಿಗುಣಗೊಳಿಸಿ, ದಾಳಗಳು ನಿಷ್ಫಲವಾಗಲು ಸಹಾಯ ಮಾಡುತ್ತದೆ. ವ್ಯಾಯಾಮಾ ನಂತರದ ಸ್ನಾಯು ಸಂಕೋಚನಕ್ಕೆ ಮಣ್ಣು ದಿವ್ಯೌಷಧ. ಖನಿಜ ತತ್ವಗಳು ತ್ವಚೆಯ ಮೂಲಕ ಇಂಗಿ ಉಪಶಮನ ನೀಡುತ್ತವೆ. ಇಂದಿನ ಪರಿಭಾಷೆಯಲ್ಲಿ ಇದೇ 'ಮಡ್ ಥೆರಪಿ'. ಮಣ್ಣಿನ ಅವಿರತ ಸಂಮರ್ದನದಿಂದ ಸ್ನಾಯುಗಳು ಶೀಘ್ರ ಪುನಶ್ಚೇತನಗೊಳ್ಳುತ್ತವೆ.**



## ಬೇಸಿಗೆಯಲ್ಲಿ ಫ್ಯಾಮಿಲಿ ಟೂರ್ ಮಾಡಲು ಯೋಚಿಸುತ್ತಿದ್ದೀರಾ?



ಮಕ್ಕಳಿಗೆ ಬೇಸಿಗೆ ರಜೆ ಪ್ರಾರಂಭವಾದಾಗ ಅನೇಕರು ಪ್ರವಾಸಗಳನ್ನು ಕೈಗೊಳ್ಳಲು ಪ್ಲಾನ್ ಮಾಡುತ್ತಾರೆ. ಕೆಲವರು ಸ್ನೇಹಿತರು ಮತ್ತು ಕುಟುಂಬದೊಂದಿಗೆ ದೂರದ ಪ್ರದೇಶಗಳಿಗೆ ಪ್ರಯಾಣಿಸಲು ಆಯ್ಕೆ ಮಾಡಿದರೆ, ಮತ್ತೆ ಕೆಲವು ಜನರು ಹತ್ತಿರದ ಸ್ಥಳಗಳಿಗೆ ಭೇಟಿ ನೀಡಲು ಬಯಸುತ್ತಾರೆ. ನಿರ್ದಿಷ್ಟವಾಗಿ ಹೇಳುವುದಾದರೆ, ಜನರು ಬೇಸಿಗೆಯ ತಿಂಗಳುಗಳಲ್ಲಿ ತಂಪಾದ, ಆಹ್ಲಾದಕರ ಹವಾಮಾನವಿರುವ ಸ್ಥಳಗಳನ್ನು ಹುಡುಕುತ್ತಾರೆ. ತಂಪಾದ ಸ್ಥಳಗಳು' ಎಂಬ ವಿಷಯ ಬಂದಾಗ ಊಟಿ ಹಾಗೂ ಮನಾಲಿಯಂತಹ ತಾಣಗಳು ಅನೇಕರಿಗೆ ಮೊದಲು ನೆನಪಿಗೆ ಬರುತ್ತವೆ. ಈ ಜನಪ್ರಿಯ ತಾಣಗಳನ್ನು ಮೀರಿ ಬೇಸಿಗೆಯಲ್ಲಿ ಭೇಟಿ ನೀಡಲು ಅಷ್ಟೇ ಉತ್ತಮ ಆಯ್ಕೆಗಳಾಗಿರುವ ಭಾರತದಲ್ಲಿ ಹಲವಾರು ಇತರ ತಾಣಗಳಿವೆ. ಈ ಸ್ಟೋರಿಯಲ್ಲಿ ತಂಪಾದ ಸುಂದರ ಸ್ಥಳಗಳು ಯಾವವು ಎಂಬುದನ್ನು ತಿಳಿಯೋಣ. ಪಶ್ಚಿಮ **ಬಂಗಾಳದ ಡಾರ್ಜಿಲಿಂಗ್:** ಬೇಸಿಗೆಯಲ್ಲಿ ಭೇಟಿ ನೀಡಲು ಡಾರ್ಜಿಲಿಂಗ್ ಪ್ರಮುಖ ತಾಣಗಳಲ್ಲಿ ಸ್ಥಾನ ಪಡೆದಿದೆ. ಇಲ್ಲಿ ಕಂಡುಬರುವ ನೈಸರ್ಗಿಕ ಸೌಂದರ್ಯವು ನಿಜವಾಗಿಯೂ ಮೋಡಿ ಮಾಡುತ್ತದೆ. ವಿಶ್ವಪರಂಪರೆಯ ತಾಣ ಡಾರ್ಜಿಲಿಂಗ್ ಹಿಮಾಲಯನ್ ಪುಟ್ಟ ರೈಲಿನಲ್ಲಿ ಪ್ರಯಾಣಿಸುವುದು ಒಂದು ಮರೆಯಲಾಗದ ಅನುಭವವಾಗಿದೆ. ಟೈಗರ್ ಹಿಲ್ ಪ್ರದೇಶದಲ್ಲಿ ಸೂರ್ಯೋದಯವನ್ನು ವೀಕ್ಷಿಸುವುದು ಮನಕ್ಕೆ ಸಂತೋಷ ಲಭಿಸುತ್ತದೆ. ಸೂರ್ಯನ ಕಿರಣಗಳು ಕಾಂಚನಜುಂಗಾ ಪರ್ವತದ ಮೇಲೆ ಬಿದ್ದಾಗ ಅದು ಬಂಗಾರದಂತೆ ಹೊಳೆಯುತ್ತದೆ. ಡಾರ್ಜಿಲಿಂಗ್ ಚಹಾ ತೋಟಗಳಿಗೆ ಹೆಸರುವಾಸಿಯಾಗಿವೆ. ಹ್ಯಾಪಿ ವ್ಯಾಲಿ ಟೀ ಎಸ್ಟೇಟ್‌ನಂತಹ ತೋಟಗಳಿಗೆ ಭೇಟಿ ನೀಡಬಹುದು. ಬತಾಸಿಯಾ ಲೂಪ್ ಇಲ್ಲಿ ರೈಲು ವೃತ್ತಾಕಾರದಲ್ಲಿ ಚಲಿಸುತ್ತದೆ, ಇಲ್ಲಿಂದ ಪರ್ವತಗಳ ಸುಂದರ ದೃಶ್ಯಗಳು ಕಾಣಿಸಿಗುತ್ತವೆ. ಪದ್ಮಜಾ ನಾಯ್ಡು ಪ್ರಾಣಿ ಸಂಗ್ರಹಾಲಯದಲ್ಲಿ ಕೆಂಪು ಪಾಂಡಾ ಹಾಗೂ ಹಿಮ ಚಿರತೆಗಳನ್ನು ಕಾಣಬಹುದು. **ಕರ್ನಾಟಕದ ಕೊಡಗು:** ದಕ್ಷಿಣ ಭಾರತದ ಸ್ಕಾಟ್ಲೆಂಡ್ ಎಂದು ಪ್ರಸಿದ್ಧವಾಗಿರುವ ಕೊಡಗು (ಕೂರ್ಗ್) ಬೇಸಿಗೆಯ ವಿಹಾರಕ್ಕೆ ಸೂಕ್ತ ತಾಣವಾಗಿದೆ. ಮಡಿಕೇರಿಯ ರಾಜಾಸೀಟ್‌ನಲ್ಲಿ ಸುಂದರ ಸೂರ್ಯಾಸ್ತ ಮತ್ತು ಉದ್ಯಾನವನ, ಅಬ್ಬೆ ಫಾಲ್ಸ್, ಐತಿಹಾಸಿಕ ಮಡಿಕೇರಿ ಕೋಟೆ, ಪುರಾತನ ಓಂಕಾರೇಶ್ವರ ದೇವಸ್ಥಾನ, ಮಂಡಲ್ಪಟ್ಟಿ ವ್ಯೂ ಪಾಯಿಂಟ್ ಮತ್ತು ಜೀಪ್ ಸಫಾರಿಗೆ ಸೂಕ್ತವಾದ ಎತ್ತರದ ಬೆಟ್ಟವಾಗಿದೆ. ಕುಶಾಲನಗರದ ವ್ಯಪ್ತಿಯಲ್ಲಿ ಬರುವ ದುಬಾರೆ ಆನೆ ಶಿಬಿರ, ರಾಫ್ಟಿಂಗ್, ಕಾವೇರಿ ನಿಸರ್ಗಧಾಮ, ಬಿದಿರಿನ ಕಾಡು ಮತ್ತು ದ್ವೀಪ ಗಮನಸೆಳೆಯುತ್ತದೆ. ಬೈಲಕುಪ್ಪೆ ಟಿಬೆಟಿಯನ್ ಬೌದ್ಧ ವಿಹಾರ, ತಲಕಾವೇರಿ ಕಾವೇರಿ ನದಿಯ ಉಗಮ ಸ್ಥಾನ ಹಾಗೂ ಬ್ರಹ್ಮಗಿರಿ ಬೆಟ್ಟಗಳ ನಡುವೆ ಇರುವ ಇರ್ಪು ಜಲಪಾತ, ಕೊಡಗಿನ ಅತ್ಯಂತ ಎತ್ತರದ ಬೆಟ್ಟ ತಡಿಯಂಡಮೋಳ್ ಬೆಟ್ಟ, ನಾಗರಹೊಳೆ ರಾಷ್ಟ್ರೀಯ ಉದ್ಯಾನವನ, ವನ್ಯಜೀವಿ ಸಫಾರಿ ಹಾಗೂ ಸುಂದರ ಕಾಫಿ ತೋಟಗಳಿಗೆ ಭೇಟಿ ನೀಡಬಹುದು. ಈ ಆಕರ್ಷಣೀಯ ತಾಣಗಳು ಖಂಡಿತವಾಗಿಯೂ ನೋಡಲೇಬೇಕಾದ ಸ್ಥಳಗಳಾಗಿವೆ.

**ತಮಿಳುನಾಡಿನ ಊಟಿ:** ಹಚ್ಚ ಹಸಿರಿನ, ಸುಂದರವಾದ ಸರೋವರಗಳು ಹಾಗೂ ಎತ್ತರದ ಬೆಟ್ಟಗಳು ಊಟಿಯ ವಿಶಿಷ್ಟ ಲಕ್ಷಣಗಳಾಗಿವೆ. ಇದು ನೀಲಗಿರಿ ಪರ್ವತಗಳ ಮಧ್ಯೆ ಇದೆ. ಬೇಸಿಗೆಯಲ್ಲಿ ಸರೋವರಗಳು ಹಾಗೂ ಟೀ ತೋಟಗಳು ಮನಕ್ಕೆ ಖುಷಿ ನೀಡುತ್ತವೆ.

## ಬೇಸಿಗೆಯಲ್ಲಿ ಇಡ್ಲಿ/ದೋಸೆ ಹಿಟ್ಟು ಹಾಳಾಗದಂತೆ ತಡೆಯುವುದು ಹೇಗೆ?

ಇಡ್ಲಿ ಅಥವಾ ದೋಸೆ ಹಿಟ್ಟು (ಬ್ಯಾಟರ್) ಹುದುಗುವಿಕೆಯಿಂದ ಅದರ ಪೌಷ್ಟಿಕಾಂಶದ ಗುಣಗಳು ಗಮನಾರ್ಹವಾಗಿ ಹೆಚ್ಚಾಗುತ್ತದೆ. ಆದರೆ ಅತಿಯಾದ ಹುದುಗುವಿಕೆ ಯಾವುದೇ ಖಾದ್ಯಕ್ಕೆ ಅಹಿತಕರ ಹುಳಿ ರುಚಿ ನೀಡುತ್ತದೆ. ಇದರ ನಡುವೆ, ಬೇಸಿಗೆಯಲ್ಲಿ ಗೃಹಿಣಿಯರಿಗೆ ಹೊಸ ಆತಂಕ ಶುರುವಾಗುತ್ತದೆ. ಹಿಂದಿನ ರಾತ್ರಿ ರುಬ್ಬಿಕೊಂಡು ಪಾತ್ರೆಯಲ್ಲಿ ಸಂಗ್ರಹಿಸಿಟ್ಟುಕೊಂಡ ಹಿಟ್ಟು ಬೆಳಗಿನ ಹೊತ್ತಿಗೆ ಹುಳಿ ವಾಸನೆ ಬಂದು ಬಿಡುತ್ತದೆ. ಈ ಸಯಮದಲ್ಲಿ ಏನು ಮಾಡಬೇಕು ಎನ್ನುವುದು ತೋಚುವುದೇ ಇಲ್ಲ. ತಾಪಮಾನ ಅಧಿಕ ಇರುವಂತಹ ಸಮಯದಲ್ಲಿ ಹುದುಗುವಿಕೆ ಪ್ರಕ್ರಿಯೆ ವೇಗಗೊಳ್ಳುತ್ತದೆ. ಇದರಿಂದ ಹಿಟ್ಟು ಬೇಗ ಹಾಳಾಗುತ್ತದೆ. ಈ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ವಿಧಾನಗಳಿಂದ ಹಿಡಿದು ಆಧುನಿಕ ಸ್ಮಾರ್ಟ್ ಕಿಚನ್ ವಿಧಾನಗಳವರೆಗೆ ಇಡ್ಲಿ ಹಿಟ್ಟು ಅತಿಯಾಗಿ ಹುದುಗುವುದನ್ನು ತಡೆಯಲು ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂಬುದನ್ನು ಅರಿತುಕೊಳ್ಳೋಣ. **ಕೈಗಳ ಬದಲಿಗೆ ಚಮಚದಿಂದ ಮಿಕ್ಸ್ ಮಾಡಿ:** ಇಡ್ಲಿ/ದೋಸೆ ಬ್ಯಾಟರ್ ಅತಿಯಾಗಿ ಹುದುಗುವುದನ್ನು ತಡೆಯಲು ನಿಮ್ಮ ಕೈಗಳಿಗಿಂತ ಚಮಚ ಬಳಸಬೇಕಾಗುತ್ತದೆ. ಏಕೆಂದರೆ, ನಮ್ಮ ಕೈಗಳು ನೈಸರ್ಗಿಕವಾಗಿ ಒಂದು ನಿರ್ದಿಷ್ಟ ಪ್ರಮಾಣದ ದೇಹದ ಶಾಖವನ್ನು ಹೊಂದಿರುತ್ತವೆ. ಇದಲ್ಲದೆ, ಬೇಸಿಗೆಯಲ್ಲಿ ತಾಪಮಾನವು ಸಾಮಾನ್ಯವಾಗಿ ಹೆಚ್ಚಾಗಿರುತ್ತದೆ. ನೀವು ಬ್ಯಾಟರ್ ಕೈಗಳಿಂದ ಬೆರೆಸಿದಾಗ ದೇಹದ ಶಾಖವು ಬ್ಯಾಟರ್‌ಗೆ ವರ್ಗಾಯಿಸಲ್ಪಡುತ್ತದೆ. ಇದರಿಂದಾಗಿ ಬ್ಯಾಕ್ಟೀರಿಯಾದ ತ್ವರಿತ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.

ಇದರ ಪರಿಣಾಮವಾಗಿ ಬ್ಯಾಟರ್ ಕೆಲವೇ ಗಂಟೆಗಳಲ್ಲಿ ಹುದುಗುತ್ತದೆ. ಸ್ಟೀಲ್ ಚಮಚದಿಂದ ಮಿಕ್ಸ್ ಮಾಡುವುದು ತಂಪಾಗಿರುವುದರಿಂದ ಬ್ಯಾಟರ್ ಅನ್ನು ಇವುಗಳ ಜೊತೆಗೆ ಬೆರೆಸುವುದರಿಂದ ಅದು ಯಾವುದೇ ಹೆಚ್ಚುವರಿ ಶಾಖಕ್ಕೆ ಒಡ್ಡಿಕೊಳ್ಳುವುದಿಲ್ಲ ಎಂದು ತಜ್ಞರು ಸಲಹೆ ನೀಡುತ್ತಾರೆ. **ಉಪ್ಪು ಸೇರಿಸಬಾರದು:** ಇಡ್ಲಿ ಬ್ಯಾಟರ್ ಹುದುಗುವಿಕೆಗೆ ಪ್ರಾಥಮಿಕ ಕಾರಣವೆಂದರೆ ಅದರೊಳಗೆ ನೈಸರ್ಗಿಕವಾಗಿ ಕಂಡುಬರುವ ಬ್ಯಾಕ್ಟೀರಿಯಾ ಹಾಗೂ ಯೀಸ್ಟ್ ಇರುವುದು. ಪರಿಣಾಮವಾಗಿ ಉಪ್ಪು ಸೇರಿಸುವುದರಿಂದ ಈ ಹುದುಗುವಿಕೆ ಪ್ರಕ್ರಿಯೆ ವೇಗಗೊಳ್ಳುತ್ತದೆ. ಬೇಸಿಗೆಯ ತಿಂಗಳುಗಳಲ್ಲಿ ಇದು ವಿಶೇಷವಾಗಿ ಸಮಸ್ಯಾತ್ಮಕವಾಗಿರುತ್ತದೆ. ತಾಪಮಾನ ಹೆಚ್ಚಿರುವಾಗ ಬ್ಯಾಟರ್‌ಗೆ ಉಪ್ಪು ಸೇರಿಸುವುದರಿಂದ ಅದು ಅತ್ಯಂತ ವೇಗವಾಗಿ ಹುದುಗುತ್ತದೆ. ಈ ಕಾರಣಕ್ಕಾಗಿ ಬ್ಯಾಟರ್ ಅನ್ನು ಸಂಗ್ರಹಿಸುವಾಗ ಉಪ್ಪು ಸೇರಿಸುವುದನ್ನು ತಡೆಯುವುದು ಒಳ್ಳೆಯದು. ನಿಮ್ಮ ಇಡ್ಲಿಗಳು ಇಲ್ಲವೇ ದೋಸೆಗಳನ್ನು ತಯಾರಿಸಲು ಸಿದ್ಧವಾಗುವ ಮೊದಲು ಉಪ್ಪನ್ನು ಸೇರಿಸುವುದು ಉತ್ತಮ. **ಐಸ್ ವಾಟರ್ ಉಪಯೋಗಿಸಿ:** ಮಿಕ್ಸರ್ ಅಥವಾ ಗ್ರೈಂಡರ್‌ನಲ್ಲಿ ಬ್ಯಾಟರ್ ರುಬ್ಬಿಕೊಳ್ಳುವಾಗ ಯಂತ್ರದ ತಿರುಗುವಿಕೆಯು ಘರ್ಷಣೆಯನ್ನು ಉಂಟುಮಾಡುತ್ತದೆ. ಇದು ಶಾಖವನ್ನು ಉತ್ಪಾದಿಸುತ್ತದೆ. ಈ ಶಾಖವು ಬ್ಯಾಕ್ಟೀರಿಯಾದ ತ್ವರಿತ ಪ್ರಸರಣವನ್ನು ವೇಗಗೊಳಿಸುತ್ತದೆ. ಇದರ ಪರಿಣಾಮವಾಗಿ ಬ್ಯಾಟರ್ ಒಂದೇ ದಿನದೊಳಗೆ ಹುದುಗಬಹುದು. ಇದನ್ನು ತಡೆಗಟ್ಟಲು ರುಬ್ಬುವಾಗ ಐಸ್ ವಾಟರ್ ಅನ್ನು ಸೇರಿಸುವುದರಿಂದ ಮಿಕ್ಸರ್‌ನಿಂದ ಉತ್ಪತ್ತಿಯಾಗುವ ಶಾಖ ನಿಯಂತ್ರಣದಲ್ಲಿಡಲು ಸಹಾಯ ಮಾಡುತ್ತದೆ. ಈ ಕಾರಣದಿಂದ ಅನೇಕ ಜನರು ಬ್ಯಾಟರ್ ತಯಾರಿಸುವಾಗ ಐಸ್ ವಾಟರ್ ಬಳಸುತ್ತಾರೆ. **ವೀಳ್ಯದ ಎಲೆ ವಿಧಾನ:** ವೀಳ್ಯದ ಎಲೆಗಳು ನೈಸರ್ಗಿಕ ಬ್ಯಾಕ್ಟೀರಿಯಾ ವಿರೋಧಿ ಹಾಗೂ ಶಿಲೀಂಧ್ರನಾಶಕ ಗುಣಗಳನ್ನು ಹೊಂದಿವೆ. ಅಡ್ವಾನ್ಸ್ ಇನ್ ಫುಡ್ ಕೆಮಿಸ್ಟ್ರಿಯಲ್ಲಿ ಪ್ರಕಟವಾದ ಅಧ್ಯಯನವು, ಈ ಗುಣಲಕ್ಷಣಗಳು ಬ್ಯಾಟರ್‌ನೊಳಗೆ ಬ್ಯಾಕ್ಟೀರಿಯಾದ ಅತಿಯಾದ ಪ್ರಸರಣ ತಡೆಯಲು ಸಹಾಯ ಮಾಡುತ್ತದೆ ಎಂದು ಹೇಳುತ್ತದೆ. ಇದರಿಂದ ವೀಳ್ಯದ ಎಲೆಯನ್ನು ಚೆನ್ನಾಗಿ ತೊಳೆದು ಬ್ಯಾಟರ್ ಹಿಡಿದಿರುವ ಪಾತ್ರೆಯೊಳಗೆ ಇಡಬೇಕಾಗುತ್ತದೆ.

ಎಲೆಯನ್ನು ತಲೆಕೆಳಗಾಗಿ ಇರಿಸಿ, ಅದರ ಕೆಳಭಾಗದಲ್ಲಿರುವ ತುಂಬು ಬ್ಯಾಟರ್‌ನೊಂದಿಗೆ ನೇರ ಸಂಪರ್ಕಿಸುವಂತಹೆ ಇರಬೇಕಾಗುತ್ತದೆ ಎಂದು ಖಚಿತಪಡಿಸಿಕೊಳ್ಳಿ. ಕಾಂಡವನ್ನು ಹರಿದು ಹಾಕಬೇಡಿ. ನೀವು ಬ್ಯಾಟರ್ ಬಳಸಲು ಸಿದ್ಧರಾದಾಗ ಮುಂದುವರಿಯುವ ಮೊದಲು ವೀಳ್ಯದ ಎಲೆ ತೆಗೆದುಹಾಕಬೇಕಾಗುತ್ತದೆ ಎಂದು ತಜ್ಞರು ತಿಳಿಸುತ್ತಾರೆ. **ರೆಫ್ರಿಜರೇಟರ್‌ನಲ್ಲಿ ಸಣ್ಣ ಪಾತ್ರೆಗಳಲ್ಲಿ ಸಂಗ್ರಹಿಸಿ:** ಇಡ್ಲಿ/ದೋಸೆ ಬ್ಯಾಟರ್ ದೊಡ್ಡ ಪಾತ್ರೆಗಳಲ್ಲಿ ಅಲ್ಲ, ಸಣ್ಣ ಪಾತ್ರೆಗಳಲ್ಲಿ ರೆಫ್ರಿಜರೇಟರ್‌ನಲ್ಲಿ ಸಂಗ್ರಹಿಸುವುದು ಉತ್ತಮ.

ಏಕೆಂದರೆ, ನಾವು ಬ್ಯಾಟರ್‌ನ ಸಂಪೂರ್ಣ ಬ್ಯಾಟರ್ ಅನ್ನು ಒಂದೇ ದೊಡ್ಡ ಪಾತ್ರೆಯಲ್ಲಿ ಇರಿಸಿದರೆ ನಮಗೆ ಬ್ಯಾಟರ್ ಬೇಕಾದಾಗಲೆಲ್ಲಾ ನಾವು ಕಂಟೇನರ್ ಅನ್ನು ಫ್ರಿಜ್‌ನಿಂದ ಹೊರತೆಗೆಯಬೇಕಾಗುತ್ತದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ನಿಮ್ಮ ಆರೋಗ್ಯದ ಸಲುವಾಗಿಯಾದರೂ ಕೂಡಬೇಡಿ. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ. ನೀವು ಭಾವಿಸಿದ್ದಕ್ಕಿಂತ ಹೆಚ್ಚಾಗಿ ನಿಮ್ಮ ಸಹೋದರರು ನಿಮ್ಮ ಅಗತ್ಯಗಳಿಗೆ ಬೆಂಬಲ ನೀಡುತ್ತಾರೆ. ವೈಯಕ್ತಿಕ ವ್ಯವಹಾರಗಳು ನಿಯಂತ್ರಣದಲ್ಲಿರುತ್ತವೆ.

**ವೃಷಭ** ನೀವು ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಶಕ್ತಿಯಾಗಿಸುತ್ತದೆ. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ಥ್ಯರಾಗಿರುತ್ತೀರಿ.

**ಮಿಥುನ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ಇಂದು ಸಾಲಗಾರನು ನಿಮಗೆ ಹೇಳದೆ ನಿಮ್ಮ ಖಾತೆಗೆ ಹಣವನ್ನು ಸೇರಿಸಬಹುದು.

**ಕರ್ಕಾಟಕ** ಕೆಲವು ಬಿಕ್ಕಟ್ಟುಗಳು ಮತ್ತು ಭಿನ್ನಾಭಿಪ್ರಾಯಗಳು ನಿಮಗೆ ಕಿರಿಕಿರಿ ಹಾಗೂ ಆತಂಕವನ್ನು ತರಬಹುದು. ಇಂದು ನಿಮಗೆ ನಿಮ್ಮ ಸಹೋದರ ಅಥವಾ ಸಹೋದರಿಯ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆ ಇದೆ ವೈಯಕ್ತಿಕ ಜೀವನದ ಜೊತೆಗೆ ನೀವು ಧರ್ಮಾರ್ಥ ಕಾರ್ಯಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ.

**ಸಿಂಹ** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ಇಂದು ವ್ಯಾಪಾರದಲ್ಲಿ ಉತ್ತಮ ಲಾಭವನ್ನು ಗಳಿಸುವ ಸಾಧ್ಯತೆ ಇದೆ. ಇಂದಿನ ದಿನ ನೀವು ನಿಮ್ಮ ವ್ಯಾಪಾರಕ್ಕೆ ಹೊಸ ಎತ್ತರವನ್ನು ನೀಡಬಹುದು. ಮನೆಯ ಸೌಂದರ್ಯದ ಜೊತೆಗೆ ಮಕ್ಕಳ ಅಗತ್ಯ ಗಳನ್ನೂ ನೋಡಿಕೊಳ್ಳಿ.

**ಕನ್ಯಾ** ಒಬ್ಬ ಸಂತನಿಂದ ಆಧ್ಯಾತ್ಮಿಕ ಜ್ಞಾನ ಸಾಂತ್ವನ ಮತ್ತು ಆರಾಮವನ್ನು ಒದಗಿಸುತ್ತದೆ. ಇತರರ ಮಾತುಗಳನ್ನು ನಂಬಿ ಇಂದು ಹೂಡಿಕೆ ಮಾಡಿದಲ್ಲಿ ಇಂದು ಆರ್ಥಿಕ ನಷ್ಟದ ಸಾಧ್ಯತೆ ಇದೆ. ನಿಮ್ಮನ್ನು ನೀವೇ ಮುದ್ದಿಸಿಕೊಳ್ಳಲು ಮತ್ತು ನೀವು ಹೆಚ್ಚು ಆನಂದಿಸುವ ಕೆಲಸಗಳನ್ನು ಮಾಡಲು ಒಳ್ಳೆಯ ದಿನ.

**ತುಲಾ** ನಿಮ್ಮ ಕೋಪ ಕಡ್ಡಿಯನ್ನು ಗುಡ್ಡ ಮಾಡಬಹುದು–ಇದು ನಿಮ್ಮ ಕುಟುಂಬದ ಸದಸ್ಯರ ಅಸಮಾಧಾನಕ್ಕೆ ಕಾರಣವಾಗುತ್ತದೆ. ಕೋಪವನ್ನು ನಿಯಂತ್ರಣದಲ್ಲಿಡುವುದನ್ನು ಕಲಿತ ಆ ಮಹಾನ್ ಆತ್ಮಗಳೇ ಅದೃಷ್ಟಶಾಲಿಗಳು. ನಿಮ್ಮ ಕೋಪ ನಿಮ್ಮನ್ನು ಸುಡುವ ಮೊದಲು ನೀವೇ ಅದನ್ನು ಸುಟ್ಟುಬಿಡಿ.

**ವೃಶ್ಚಿಕ** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ವೆಚ್ಚದ ಏರಿದರೂ ಆದಾಯದಲ್ಲಿನ ಹೆಚ್ಚಳ ನಿಮ್ಮ ಖರ್ಚುಗಳನ್ನು ನೋಡಿಕೊಳ್ಳುತ್ತದೆ. ಮಕ್ಕಳಲ್ಲಿ ನಿಮಗೆ ರೋಮಾಂಚಕ ಸುದ್ದಿ ತರಬಹುದು. ನಿಮ್ಮ ಪ್ರೀತಿ ಒಂದು ಹೊಸ ಎತ್ತರವನ್ನು ತಲುಪುತ್ತದೆ.

**ಧನಸ್ಸು** ಚಾಲನೆ ಮಾಡುವಾಗ ಎಚ್ಚರವಹಿಸಿ. ನೀವು ನಿಮ್ಮ ಸ್ನೇಹಿತರೊಂದಿಗೆ ಎಲ್ಲಿಗಾದರೂ ಸುತ್ತಾಡಲು ಹೋಗುತ್ತಿದ್ದರೆ, ಹಣವನ್ನು ಚೆನ್ನಾಗಿಯೋಚಿಸಿ ಖರ್ಚು ಮಾಡಿ. ಹಣದ ನಷ್ಟವಾಗಬಹುದು. ಹಳೆಯ ಸಂಪರ್ಕಗಳು ಮತ್ತು ಸಂಬಂಧಗಳ ಪುನಶ್ಚೇತನಕ್ಕೆ ಒಳ್ಳೆಯ ದಿನ.

**ಮಕರ** ಮನೆಯಲ್ಲಿ ಒತ್ತಡ ನಿಮಗೆ ಸಿಟ್ಟು ತರಿಸಬಹುದು. ಅವುಗಳನ್ನು ದಮನಗೊಳಿಸುವುದು ಕೇವಲ ದೈಹಿಕ ಸಮಸ್ಯೆಯನ್ನು ಹೆಚ್ಚಿಸುತ್ತದೆ. ದೈಹಿಕ ಚಟುವಟಿಕೆಯೊಂದಿಗೆ ಇದನ್ನು ತೊಡೆದುಹಾಕಿ. ಕಿರಿಕಿರಿಯುಂಟುಮಾಡುವ ಪರಿಸ್ಥಿತಿಯಿಂದ ಹೊರಬರುವುದು ಉತ್ತಮ.

**ಕುಂಭ** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ಆಲೋಚಿಸದೆ ನೀವು ಯಾರಿಗೂ ತಮ್ಮ ಹಣವನ್ನು ಕೊಡಬಾರದು, ಇಲ್ಲದಿದ್ದರೆ ನೀವು ಮುಂಬರುವ ಸಮಯದಲ್ಲಿ ದೊಡ್ಡ ತೊಂದರೆಗೊಳಗಾಗಬಹುದು.

**ಮೀನ** ಸಂತೋಷದ ದಿನಕ್ಕಾಗಿ ಮಾನಸಿಕ ಒತ್ತಡವನ್ನು ತಪ್ಪಿಸಿ. ಮನರಂಜನೆ ಅಥವಾ ಹೊರನೋಟದ ಸುಧಾರಣೆಗಾಗಿ ಹೆಚ್ಚು ಖರ್ಚು ಮಾಡಬೇಡಿ. ನಿಮ್ಮ ಸಾಮಾಜಿಕ ಜೀವನವನ್ನು ನಿರ್ಲಕ್ಷಿಸಬೇಡಿ. ಇದು ನಿಮ್ಮ ಒತ್ತಡ ನಿವಾರಿಸುವುದಲ್ಲದೇ ಆದರೆ ನಿಮ್ಮ ಹಿಂಜರಿಕೆಯನ್ನೂ ತೆಗೆದುಹಾಕುತ್ತದೆ.

# ಪಿಎಂಇಜಿಪಿ ಅರ್ಜಿ ವಿಲೇವಾರಿ ಮಾಡಿ

## ಯಾವುದೇ ಕಾರಣಕ್ಕೂ ಸಾಲಕ್ಕೆ ಹೊಂದಾಣಿಕೆ ಮಾಡಬಾರದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚನೆ

• **ಉದಯವಾಹಿನಿ ಧಾರವಾಡ:**

ಪ್ರಧಾನಮಂತ್ರಿ ಉದ್ಯೋಗ ಸೃಜನ ಕಾರ್ಯಕ್ರಮ (ಪಿಎಮ್‌ಇಜಿಪಿ) ಯೋಜನೆಯಡಿ 142 ಅರ್ಜಿಗಳು ಬ್ಯಾಂಕುಗಳಲ್ಲಿ ಬಾಕಿ ಇವೆ. ಸಂಬಂಧಿತ ಬ್ಯಾಂಕುಗಳು ಆದ್ಯತೆ ಮೇರೆಗೆ ತಕ್ಷಣ ವಿಲೇವಾರಿ ಮಾಡಬೇಕು ಎಂದು ಬ್ಯಾಂಕ್ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ನೇಹಲ್ ಸೂಚನೆ ನೀಡಿದರು. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಬ್ಯಾಂಕರ್ಸ್ ಸಮಿತಿ ಹಾಗೂ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಮಿತಿ (ಡಿಎಲ್‌ಆರ್‌ಸಿ) ಸಭೆಯಲ್ಲಿ ಮಾತನಾಡಿದರು. ಸರ್ಕಾರದ ಸಹಾಯಧನ (ಸಬ್ಸಿಡಿ) ಹಣವನ್ನು ಸಾಲದ ಮೊತ್ತಕ್ಕೆ ಹೊಂದಾಣಿಕೆ ಮಾಡಲಾಗುತ್ತಿದೆ ಎಂದು ಅನೇಕರು ದೂರು ನೀಡಿದ್ದಾರೆ. ಸಬ್ಸಿಡಿ ಹಣವನ್ನು ಯಾವುದೇ ಕಾರಣಕ್ಕೂ ಸಾಲಕ್ಕೆ ಹೊಂದಾಣಿಕೆ ಮಾಡಬಾರದು ಎಂದು ನಿರ್ದೇಶನ ನೀಡಿದರು.

ಸಾಲ ವಸೂಲಾತಿ ನಿಟ್ಟಿನಲ್ಲಿ ರೈತರಿಗೆ ಕಿರುಕುಳ ನೀಡಬಾರದು. ಬ್ಯಾಂಕ್‌ಗಳವರು ಗ್ರಾಮ ಪಂಚಾಯಿತಿ ಹಾಗೂ ಗ್ರಾಮ ಮಟ್ಟದಲ್ಲಿ ಸಭೆಗಳನ್ನು ಆಯೋಜಿಸಿ, ರೈತರಿಗೆ ಸಾಲ ಮರುಪಾವತಿ ಕುರಿತು ಜಾಗೃತಿ ಮೂಡಿಸಬೇಕು ಎಂದರು.

ಜಿಲ್ಲಾ ಪಂಚಾಯಿತಿ ಸಿಇಒ ಭುವನೇಶ ಪಾಟೀಲ ಮಾತನಾಡಿ, ಜನರು ಸಾಲಕ್ಕಾಗಿ ಅರ್ಜಿ ಸಲ್ಲಿಸಿದಾಗ ಬ್ಯಾಂಕ್‌ಗಳವರು ಸರಿಯಾಗಿ ಸ್ಪಂದಿಸಬೇಕು.



ಉದಯವಾಹಿನಿ ಚಿತ್ರ

> ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಬಸವರಾಜ ಗಡಾದವರ ಮಾತನಾಡಿ, 2025–26ನೇ ಹಣಕಾಸು ವರ್ಷದಲ್ಲಿ ಜಿಲ್ಲೆಯ ಬ್ಯಾಂಕ್‌ಗಳಿಗೆ 13,790 ಕೋಟಿ ಸಾಲ ವಿತರಣೆ ಗುರಿ ನೀಡಲಾಗಿತ್ತು. 14,827 ಕೋಟಿ ಸಾಲ ವಿತರಿಸಿ ಗುರಿ ಮೀರಿ ಸಾಧನೆ ಮಾಡಿವೆ ಎಂದು ತಿಳಿಸಿದರು.
> –ಧಾರವಾಡ ಜಿಲ್ಲಾಧಿಕಾರಿ ಸ್ನೇಹಲ್

ಸಾಲ ಮಂಜೂರಾತಿಗೆ ತ್ವರಿತವಾಗಿ ಕ್ರಮ ವಹಿಸಬೇಕು ಎಂದರು. ನಬಾರ್ಡ್ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕ ಮಯೂರ್ ಕಾಂಬಳೆ ಮಾತನಾಡಿ, ಕಳೆದ ಹಣಕಾಸು ವರ್ಷದಲ್ಲಿ ಜಿಲ್ಲೆಯಲ್ಲಿ ಒಟ್ಟು ಸಾಲ ವಿತರಣೆ 11,800 ಕೋಟಿಯಿಂದ 14,800 ಕೋಟಿಗೆ ಏರಿಕೆಯಾಗಿದೆ. ಎಂಎಸ್‌ಎಂಇ ಕ್ಷೇತ್ರದಲ್ಲಿ 1,500 ಕೋಟಿ, ಕೃಷಿ ಕ್ಷೇತ್ರದಲ್ಲಿ 1,000 ಕೋಟಿ ಹೆಚ್ಚಳವಾಗಿದೆ ಎಂದು ತಿಳಿಸಿದರು. ಪಿಎಂ ಸೂರ್ಯಘರ್ ಯೋಜನೆ ಸೇರಿದಂತೆ ಸೌರಶಕ್ತಿ ಆಧಾರಿತ ಘಟಕಗಳಿಗೆ ಬ್ಯಾಂಕ್‌ಗಳ ಮೂಲಕ ಹೆಚ್ಚಿನ ಹಣಕಾಸು ಸೌಲಭ್ಯ ಒದಗಿಸಲಾಗುತ್ತಿದೆ.

### 225 ಕೋಟಿ ಯೋಜನೆ ಅನುಷ್ಠಾನವಾಗಲಿ

ಐದು ವರ್ಷಗಳ ಅವಧಿಗೆ ಸಮಗ್ರ ಕೃಷಿ ಪದ್ಧತಿ ಯೋಜನೆ ಜಾರಿಗೆ ತರಲು ನಿರ್ಧರಿಸಲಾಗಿದೆ. ಕೆಜಿಬಿ ಬ್ಯಾಂಕ್‌ನ 10 ಶಾಖೆಗಳನ್ನು ಗುರುತಿಸಲಾಗಿದೆ. ಧಾರವಾಡ, ಕುಂದಗೋಳ, ನವಲಗುಂದ ಹಾಗೂ ಅಣ್ಣಿಗೇರಿ ಭಾಗಗಳಲ್ಲಿ 15 ಸಾವಿರ ರೈತರನ್ನು ಒಳಗೊಂಡಂತೆ 225 ಕೋಟಿ ವೆಚ್ಚದಲ್ಲಿ ಈ ಯೋಜನೆ ಅನುಷ್ಠಾನವಾಗಲಿದೆ ಎಂದರು.

ನವಲಗುಂದ ಹಾಗೂ ಅಣ್ಣಿಗೇರಿ ಭಾಗಗಳಲ್ಲಿ ಕೃಷಿ ಹೊಂಡಗಳ ನಿರ್ಮಾಣಕ್ಕೆ ಉತ್ತಮ ಸ್ಪಂದನೆ ದೊರಕಿದೆ ಎಂದರು. ಆರ್‌ಬಿಐ ಸಹಾಯಕ ಪ್ರಧಾನ ವ್ಯವಸ್ಥಾಪಕ ಅರುಣ, ಬ್ಯಾಂಕ್ ಆಫ್ ಬರೋಡಾ ಹುಬ್ಬಳ್ಳಿ ಶಾಖೆಯ ಸಹಾಯಕ ಪ್ರಧಾನ ವ್ಯವಸ್ಥಾಪಕ ಹರ್ಷ ಇದ್ದರು.

## ಅಂಕೋಲಾ ತೈಲ ದರ ಏರಿಕೆ

• **ಉದಯವಾಹಿನಿ ಅಂಕೋಲಾ:**

ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆ ಮುಗಿದ ತಕ್ಷಣ ಕಳೆದ ಹತ್ತು ದಿನಗಳಲ್ಲಿ ನಾಲ್ಕು ಬಾರಿ ಪೆಟ್ರೋಲಿಯಂ ಉತ್ಪನ್ನಗಳಾದ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಸಿಎನ್‌ಜಿ ದರಗಳನ್ನು ವಿಪರೀತ ಏರಿಸಿರುವುದು ರೈತಾಪಿ ಜನರು ಸೇರಿ ದೇಶದ ಜನಸಾಮಾನ್ಯರಿಗೆ ತೀವ್ರ ಸಂಕಷ್ಟ ತಂದೊಡ್ಡಿದೆ. ಕೇಂದ್ರ ಸರ್ಕಾರ ಕೂಡಲೇ ಬೆಲೆ ಏರಿಕೆಯನ್ನು ವಾಪಸ್ ಪಡೆಯಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಉತ್ತರ ಕನ್ನಡ ಜಿಲ್ಲಾ ಸಮಿತಿ ಬುಧವಾರ ಅಂಕೋಲಾ ತಹಶೀಲ್ದಾರ್ ಅವರ ಮೂಲಕ ಪ್ರಧಾನಿಗೆ ಮನವಿ ಮಾಡಿದೆ.

ಪ್ರಾಂತ ರೈತ ಸಂಘ ಜಿಲ್ಲಾ ಘಟಕದ ಅಧ್ಯಕ್ಷ ಶಾಂತಾರಾಮ ನಾಯಕ ಮಾತನಾಡಿದರು. ಏರಿಕೆಯನ್ನು ಕೈ ಬಿಡಬೇಕೆಂದು ಮನವಿ ಸಲ್ಲಿಸಿದರು. ರೈತ ಸಂಘದ ಜಿಲ್ಲಾ ಘಟಕದ ಉಪಾಧ್ಯಕ್ಷರಾದ ತಿಮ್ಮಪ್ಪ ಗೌಡ, ಗೌರೀಶ ನಾಯಕ, ಜಂಟಿ ಕಾರ್ಯದರ್ಶಿ ಸಂತೋಷ ನಾಯ್ಕ ಜಿಲ್ಲಾ ಸಮಿತಿ ಸದಸ್ಯರಾದ ಬುಜಂಗ ಚಿಟ್ಟಿಕರ, ಬಾಬು ಹರಿಕಂತ್ರ, ಗಣಪತಿ ಸಿದ್ದಿ, ಉದಯ ನಾಯ್ಕ, ನಿತ್ಯಾನಂದ ಎನ್. ಸಿದ್ದಿ, ವಿನೋದ ನಾಯ್ಕ ಇದ್ದರು.

## ವೀರಶೈವ ಕಲ್ಯಾಣ ಮಂಟಪ ಮುಂದುವರಿದ ಕಾಮಗಾರಿಗೆ

• **ಉದಯವಾಹಿನಿ, ನವಲಗುಂದ:**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 2025–26ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ವೀರಶೈವ ಕಲ್ಯಾಣ ಮಂಟಪದ ಮುಂದುವರಿದ ಕಾಮಗಾರಿಗೆ ಚಾಲನೆ ಸಿಕ್ಕಿದೆ. ಈ ಪವಿತ್ರ ಕೇಂದ್ರವು ಸರ್ವ ಸೌಲಭ್ಯಗಳೊಂದಿಗೆ ಸಾರ್ವಜನಿಕರ ಸೇವೆಗೆ ಮುಡಿಪಾಗಲಿ' ಎಂದು ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಹೇಳಿದರು. ಪಟ್ಟಣದ ವೀರಶೈವ ಲಿಂಗಾಯತ ಸಮುದಾಯ ಭವನದ ಮುಂದುವರಿದ ಕಾಮಗಾರಿಯ ಭೂಮಿಪೂಜೆ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

'ವೀರಶೈವ ಲಿಂಗಾಯತ ಕಲ್ಯಾಣ ಮಂಟಪವು ಕೇವಲ ಒಂದು ಸಿಮೆಂಟ್ ಕಾಂಕ್ರೀಟ್ ಕಟ್ಟಡವಲ್ಲ. ಅದು ಇಡೀ ಸಮಾಜದ ಒಗ್ಗಟ್ಟು ಮತ್ತು ಶ್ರಮದ ಪ್ರತೀಕವಾಗಿದೆ' ಎಂದರು. ಶಾಸಕ ಎನ್.ಎಚ್.ಕೋನರಡ್ಡಿ, ಮಾಜಿ ಶಾಸಕ ಆರ್.ಬಿ.ಶಿರಿಯಣ್ಣವರ, ಪ್ರಮುಖರಾದ ವಿಜಯ ಕುಲಕರ್ಣಿ, ಸೇರಿದಂತೆ ಸಮಾಜದ ಮುಖಂಡರು ಇದ್ದರು.

## ಪ್ರತ್ಯೇಕ ಪಾಲಿಕೆ ರಚನೆ ಅಧಿಸೂಚನೆ: 9 ಕ್ಕೆ ಗಡುವು

• **ಉದಯವಾಹಿನಿ, ಧಾರವಾಡ:**

'ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವಿಭಜಿಸಿ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆ ಪ್ರಸ್ತಾವಕ್ಕೆ ರಾಜ್ಯಪಾಲರು ಷರತ್ತುಬದ್ಧ ಅನುಮೋದನೆ ನೀಡಿದ್ದಾರೆ. ರಾಜ್ಯ ಸರ್ಕಾರವು ಷರತ್ತುಗಳನ್ನು ಪೂರೈಸಿ ಜೂನ್ 9 ರೊಳಗೆ ಅಂತಿಮ ಅಧಿಸೂಚನೆ ಪ್ರಕಟಿಸಲು ಕ್ರಮ ವಹಿಸದಿದ್ದರೆ, ಹೋರಾಟ ತೀವ್ರಗೊಳಿಸುತ್ತೇವೆ' ಎಂದು ವಕೀಲ ಬಿ.ಡಿ. ಹಿರೇಮಠ ಹೇಳಿದರು. ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟಗಾರ ವೇದಿಕೆ ವತಿಯಿಂದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಭವನದಲ್ಲಿ ನಡೆದ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸುವವರೆಗೂ ಅನಿರ್ದಿಷ್ಟಾವಧಿ ಧರಣಿ ಮುಂದುವರೆಯಲಿದೆ. ಪಾಲಿಕೆಯ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಸದಸ್ಯರು (ಧಾರವಾಡದವರು) ಪಕ್ಷಾತೀತವಾಗಿ ನಿರಂತರವಾಗಿ ಅಹೋರಾತ್ರಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕು' ಎಂದರು.

'ಪ್ರತ್ಯೇಕ ಪಾಲಿಕೆಗಾಗಿ ಮೇ 29 ರಂದು ಬೈಕ್ ರ‍್ಯಾಲಿ ನಡೆಯಲಿದೆ. ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ರ‍್ಯಾಲಿಯಲ್ಲಿ ಪಾಲ್ಗೊಂಡು ಶಕ್ತಿ ಪ್ರದರ್ಶಿಸಬಹುದು' ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಧಾರವಾಡ ಹೋಟೆಲ್ ಒಡೆಯರ್ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಮಹೇಶ ಶೆಟ್ಟಿ ಮಾತನಾಡಿ,'ರಾಜ್ಯಪಾಲರು ಪ್ರಸ್ತಾವಕ್ಕೆ ಷರತು ಬದ್ಧವಾಗಿ ಅನುಮೋದನೆ ನೀಡಿದ್ದಾರೆ. ಧಾರವಾಡ ಬಂದ್ ಮಾಡಿದರೆ ಸಾರ್ವಜನಿಕರಿಗೆ ತೊಂದರೆ ಆಗಲಿದೆ. ಅಂತಿಮ ಅಧಿಸೂಚನೆ ಪ್ರಕಟಣೆಗೆ ರಾಜ್ಯ ಸರ್ಕಾರಕ್ಕೆ ಕೆಲವು ದಿನ ಗಡುವು ನೀಡುವುದು ಒಳಿತು' ಎಂದರು.

ಪ್ರತ್ಯೇಕ ಪಾಲಿಕೆ ಅಂತಿಮ ಅಧಿಸೂಚನೆ ಹೊರಡಿಸಲು ಯಾವುದೇ ತೊಂದರೆ ಇಲ್ಲ. ರಾಜ್ಯ ಸರ್ಕಾರ ಕ್ರಮ ವಹಿಸಬೇಕು' ಎಂದು ಮಾಜಿ ಸಭಾಪತಿ ವೀರಣ್ಣ ಮತ್ತಿಕಟ್ಟಿ ತಿಳಿಸಿದರು. ಅನಿರ್ದಿಷ್ಟಾವಧಿ ಧರಣಿ ಬುಧವಾರಕ್ಕೆ 13 ದಿನ ಪೂರೈಸಿತು. ನಾಮದೇವ ಸಂಪಿ ಸಮಾಜ, ಕಟ್ಟಡ ಕಾರ್ಮಿಕರ ಸಂಘಟನೆ, ಬ್ರಾಹ್ಮಣ ಸಮಾಜ, ಜಯ ಕರ್ನಾಟಕ ಸಂಘಟನೆಯವರು ಹೋರಾಟಕ್ಕೆ ಬೆಂಬಲ ನೀಡಿದರು.

## ಅಹಿಂದ ಮುಖಂಡರ ಆಗ್ರಹ

• **ಉದಯವಾಹಿನಿ, ಬಳ್ಳಾರಿ:**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇನ್ನೂ ಎರಡು ವರ್ಷಗಳ ಕಾಲ ಹುದ್ದೆಯಲ್ಲಿ ಮುಂದುವರಿಯಬೇಕು ಎಂದು ಕುರುಬ ಸಮಾಜದ ಹಾಗೂ ಅಹಿಂದ ಸಂಘಟನೆ ಮುಖಂಡರು ಆಗ್ರಹಿಸಿದ್ದಾರೆ.

ನಗರದ ಜಿಲ್ಲಾ ಕುರುಬ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಕುರುಬ ಸಂಘದ ಅಧ್ಯಕ್ಷ ಡಾ.ಪಿ.ಎಲ್.ಗಾದಿಲಿಂಗನಗೌಡ, ಪ್ರಧಾನ ಕಾರ್ಯದರ್ಶಿ ಅಲ್ಲಿಪುರದ ಕೆ.ಮೋಹನ್ ಮೊದಲಾದವರು.

ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳಿರುವ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ತಮ್ಮ ನಿರ್ಧಾರವನ್ನು ಬದಲಿಸದಿದ್ದರೆ 2028ರ ಚುನಾವಣೆಯಲ್ಲಿ ಕುರುಬ ಸಮಾಜ ಹಾಗೂ ಅಹಿಂದ ವರ್ಗದ ಶಕ್ತಿಯನ್ನು ಕಾಂಗ್ರೆಸ್ಗೆ ತೋರಿಸಲಾಗುವುದು ಎಂದು ಎಚ್ಚರಿಸಿದರು.

ಅಹಿಂದ ಸಂಘಟನೆ

ಸಿದ್ದರಾಮಯ್ಯ ಅವರು ಜನಪರ ಯೋಜನೆಗಳ ಮೂಲಕ ಎಲ್ಲಾ ವರ್ಗಗಳ ವಿಶ್ವಾಸ ಗಳಿಸಿದ್ದಾರೆ. ಅವರನು ಸಿಎಂ ಸ್ಥಾನದಿಂದ ತೆಗೆದು ಹಾಕುವ ನಿರ್ಧಾರವನ್ನು ತಕ್ಷಣ ಹಿಂಪಡೆಯಬೇಕೆಂದರು.

ಪ್ರಧಾನ ಕಾರ್ಯದರ್ಶಿ ಕೆ. ಮೋಹನ್ ಮಾತನಾಡಿ, ನಿರ್ಧಾರವನ್ನು ಬದಲಾಯಿಸದಿದ್ದರೆ ಅಹಿಂದ ಹಾಗೂ ಕುರುಬ ಸಮಾಜ ಬೀದಿಗಿಳಿದು ಹೋರಾಟ ನಡೆಸಲಿದೆ ಎಂದು ಎಚ್ಚರಿಸಿದರು. ಅಲ್ಲದೆ ಕಾಂಗ್ರೆಸ್ ಪಕ್ಷಕ್ಕೆ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುವುದಾಗಿ ಹೇಳಿದರು.

## ಅಕ್ರಮ ಪಡಿತರ ಸಾಗಣೆ ಪ್ರಕರಣ

• **ಉದಯವಾಹಿನಿ, ಬಳ್ಳಾರಿ,:**

ಕುರುಗೋಡು ಪೊಲೀಸ್ ಠಾಣಾ ವ್ಯಾಪ್ತಿಯ ಬಾದನಹಟ್ಟಿ ಗ್ರಾಮದ ಹತ್ತಿರ ಯಲ್ಲಾಪುರ ರಸ್ತೆ ಕಡೆ ಇರುವ ನಂದಿ ಲೇಔಟ್ನಲ್ಲಿ (1) ಯಸ್ವಾಮಿ ಯರಿಶಂಕರಗೌಡ ವಾಸ ಕುರುಗೋಡು, (2) ಉಮೇಶ ಉಮಾಶಂಕರ ವಾಸ ಕುರುಗೋಡು ಇವರುಗಳು ಅಕ್ರಮವಾಗಿ ಪಡಿತರ ಅಕ್ಕಿ ಚೀಲಗಳನ್ನು ಸಂಗ್ರಹಿಸಿ (3) ವೀರಭದ್ರ ವಾಸ ಮಾನ್ವಿ (4) ವಿನೋಧ ವಾಸ ಮಾನ್ವಿ ರವರಿಗೆ ಸಾಗಾಣಿಕೆ ಮಾಡಲು ಲಾರಿ ನಂ–ಕೆಎ–36 ಸಿ–5899 ನೇದ್ದರಲ್ಲಿ ಪಡಿತರ ಅಕ್ಕಿ ಚೀಲಗಳನ್ನು ಲೋಡ್ ಮಾಡಿ ನಿಲ್ಲಿಸಿದಾಗ ಕುರುಗೋಡು ಪೊಲೀಸ್ ಠಾಣೆಯ ಪಿ.ಎಸ್.ಐ. ಸುಪ್ರೀತ್ ವಿ. ಸಿಬ್ಬಂದಿಯವರಾದ ಶಿವರಾಯಪ್ಪ, ಪಕ್ಕೀರಪ್ಪ, ರಾಮಚಂದ್ರ ಮತ್ತು ಆಹಾರ ನಿರೀಕ್ಷಕರಾದ ಶ್ರೀ ಮಲ್ಲಿಕಾರ್ಜುನ ಪಿ. ರವರುಗಳು ಜಂಟಿಯಾಗಿ ದಾಳಿ ಮಾಡಿ. 5,52,500/–ರೂ. ಬೆಲೆಯ ಒಟ್ಟು 22,100 ಟನ್ ಪಡಿತರ ಅಕ್ಕಿ ಮತ್ತು 10,00,000(10ಲಕ್ಷ)ರೂ. ಮೌಲ್ಯದ ಆಶೋಕ್ ಲೈಲ್ಯಾಂಡ್ ಕಂಪನಿಯ ಲಾರಿಯನ್ನು ಜಪ್ತಿಪಡಿಸಿಕೊಳ್ಳಲಾಗಿದೆ. ಈ ಘಟನೆಯ ಕುರಿತು ಕುರುಗೋಡು ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 124/2026 ಕಲಂ 3, 7, 6(ಎ) ಇ. ಸಿ. ಯಾಕ್ಟ್ ಅನ್ವಯ ಪ್ರಕರಣ ದಾಖಲಿಸಲಾಗಿದೆ.

## ಮತಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿ:ಶಾಸಕ ರಾಜುಗೌಡ

• **ಉದಯವಾಹಿನಿ, ತಾಳಿಕೋಟೆ :**

ದೇವರ ಹಿಪ್ಪರಗಿ ಮತಕ್ಷೇತ್ರದ ಜನರ ಒಡನಾಡಿಯಾಗಿ ಬೆಳೆದು ಬಂದವನು ನಾನಾಗಿದ್ದೇನೆ ಈ ಕ್ಷೇತ್ರ ಮಾದರಿಯ ಕ್ಷೇತ್ರವನ್ನಾಗಿ ಮಾಡಬೇಕೆಂಬ ಆಶಾಭಾವನೆ ಹೊಂದಿದ್ದೇನೆ ಗ್ಯಾರೆಂಟಿ ಯೋಜನೆಗಳಿಂದ ಅನುದಾನದ ಕೊರತೆ ಸಾಕಷ್ಟು ಇದ್ದು ಇದರ ಮಧ್ಯವೂ ಮತಕ್ಷೇತ್ರದ ಅಭಿವೃದ್ಧಿ ಮಾಡಬೇಕೆಂಬ ಗುರಿಯನ್ನು ಹೊಂದಿದ್ದೇನೆಂದು ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕ ರಾಜುಗೌಡ ಪಾಟೀಲ(ಕು.ಸಾಲವಾಡಗಿ) ಅವರು ಹೇಳಿದರು. ತಾಲ್ಲೂಕಿನ ಮೈಲೇಶ್ವರ ಗ್ರಾಮದಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕಾ ಪಂಚಾಯತ್ ರಾಜ್ಯ ಹಣಕಾಸು ಆಯೋಗ ಅನಿರ್ಬಂದಿತ ಅನುದಾನದಲ್ಲಿ 18 ಲಕ್ಷ ರೂ.ವೆಚ್ಚದಲ್ಲಿ ನೂತನ ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಗೆಹಾಗೂ 50 ಲಕ್ಷ ರೂ.ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡುತ್ತಿದ್ದ ಅವರು ಮತಕ್ಷೇತ್ರದಲ್ಲಿ ಅನೇಕ ಕೆಲಸಗಳು ಆಗಬೇಕಿದೆ ಗ್ಯಾರೆಂಟಿ ಯೋಜನೆಯಿಂದ ಅನುದಾನ ಸಿಗುವದರಲ್ಲಿ ಕೊರತೆ ಉಂಟಾಗುತ್ತದೆ ಸಿಕ್ಕ ಅನುದಾನದಲ್ಲಿ ಕ್ಷೇತ್ರದ ಜನರಿಗೆ ಅವಶ್ಯವಿರುವ ಮೂಲಭೂತ

> ಶಾಸಕ ರಾಜುಗೌಡ ಪಾಟೀಲ ಅವರು ಶಾಸಕ ರಾಜುಗೌಡ ಪಾಟೀಲ ಅವರು ಕೊಟ್ಟ ಮಾತಿನಂತೆ ನಡೆದುಕೊಳ್ಳುವವರಾಗಿದ್ದಾರೆ ಅವರು ಬರವಸೆಯ ನಾಯಕರಾಗದೇ ಇಡೇರಿಸುವ ನಾಯಕರಾಗಿದ್ದಾರೆ.
> –ಜೆಡಿಎಸ್ ಪಕ್ಷದ ತಾಲ್ಲೂಕಾ ಅಧ್ಯಕ್ಷ ಮಡುಸಾಹುಕಾರ ಬಿರಾದಾರ



ಉದಯವಾಹಿನಿ ಚಿತ್ರ

ಸೌಕರ್ಯಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ ಮತಕ್ಷೇತ್ರದ ಎಲ್ಲಾಗ್ರಾಮಗಳಿಗೆ ಸುಸರ್ಜಿತ ರಸ್ತೆ ಅಲ್ಲದೇ ಕುಡಿಯುವ ನೀರಿನ ಸೌಲಬ್ಯ ಮತ್ತು ಜನರ ಆರೋಗ್ಯವಂತ ಬಧುಕಿಗಾಗಿ ಮೊದಲು ಆದ್ಯತೆ ನೀಡಿ ಕೆಲಸ ಮಾಡುತ್ತಿದ್ದೇನೆ ನಿಮ್ಮೆಲ್ಲರ ಸಹಕಾರ ಪ್ರೀತಿ ನನಗೆ ಇನ್ನಷ್ಟು ಕೆಲಸ ಮಾಡಲು ಶಕ್ತಿ ನೀಡಿದೆ ಕ್ಷೇತ್ರದ ಜನರು ನನ್ನ ಮೇಲಿಟ್ಟು ವಿಸ್ವಾಸಕ್ಕೆ ಚುತಿ ಬರದ ರೀತಿಯಲ್ಲಿ ಕೆಲಸಗಳನ್ನು ಮಾಡುವೆಂದರು.

## ಭಟ್ಕಳ ನದಿ ದುರಂತ: ತನಿಖೆಗೆ ಆಗ್ರಹ

• **ಉದಯವಾಹಿನಿ, ಹೊನ್ನಾವರ:**


ಭಟ್ಕಳ ತಾಲ್ಲೂಕಿನ ಅಳ್ವೆಕೋಡಿಯಲ್ಲಿ ಈಚೆಗೆ ಸಂಭವಿಸಿದ 11 ಜನರ ಸಾವಿನ ದುರಂತಕ್ಕೆ ಸಂಬಂಧಿಸಿದ ಕಾರಣ ತಿಳಿಯಲು ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಸಾಮಾಜಿಕ ಕಾರ್ಯಕರ್ತ ಮಾಸ್ತಪ್ಪ ನಾಯ್ಕ ಜಿಲ್ಲಾಧಿಕಾರಿಯನ್ನು ಆಗ್ರಹಿಸಿದ್ದಾರೆ. ವೆಂಕಟಾಪುರ ನದಿಯಲ್ಲಿ ಈ ರೀತಿಯ ದುರ್ಘಟನೆ ಸಂಭವಿಸಿದ ನಿದರ್ಶನಗಳಿಲ್ಲ. ಹೆಬಳೆಯ ವೆಂಕಟಾಪುರ ಕುಕ್ನೀರ್ ಭಾಗದಲ್ಲಿ ನದಿಗೆ ಅಡ್ಡಲಾಗಿ ಕಟ್ಟಲಾಗುತ್ತಿರುವ ಸೇತುವೆ ಕಾಮಗಾರಿಗಾಗಿ ತಡೆಗೋಡೆ ನಿರ್ಮಿಸಿರುವುದು ನದಿಯ ಬಲಬಾಗದಲ್ಲಿ ನೀರು ಹರಿಯುವಿಕೆ ಕಡಿಮೆಯಾಗುವಂತೆ ಮಾಡಿದೆ.

## ಕಳಿನಕಟ್ಟೆ ನದಿ ದುರಂತ: 15 ಲಕ್ಷ ನೆರವಿಗೆ ಆಗ್ರಹ

• **ಉದಯವಾಹಿನಿ, ಶಿರಸಿ:**

ಭಟ್ಕಳದ ಕಳಿನಕಟ್ಟೆ ನದಿಯಲ್ಲಿ ಇತ್ತೀಚೆಗೆ ಸಂಭವಿಸಿದ ಭೀಕರ ದುರಂತದಲ್ಲಿ ದುರ್ಮರಣಕ್ಕೀಡಾದ ಕಾರ್ಮಿಕರ ಕುಟುಂಬಗಳಿಗೆ ಹೆಚ್ಚಿನ ಪರಿಹಾರ ನೀಡುವಂತೆ ಒತ್ತಾಯಿಸಿ ಜಿಲ್ಲಾ ಜನಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಉಪವಿಭಾಗಾಧಿಕಾರಿ ಚಂದ್ರಶೇಖರ ಆರ್.ಜಿ. ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಒಕ್ಕೂಟದ ಮುಖ್ಯಸ್ಥ ನಾಗೇಶ ನಾಯ್ಕ ಕಾಗಾಲ ಮಾತನಾಡಿ, ಕಳಿನಕಟ್ಟೆ ನದಿಯಲ್ಲಿ ಚಿಪ್ಪಿಕಲ್ಲು ತೆಗೆಯಲು ಹೋಗಿದ್ದ 14 ಜನರಲ್ಲಿ 9 ಮಹಿಳೆಯರು ಹಾಗೂ 2 ಪುರುಷರು ಸೇರಿದಂತೆ ಒಟ್ಟೂ 11 ಜನ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದು, ಉಳಿದ ಅಸ್ವಸ್ಥರು ಮಣಿಪಾಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ದುರಂತದಲ್ಲಿ ಜೀವ ಕಳೆದುಕೊಂಡವರೆಲ್ಲರೂ ಜೀವನೋಪಾಯಕ್ಕಾಗಿ ಕಪ್ಪೆಚಿಪ್ಪು ತೆಗೆಯುವ, ಮೀನು ಹಿಡಿಯುವ ಉಪಕಸುಬಿನೊಂದಿಗೆ ಕೃಷಿ, ರೈಸ್ ಮಿಲ್ ಹಾಗೂ ಆಶಾ ಕಾರ್ಯಕರ್ತೆಯರಾಗಿ ಕೆಲಸ ಮಾಡುತ್ತಿದ್ದ ಕಡುಬಡವರಾಗಿದ್ದಾರೆ.

ಸದ್ಯ ಇವರ ಕುಟುಂಬದಲ್ಲಿ ಮಕ್ಕಳು ಮತ್ತು ವಯೋವೃದ್ಧರೇ ಉಳಿದುಕೊಂಡಿದ್ದು, ಅನಾಥರಾಗಿ ಬೀದಿಗೆ ಬೀಳುವಂತಾಗಿದೆ. ಸರ್ಕಾರ ಘೋಷಿಸಿರುವ ಮೊತ್ತವು ಈ ಘೋರ ಸಂಕಷ್ಟಕ್ಕೆ ಅತ್ಯಲ್ಪವಾಗಿದ್ದು, ಇನ್ನೂ ಹೆಚ್ಚಿನ ನೆರವಿನ ಅಗತ್ಯವಿದೆ' ಎಂದು ತಿಳಿಸಿದರು.



ಉದಯವಾಹಿನಿ ಚಿತ್ರ

ಮೀನುಗಾರಿಕೆಯಲ್ಲಿ ಪ್ರಾಣಾಪಾಯಕ್ಕೀಡಾದವರಿಗೆ ಜಿಲ್ಲಾಡಳಿತವು ಸಂಕಷ್ಟ ಪರಿಹಾರ ನಿಧಿಯಡಿ 15 ಲಕ್ಷಕ್ಕೂ ಹೆಚ್ಚಿನ ಪರಿಹಾರ ನೀಡುವ ಮಾದರಿಯಲ್ಲೇ, ಕಾಯಕ ನಂಬಿ ಬದುಕುತ್ತಿದ್ದ ಈ ಎಲ್ಲಾ ದುರಂತ ಕುಟುಂಬಗಳಿಗೂ ತಲಾ 15 ಲಕ್ಷಕ್ಕೂ ಹೆಚ್ಚಿನ ಪರಿಹಾರ ಧನ ವಿತರಿಸಬೇಕು' ಎಂದು ಒಕ್ಕೂಟದ ಪ್ರಮುಖರು ಸರ್ಕಾರವನ್ನು ಒತ್ತಾಯಿಸಿದರು.

## ಒತ್ತುವರಿ ತೆರವಿಗೆ ಆಗ್ರಹ: ಕೆಆರ್‌ಎಸ್ ನೇತೃತ್ವದಲ್ಲಿ ಪ್ರತಿಭಟನೆ

• **ಉದಯವಾಹಿನಿ, ಬೇಲೂರು:**

ಪಟ್ಟಣದ ಹೊಸನಗರದಲ್ಲಿ ಒತ್ತುವರಿಯಾಗಿರುವ ತನ್ನ ಜಾಗವನ್ನು ಬಿಡಿಸಿಕೊಡಬೇಕೆಂದು ಆಗ್ರಹಿಸಿ ಮಧು ಹಾಗೂ ಅವರ ಕುಟುಂಬಸ್ಥರು ಕೆಆರ್ ಎಸ್ ಪಕ್ಷದ ನೇತೃತ್ವದಲ್ಲಿ ಬುಧವಾರ ಇಲ್ಲಿನ ಪುರಸಭೆ ಮುಂಭಾಗ ಪ್ರತಿಭಟನೆ ನಡೆಸಿದರು. ಮಧು ಮಾತನಾಡಿ, ನಮ್ಮ ತಾಯಿ ಪದ್ಮ ಅವರಿಗೆ ಆಶ್ರಯ ಯೋಜನೆಯಡಿ ಹೊಸನಗರದಲ್ಲಿ 422ನೇ ನಿವೇಶನ ಮಂಜೂರಾಗಿತ್ತು .

ಆ ಜಾಗದಲ್ಲಿ ಸಣ್ಣ ಮನೆ ನಿರ್ಮಿಸಿಕೊಂಡು ಕೆಲಕಾಲ ವಾಸವಾಗಿದ್ದು, ನಂತರ 2012ರಲ್ಲಿ ಹೊಸ ಮನೆ ನಿರ್ಮಿಸುವ ಉದ್ದೇಶದಿಂದ ಹಳೆಯ ಮನೆಯನ್ನು ತೆರವುಗೊಳಿಸಿ ಫೌಂಡೇಶನ್ ಹಾಕಲಾಗಿದೆ. ಆದರೆ ಪಕ್ಕದ ನಿವೇಶನದ ಮಾಲೀಕರು ನಮ್ಮ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ, ಕಳೆದ ಒಂದು ವರ್ಷದಿಂದ ಈ ಬಗ್ಗೆ ಪುರಸಭೆಗೆ ದೂರು ನೀಡಿದ್ದರೂ ಸಹ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದರು. ಕೆಆರ್‌ಎಸ್ ಪಕ್ಷದ ತಾಲ್ಲೂಕು ಘಟಕದ ಅಧ್ಯಕ್ಷ ಆದೇಶ್ ಮಾತನಾಡಿ, ಯಾರೇ ಪ್ರಭಾವಿಗಳಾಗಿರಲಿ, ಮತ್ತೊಬ್ಬರ ಜಾಗವನ್ನು ಒತ್ತುವರಿ ಮಾಡುವ ಹಕ್ಕಿಲ್ಲ. ಪುರಸಭೆ ಕಂದಾಯ ವಸೂಲಿ ಮಾಡುತ್ತಿರುವುದರಿಂದ, ಜಾಗ ರಕ್ಷಣೆ ಮಾಡುವ ಜವಾಬ್ದಾರಿಯೂ ಅವರದ್ದೇ ಅಗಿದೆ.



ಉದಯವಾಹಿನಿ ಚಿತ್ರ

ಒಂದು ವರ್ಷದಿಂದ ಜಾಗ ಕಳೆದುಕೊಂಡವರು ಪುರಸಭೆ ಕಚೇರಿಗೆ ಅಲೆದಾಡುತ್ತಿದ್ದರೂ ಸಮಸ್ಯೆ ಬಗೆಹರಿಸದಿರುವುದು ದುರಂತ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಡವರು ನ್ಯಾಯ ಕೇಳಿಕೊಂಡು ಬಂದಾಗ ಸಹಾಯ ಮಾಡಲಾಗದಿದ್ದರೆ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಏಕೆ ಬೇಕು ಎಂದು ಪ್ರಶ್ನಿಸಿದರು. ಕೆಆರ್‌ಎಸ್ ಪಕ್ಷದ ಜಿಲ್ಲಾಘಟಕದ ಕಾರ್ಯದರ್ಶಿ ಸಚಿನ್, ಸಾಮಾಜಿಕ ಹೋರಾಟಗಾರ ಡಿ.ಕೆ.ವೆಂಕಟೇಶ್, ಇದ್ದರು.

## ಏರ್ ವಿಮಾನ ಸೇವೆಯ ಸಮಯದಲ್ಲಿ ಬದಲಾವಣೆ

• **ಉದಯವಾಹಿನಿ, ಕಲಬುರಗಿ,:**

ಜೂನ್ 10 ರಿಂದ ಆರಂಭವಾಗಲಿರುವ ಕಲಬುರಗಿ–ಬೆಂಗಳೂರು ಸ್ಟಾರ್ ಏರ್ ವಿಮಾನ ಸೇವೆಯ ಸಮಯವನ್ನು ಸಂಜೆ ವೇಳೆಯಿಂದ ಬೆಳಗಿನ ವೇಳೆಗೆ ಬದಲಾವಣೆ ಮಾಡಲಾಗಿದೆ. ಈ ಕುರಿತು ಸ್ಟಾರ್ ಏರ್ ಸಂಸ್ಥೆಯವರು ಕೆ.ಕೆ.ಸಿ.ಸಿ.ಐ ಗೆ ಮಾಹಿತಿ ನೀಡಿದ್ದು, ಕಲ್ಯಾಣ ಕರ್ನಾಟಕ ಭಾಗದ ಇನ್ನಷ್ಟು ಅನ್ವೇಷಿಸಿ ಸಾರ್ವಜನಿಕರು, ಉದ್ಯಮಿಗಳು ಹಾಗೂ ಪ್ರಯಾಣಿಕರಿಂದ ಬಂದ ಬೇಡಿಕೆ ಮತ್ತು ಕೆ.ಕೆ.ಸಿ.ಸಿ.ಐ ವತಿಯಿಂದ ಮಾಡಲಾದ ಮನವಿಯ ಹಿನ್ನೆಲೆಯಲ್ಲಿ ಬೆಳಗಿನ ವಿಮಾನ ಸೇವೆಯನ್ನು ನಿಗದಿಪಡಿಸಲಾಗಿದೆ ಎಂದು ತಿಳಿಸಿದ್ದಾರೆ. ಕಲಬುರಗಿ–ಬೆಂಗಳೂರು ಮಾರ್ಗದಲ್ಲಿ ಬೆಳಗಿನ ವಿಮಾನ ಸೇವೆ ಕಲ್ಪಿಸಬೇಕು ಎಂಬುದು ಬಹುಕಾಲದ ಸಾರ್ವಜನಿಕಬೇಡಿಕೆಯಾಗಿದ್ದು, ಈ ಕುರಿತು ಕೆ.ಕೆ.ಸಿ.ಸಿ.ಐ ನಿರಂತರವಾಗಿ ಸ್ಟಾರ್ ಏರ್ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿತ್ತು.ಇದೇ ಸಂದರ್ಭದಲ್ಲಿ, ಪ್ರಯಾಣಿಕರ ಹೆಚ್ಚುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಬೆಳಗಿನ ಸೇವೆಯಜೊತೆಗೆ ಸಂಜೆ ವೇಳೆಯಲ್ಲಿಯೂ ವಿಮಾನ ಸೇವೆಯನ್ನು ಆರಂಭಿಸುವಂತೆ ಕೆ.ಕೆ.ಸಿ.ಸಿ.ಐ ಸ್ಟಾರ್ ಏರ್ ಸಂಸ್ಥೆಯನ್ನು ಮನವಿ ಮಾಡಿದೆ. ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರದ ಉಡಾನ್ ಯೋಜನೆಯಡಿ ಕಲಬುರಗಿಯಿಂದ ಇನ್ನಷ್ಟು ನಗರಗಳಿಗೆ ವಿಮಾನ ಸಂಪರ್ಕ ವಿಸ್ತರಣೆ ಆಗಲಿ ಹಾಗೂ ಹೆಚ್ಚಿನ ವಿಮಾನ ಸೇವೆಗಳು ಲಭ್ಯವಾಗಲಿ ಎಂದು ಕೆ.ಕೆ.ಸಿ.ಸಿ.ಐ ಆಶಿಸಿದೆ.

## ಪ್ರತ್ಯೇಕ ಪಾಲಿಕೆಗಾಗಿ ಹೋರಾಟ

ಉದಯವಾಹಿನಿ ಚಿತ್ರ



• **ಉದಯವಾಹಿನಿ, ಹುಬ್ಬಳ್ಳಿ:**

ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆ ಮಾಡುವಂತೆ ನಡೆಯುತ್ತಿರುವ ಹೋರಾಟಕ್ಕೆ ಹುಬ್ಬಳ್ಳಿಯ ಸಮಾನ ಮನಸ್ಕರ ಗೆಳೆಯರ ಬಳಗ ಬೆಂಬಲ ನೀಡಿದೆ. 'ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆಯಾಗುವುದರಿಂದ ಸ್ಥಳೀಯ ಸಮಸ್ಯೆಗಳಿಗೆ ತ್ವರಿತವಾಗಿ ಪರಿಹಾರ ಸಿಗಲಿದೆ. ಎರಡೂ ನಗರಗಳ ಅಗತ್ಯಕ್ಕೆ ತಕ್ಕಂತೆ ಪ್ರತ್ಯೇಕ ಯೋಜನೆಗಳನ್ನು ರೂಪಿಸಲು ಮತ್ತು ಅಭಿವೃದ್ಧಿಗೆ ಸಹಕಾರಿಯಾಗುತ್ತದೆ' ಎಂದು ಬಳಗದ ಪ್ರಮುಖರು ಹೇಳಿದರು. ಬಳಗದಿಂದ ತಹಶೀಲ್ದಾರ್ ಕಚೇರಿ ಸಿಬ್ಬಂದಿಗೆ ಮನವಿ ಸಲ್ಲಿಸಲಾಯಿತು. ರಾಘವೇಂದ್ರ ಚಲವಾದಿ, ಗೌತಮ ಮೊರಬ ಇದ್ದರು.

# ಹೆಸರನ್ನು ಶಾಶ್ವತವಾಗಿರಿಸುವ ಕಾರ್ಯವಾಗಬೇಕು

## ದೇಶದ ಸ್ವಾತಂತ್ರ್ಯಕ್ಕಾಗಿ ಹಿರಿಯರು ಮಾಡಿದ ತ್ಯಾಗ ಬಲಿದಾನಗಳನ್ನು ನೆನಪಿಸಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯ

• **ಉದಯವಾಹಿನಿ, ಉಪ್ಪಿನಂಗಡಿ:**

ಮೊದಲ ಸ್ವಾತಂತ್ರ್ಯ ಸಂಗ್ರಾಮ ಎಂದೇ ದಾಖಲಾಗಿದ್ದ 1857 ರ ಹೋರಾಟಕ್ಕಿಂತ 20 ವರ್ಷ ಮೊದಲೇ ಅಂದರೆ 1837 ರಲ್ಲಿ ಬ್ರಿಟೀಷರ ವಿರುದ್ಧ ಹೋರಾಟ ನಡೆಸಿ ಹುತಾತ್ಮರಾದ ಉಪ್ಪಿನಂಗಡಿಯ ಮಂಜ ಬೈದ್ಯ ರವರ ದೇಶಪ್ರೇಮ ಭರಿತ ಹೋರಾಟ 190 ವರ್ಷಗಳ ಬಳಿಕ ಮುನ್ನಲೆಗೆ ಬರುವಂತಾಗಿರುವುದು ವಿಶೇಷ. ಆದರೂ ಅವರ ಹೆಸರನ್ನು ಶಾಶ್ವತಗೊಳಿಸುವ ಕಾರ್ಯದತ್ತ ಚಿತ್ತವಿರಿಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವೆಂದು ಸಂಸದ, ಮಾಜಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು. ಉಪ್ಪಿನಂಗಡಿಯ ನೇತ್ರಾವತಿ ಸಭಾ ಭವನದಲ್ಲಿ ಕ್ರಾಂತಿವೀರ ಮಂಜ ಬೈದ್ಯ ಸಂಸ್ಮರಣಾ ಸಮಿತಿ ಮತ್ತು ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ ಬೆಳ್ತಂಗಡಿ ಇವುಗಳ ಆಶ್ರಯದಲ್ಲಿ ನಡೆದ ಕ್ರಾಂತಿವೀರ ಮಂಜ ಬೈದ್ಯ ಸಂಸ್ಕರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು ದೇಶದ ಸ್ವಾತಂತ್ರ್ಯಕ್ಕಾಗಿ ಹಿರಿಯರು ಮಾಡಿದ ತ್ಯಾಗ ಬಲಿದಾನಗಳನ್ನು ನೆನಪಿಸಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯವಾಗಿದ್ದು, ಮಂಜ ಬೈದ್ಯರ ಸಂಸ್ಕರಣೆ ಮಾಡುವ ಈ ದಿನ ನಮ್ಮೆಲ್ಲರ ಬದುಕಿನ ಸಾರ್ಥಕ್ಯ ಕ್ಷಣವಾಗಿದೆ. ಮಂಜ ಬೈದ್ಯರ ನೆನಪನ್ನು ಈ ಸಮಾಜದಲ್ಲಿ ಶಾಶ್ವತವಾಗಿ ಅಮರವಾಗಿಸಲು ಸರಕಾರದ ನೆಲೆಯಲ್ಲಿ ಏನು ಮಾಡಬಹುದೆಂದು

> ನಮ್ಮ ಹಿರಿಯರು ಮಾಡಿದ ತ್ಯಾಗ–ಬಲಿದಾನ ಗಳಿಂದ ನಾವಿಂದು ಸ್ವಾತಂತ್ರ್ಯದ ಸವಿ ಅನುಭವಿಸುವಂತಾಗಿದೆ. ಮಂಜ ಬೈದ್ಯರು ಸೇರಿದಂತೆ ಇಂತಹ ಕ್ರಾಂತಿ ಕಾರಿ ಹೋರಾಟಗಾರರಂತೆ ಅಂದು ಇಡೀ ದೇಶವೇ ಒಂದಾಗುತ್ತಿದ್ದರೆ ಬ್ರಿಟೀಷರು ನಮ್ಮನ್ನು ಆಳ್ವಿಕೆ ಮಾಡಲು ಸಾಧ್ಯವಿರುತ್ತಿರಲಿಲ್ಲ. ಮಂಜ ಬೈದ್ಯರ ಬಲಿದಾನ ಮುನ್ನಲೆಗೆ ಬರಲು 190 ವರ್ಷಗಳು ಬೇಕಾಯಿತು.
> –ವಿಧಾನ ಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್

ನಾನು ಹಾಗೂ ಮಂಗಳೂರು ಸಂಸದರಾದ ಬ್ರಿಜೇಶ್ ಚೌಟರು ಚರ್ಚಿಸಿ ಅದಕ್ಕೆ ಪೂರಕವಾದ ಕೆಲಸವನ್ನು ಮಾಡುತ್ತೇವೆ ಎಂದರು. ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ ಮಾತನಾಡಿ, ಬ್ರಿಟೀಷರ ದೌರ್ಜನ್ಯದ ವಿರುದ್ಧ ಸಿಡಿದೆದ್ದ ಮಂಜ ಬೈದ್ಯರವರು ಅಪ್ರತಿಮ ಕ್ರಾಂತಿವೀರ. ನಮ್ಮ ಸಮಾಜದವರನ್ನು ಬ್ರಿಟೀಷರ ಕಪಿ ಮುಷ್ಠಿಯಿಂದ ಪಾರು ಮಾಡಬೇಕೆಂದು ಕನಸು ಕಂಡಿದ್ದ ಅವರು ಅದಕ್ಕಾಗಿ ಪ್ರಾಣ ತ್ಯಾಗ ಮಾಡಬೇಕಾಗಿ ಬಂದಿತ್ತು. ಅವರ ನೆನಪು ಅಜಾರಾಮರ ಆಗಿ ಉಳಿಯ ಬೇಕು. ಮಾಜಿ ಶಾಸಕ ಸಂಜೀವ ಮಠಂದೂರು ಮಾತನಾಡಿ, ಮಂಜು ಬೈದ್ಯರಂತಹ ರೈತನ ಮಗನೋರ್ವನ ಹೋರಾಟ ಇತಿಹಾಸ ಪುಟಗಳಲ್ಲಿ ದಾಖಲಾಗದಂತಹ ಹುನ್ನಾರ ಅಂದು ನಡೆದಿರಬಹುದು.

ಅವರ ಹೋರಾಟ ದಂಗೆ ಅಲ್ಲ. ಅದು ಸ್ವಾಭಿಮಾನದ ಹೋರಾಟ. ಯುವಕರಲ್ಲಿನ ದೇಶಾಭಿಮಾನದಿಂದಾಗಿ ಅವರ ಅಂದಿನ ಹೋರಾಟ ಇಂದು ಮುನ್ನಲೆಗೆ ಬಂದಿದೆ. ಸುಳ್ಳು ಇತಿಹಾಸವನ್ನು ತಿರುಚಿ ನೈಜ ಇತಿಹಾಸವನ್ನು ದಾಖಲಿಸುವ ಕೆಲಸ ನಮ್ಮೆಲ್ಲರಿಂದ ಆಗಬೇಕು. ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ದ.ಕ. ಜಿಲ್ಲಾಧಿಕಾರಿ ಕಚೇರಿಗೆ ಮಂಜ ಬೈದ್ಯರ ಹೆಸರಿಡುವ ಕೆಲಸವಾಗಬೇಕು. ಈ ಮೂಲಕ ಅಂದಿನ ರೈತ ಹೋರಾಟದ ನೆನಪನ್ನು ಅಜಾರಾಮರವಾಗಿಸುವ ಕೆಲಸವಾಗಬೇಕು ಎಂದರು.



> ಬೆಳ್ತಂಗಡಿ ತಾಲ್ಲೂಕಿನಲ್ಲಿ ಸರಕಾರಿ ಕಟ್ಟಡವೊಂದಕ್ಕೆ ಮಂಜು ಬೈದ್ಯರ ಹೆಸರಿಡುವ ಕಾರ್ಯಕ್ಕೆ ನಿಮ್ಮೆಲ್ಲರ ಸಲಹೆ ಪಡೆದು ಮುಂದುವರಿಯುತ್ತೇನೆ. ಇದರೊಂದಿಗೆ ಅವರ ಮೂಲ ಮನೆಯ ಬಳಿಯು ಸ್ಮಾರಕ ನಿರ್ಮಾಣ ಮಾಡುವ ಬಗ್ಗೆ ಹಾಗೂ ಅವರ ತತ್ವಾದರ್ಶಗಳನ್ನು ಉಳಿಸುವ ಕಾರ್ಯವಾಗಬೇಕಿದೆ. ಇದಕ್ಕೂ ನಾನು ನನ್ನಿಂದಾದ ಸಹಕಾರ ನೀಡುತ್ತೇನೆ ಎಂದರು.
> –ಕೋಟ ಶ್ರೀನಿವಾಸ ಪೂಜಾರಿ

## ವಸತಿಗೋಸ್ಕರ ಮೀಸಲಿಟ್ಟ ಜಾಗದಲ್ಲಿ ಬಾರ್ ನಿರ್ಮಾಣ

• **ಉದಯವಾಹಿನಿ, ಕೊಪ್ಪಳ:**

ಗಂಗಾವತಿ ನಗರದ ಬೈಪಾಸ್ ರಸ್ತೆಯಲ್ಲಿ ಸಿಎಲ್ 07 ಸನ್ನದ್ದು ಹೊಂದಿರುವ ಅಜಯ್ ಟೂರಿಸ್ಟ್ ಹೋಮನ ಬಾರ್ ಆಯಂಡ್ ರೆಸ್ಟೋರೆಂಟ್ ಮಾಲೀಕರು ಪರವಾನಿಗೆ ಪಡೆದುಕೊಳ್ಳಲು ನಕಲಿ ದಾಖಲೆಗಳಿಂದ ಅಕ್ರಮ ಮಾಡಿದ್ದಾರೆ ಎನ್ನುವ ಕಾರಣಕ್ಕೆ ಬಾರ್ ರೆಸ್ಟೋರೆಂಟ್ ಬಂದ್ ಮಾಡಿ, ಮದ್ಯದ ಬಾಟಲ್ ವಶಕ್ಕೆ ಪಡೆದುಕೊಳ್ಳಲು ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ. ಮದ್ಯ ಪ್ರಿಯರಿಗೆ ಮದ್ಯ ಸರಬರಾಜು ಮಾಡುವ ಉದ್ದೇಶದಿಂದ ಅಬಕಾರಿ ಇಲಾಖೆಯವರು ಸಿಎಲ್ 02, ಸಿಎಲ್ 07, ಸಿಎಲ್ 09 ರಂತೆ ವಿವಿಧ ಬಗೆಯ ಪರವಾನಿಗೆಯನ್ನು ನೀಡಲಾಗುತ್ತಿದೆ. ಅದರಂತೆ ಸನ್ನದ್ದುದಾರರು ಸೂಕ್ತ ದಾಖಲೆಗಳನ್ನು ಸಲ್ಲಿಕೆ ಮಾಡಬೇಕಾಗುತ್ತದೆ. ಆದರೆ, ನಗರದಲ್ಲಿ ಬಾರ್ ರೆಸ್ಟೋರೆಂಟ್ ನಡೆಸಲು ಸಿಎಲ್ 07 ಪರವಾನಿಗೆಯನ್ನು ಪಡೆದುಕೊಂಡಿರುವ ಅಜಯ್ ಟೂರಿಸ್ಟ್ ಹೋಮ್‌ನ ಮಾಲೀಕರು ವಸತಿ ಉದ್ದೇಶಕ್ಕೋಸ್ಕರ ಮೀಸಲಿಟ್ಟ ಜಾಗದಲ್ಲಿ ಬಾರ್ ರೆಸ್ಟೋರೆಂಟ್ ನಡೆಸಲು ಸುಳ್ಳು ದಾಖಲೆಗಳ ಸಲ್ಲಿಕೆ ಮಾಡಿ, ಅಬಕಾರಿ ಇಲಾಖೆಯ ಅಧಿಕಾರಿಗಳನ್ನು ಯಾಮಾರಿಸಿ ಪರವಾನಿಗೆ ಪಡೆದುಕೊಳ್ಳಲಾಗಿದೆ. ದೂರುದಾರನ ದೂರಿನ ಮೇರೆಗೆ ದಾಖಲೆ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿಗಳಿಗೆ ಸತ್ಯಾಂಶ ಬಯಲಾಗಿದೆ.